# ಜನತಾವಾಣಿ

ಸಂಪಾದಕರು :
ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ನವೆಂಬರ್ 08, 2024

ಸಂಪುಟ : 51 ಸಂಚಿಕೆ : 175 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


## ಸುಳ್ಳು ಕೇಸ್ ಹಾಕಿಸಿ ಷಡ್ಯಂತ್ರ

### ಪ್ರಧಾನಿ ಮೋದಿ, ಅಮಿತ್ ಷಾ ವಿರುದ್ಧ ಸಿದ್ದರಾಮಯ್ಯ ಆರೋಪ

ಬೆಂಗಳೂರು, ನ. 7 - ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಷಾ ನನ್ನನ್ನು ಮುಗಿಸಲು ಮುಂದಾಗಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಗುರುತರ ಆರೋಪ ಮಾಡಿದ್ದಾರೆ.

ರಾಜ್ಯದಲ್ಲಿ ನಡೆಯುತ್ತಿರುವ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಪರ ಪ್ರಚಾರ ಸಂದರ್ಭದಲ್ಲಿ, ನನ್ನ ಮೇಲೆ ಇಲ್ಲಸಲ್ಲದ ಸುಳ್ಳು ಕೇಸ್ ಹಾಕಿಸಿ ಷಡ್ಯಂತ್ರ ನಡೆಸುತ್ತಿದ್ದಾರೆ. ನಾನು ನಿರಂತರವಾಗಿ ಈ ಇಬ್ಬರು ನಾಯಕರ ನೀತಿ ಮತ್ತು ಸುಳ್ಳುಗಳನ್ನು ಹಾಗೂ ರಾಜ್ಯಕ್ಕೆ ಅವರು ಮಾಡುತ್ತಿರುವ ಅನ್ಯಾಯವನ್ನು ಟೀಕಿಸಿದ್ದಕ್ಕೆ ನನಗೆ ಇಂತಹ ಪ್ರತಿಫಲ ದೊರೆತಿದೆ ಎಂದು ಹೇಳಿದ್ದಾರೆ.

ನಾನು ಇವರುಗಳ ಯಾವ ಷಡ್ಯಂತ್ರಕ್ಕೂ ಜಗ್ಗುವುದೂ ಇಲ್ಲ, ಬಗ್ಗುವುದೂ ಇಲ್ಲ, ನಮ್ಮ ಸರ್ಕಾರ ಇನ್ನೂ ಮೂರೂವರೆ ವರ್ಷಗಳ ಕಾಲ ಆಡಳಿತ ನಡೆಸಿ, ಮತ್ತೆ ನಾವೇ ಅಧಿಕಾರಕ್ಕೆ ಬರುತ್ತೇವೆ ಎಂದು ಹೇಳಿದ್ದಾರೆ.

ಮಹಾರಾಷ್ಟ್ರದಲ್ಲಿ ತಮ್ಮ ಕಿಚಡಿ ಸರ್ಕಾರವನ್ನು ಮತ್ತೆ ಅಧಿಕಾರಕ್ಕೆ ತರಲು ಕರ್ನಾಟಕ ಸರ್ಕಾರದ ಮೇಲೆ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ. ಬಿಜೆಪಿ ಮಹಾರಾಷ್ಟ್ರದ ಜನರನ್ನು ಸರಣಿ ಸುಳ್ಳುಗಳ ಮೂಲಕ ವಂಚಿಸುತ್ತಿದೆ, 'ವಾದಾ ದಿಯಾ: ಪೂರಾ ಕಿಯಾ' ಎಂದು ಅವರ ಸುಳ್ಳು ಜಾಹೀರಾತಿಗೆ ಕಿಡಿ ಕಾರಿದರು.

ಕರ್ನಾಟಕದಲ್ಲಿ ಮಹಿಳೆಯರಿಗೆ ಉಚಿತ ಬಸ್ ಪಾಸ್ ಭರವಸೆ ನೀಡಿತ್ತು, ಅದನ್ನು ಈಡೇರಿಸಲಾಗಿದೆ. ಯೋಜನೆಯನ್ನೇ ಇನ್ನೂ ಆರಂಭಿಸದೆ, ವಂಚಿಸಿದೆ ಎಂಬ ಅರ್ಥದಲ್ಲಿ ಪರಮ ಸುಳ್ಳಿನ ಜಾಹೀರಾತುಗಳನ್ನು ಬಿಜೆಪಿ ಪುಟಗಟ್ಟಲೆ ನೀಡುತ್ತಿದೆ. ಬಿಜೆಪಿಯವರಿಗೆ ಸುಳ್ಳೇ ಮನೆ ದೇವರು, ರಾಜ್ಯದಲ್ಲಿ ಶಕ್ತಿ ಯೋಜನೆ ಸೇರಿದಂತೆ ಐದಕ್ಕೆ ಐದೂ ಗ್ಯಾರಂಟಿಗಳು ಯಶಸ್ವಿಯಾಗಿ ನಡೆದುಕೊಂಡು ಹೋಗುತ್ತಿವೆ ಎಂದು ಸಿದ್ದರಾಮಯ್ಯ ಹೇಳಿದರು.

ಗೃಹ ಲಕ್ಷ್ಮಿ ಯೋಜನೆಯ ಮುಂದಿನ ಕಂತಿನ ಹಣ ಒಂದೆರಡು ದಿನಗಳಲ್ಲೇ ಬಿಡುಗಡೆಯಾಗಲಿದೆ. ಆದರೆ, ಬಿಜೆಪಿಯವರು ಸುಳ್ಳುಗಳನ್ನು ಹರಡಿಸುತ್ತಾ, ಅದಕ್ಕಾಗಿ ಕೋಟಿ ಕೋಟಿ ರೂ. ವೆಚ್ಚ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

## ವಿದ್ಯಾರ್ಥಿ ಭವನ ವೃತ್ತ ಆಗಲಿದೆ ಜರ್ಮನ್ ಮಾದರಿ



ದಾವಣಗೆರೆ, ಜೂ.7 - ವಿದ್ಯಾರ್ಥಿ ಭವನ ವೃತ್ತದಿಂದ ಚಿಗಟೇರಿ ಜಿಲ್ಲಾಸ್ಪತ್ರೆಗೆ ತೆರಳುವ ರಸ್ತೆಯಲ್ಲಿ ಪುಟ್ಟದೊಂದು ಕಾಮಗಾರಿ ನಡೆಯುತ್ತಿದೆ. ಕಳೆದ ಕೆಲ ವರ್ಷಗಳಿಂದ ರಸ್ತೆ ಅಗೆತ ನೋಡಿದ್ದ ಜನತೆ ಇದೂ ಸಹ ಅಂತಹದ್ದೇ ಗುಂಡಿ ಅಗೆತ ಎಂದು ಕಣ್ಣಾಯಿಸಿ ತೆರಳುತ್ತಿದ್ದಾರೆ.

ಆದರೆ, ಈ ಕಾಮಗಾರಿಯಲ್ಲೊಂದು ವಿಶೇಷವಿದೆ. ಅದು 'ಜರ್ಮನ್ ಮಾದರಿ' ಹೌದು, ಇದೇ ಪ್ರಥಮ ಬಾರಿಗೆ ದಾವಣಗೆರೆಯಲ್ಲಿ ಜರ್ಮನ್ ಮಾದರಿಯನ್ನು ಈ ವೃತ್ತದ ಮೂಲಕ ಪರಿಚಯಿಸಲಾಗುತ್ತಿದೆ.

ದಾವಣಗೆರೆ ರಸ್ತೆಗಳು ಹಾಗೂ ವೃತ್ತಗಳಿಗೆ ವಿದೇಶಿ ಮಾದರಿಯಲ್ಲಿ ಅಭಿವೃದ್ಧಿ ಪಡಿಸಬೇಕು ಎನ್ನುವುದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಕನಸು.

ಈಗಾಗಲೇ ವೈಟ್ ಸಿಮೆಂಟ್ ರಸ್ತೆಗಳನ್ನು ನಿರ್ಮಿಸಿ ಅಭಿವೃದ್ಧಿಗೆ ಮುನ್ನುಡಿ ಬರೆದಿರುವ ಸಚಿವ ಎಸ್ಸೆಸ್ಸೆಂ ಅವರೀಗ ಜರ್ಮನ್ ಮಾದರಿ ವೃತ್ತವನ್ನು ಪರಿಚಯಿಸುತ್ತಿದ್ದಾರೆ.

ಸಚಿವರ ಆಶಯದಂತೆ ಪ್ರಾಯೋಗಿಕವಾಗಿ ವಿದ್ಯಾರ್ಥಿ ಭವನ ವೃತ್ತದ ಮೊದಲ ಭಾಗವಾಗಿ ಜಿಲ್ಲಾಸ್ಪತ್ರೆಗೆ ಕಡೆ ತೆರಳುವ ಸುಮಾರು 50 ಅಡಿ ಅಗಲದ ರಸ್ತೆಯಲ್ಲಿ 25 ಅಡಿಯಲ್ಲಿ ಕಾಮಗಾರಿ ನಡೆಯುತ್ತಿದೆ.

ಅಂದ ಹಾಗೆ ಕಲ್ಲು, ಸಿಮೆಂಟ್, ಕೆಮಿಕಲ್ ವಸ್ತುಗಳಿಂದ (3ನೇ ಪುಟಕ್ಕೆ)

## ಹಿರಿಮೆ-ಗರಿಮೆ ಹೊಂದಿದ ಕ್ಷೇತ್ರ 'ರಂಗಭೂಮಿ'



### ರಂಗ ನಾಟಕಗಳ ಸಂಸ್ಕೃತಿ ಮತ್ತೆ ಮರುಕಳಿಸುವಂತೆ ಮಾಡಿದ ಅಭಿನಯ ಪ್ರದರ್ಶನ

ದಾವಣಗೆರೆ, ನ. 7 - ರಂಗ ವೈಶಿಷ್ಟ್ಯ ಮೆರೆದ ಮೇರು ಸಂಸ್ಕೃತಿಯ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕಗಳು ಇತ್ತೀಚಿನ ಆಧುನಿಕತೆಯ ಭರಾಟೆಯಲ್ಲಿ ಕಣ್ಮರೆಯಾಗುತ್ತಿರುವ ಈ ಸಂದರ್ಭದಲ್ಲಿ ರಂಗಾಸಕ್ತರಿಗೆ ನಾಟ್ಯ ಸಂಗೀತ, ರಂಗಗೀತೆಗಳ ಗಾಯನದ ಮೂಲಕ ರಂಗ ನಾಟಕಗಳ ಸಂಸ್ಕೃತಿಯನ್ನು ಮತ್ತೆ ಮರುಕಳಿಸುವಂತೆ ಮಾಡಿದ್ದು 'ಅಭಿನಯ ಸಂಗೀತ ಪ್ರದರ್ಶನ' ಇದಕ್ಕೆ ನಗರದ ಶಿವಯೋಗಾಶ್ರಮ ಆವರಣದ ರಂಗ ವೇದಿಕೆ ಸಾಕ್ಷಿಯಾಗಿದ್ದು ವಿಶೇಷ.

ದಾವಣಗೆರೆ ವೃತ್ತಿ ರಂಗಭೂಮಿ ರಂಗಾಯಣ ಕಳೆದ ಹದಿನೈದು ದಿನಗಳಿಂದ ರಂಗ ಸಂಗೀತ, ವೃತ್ತಿರಂಗ ಗೀತೆಗಳ ಕಲಿಕಾ ಕಾರ್ಯಾಗಾರದಲ್ಲಿ ಆಯ್ದ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ರಂಗ ಗೀತೆಗಳು ಮತ್ತು ನಾಟ್ಯ ಸಂಗೀತ ಹಿಂದಿನ ರಂಗ ವೈಭವವನ್ನು ಮತ್ತೆ ಮರುಕಳಿಸುವಂತೆ ಮಾಡುವ ಮೂಲಕ ವಿನೂತನ ರಂಗ ಪ್ರಯೋಗಕ್ಕೆ ನಾಂದಿ ಹಾಡಿದ್ದಾರೆ.

ಧಾರವಾಡದ ಹಿರಿಯ ರಂಗ ನಿರ್ದೇಶಕ ಡಾ.ಪ್ರಕಾಶ ಗರುಡ ಮತ್ತು ಮತ್ತೊಬ್ಬ ಯುವ ರಂಗ ನಿರ್ದೇಶಕ ರಾಘವ ಕಮ್ಮಾರ ಅವರ ರಂಗ ತರಬೇತಿಯಲ್ಲಿ ಪಳಗಿದ ರಾಜ್ಯದ ವಿವಿಧ ಜಿಲ್ಲೆಗಳ ಆಯ್ದ 18 ಕಲಾವಿದರು ತಮ್ಮ ಕಲಾ ಪ್ರತಿಭೆ ಮೂಲಕ ಸಹೃದಯಿ (2ನೇ ಪುಟಕ್ಕೆ)

## ಜಿಲ್ಲೆಯಲ್ಲಿ ಬೆಂಬಲ ಬೆಲೆಯಲ್ಲಿ ಮೆಕ್ಕೆಜೋಳ ಖರೀದಿ

### 11 ರಿಂದ ನೋಂದಣಿ ಪ್ರಕ್ರಿಯೆ ಆರಂಭ

ದಾವಣಗೆರೆ ನ. 7 - ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ ವತಿಯಿಂದ ರೈತರ ಆರ್ಥಿಕ ಅಭಿವೃದ್ಧಿಗೋಸ್ಕರ ಮೆಕ್ಕೆಜೋಳ ಬೆಳೆದ ರೈತರಿಗೆ ನೆರವಾಗಲು, ಕರ್ನಾಟಕ ಹಾಲು ಮಹಾಮಂಡಳಿ ರೈತರಿಂದ ಮೆಕ್ಕೆಜೋಳವನ್ನು ನೇರವಾಗಿ ಪ್ರತಿ ಕ್ವಿಂಟಾಲ್‌ಗೆ ರೂ.2400/-ರ ಬೆಲೆಯಲ್ಲಿ ಖರೀದಿಸಲು ತೀರ್ಮಾನಿಸಲಾಗಿದೆ.

ಮೆಕ್ಕೆಜೋಳ ಬೆಳೆದಿರುವ ಆಸಕ್ತ ರೈತರು ಸಮೀಪದ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಒಂದು ಕೆ.ಜಿ. ಪ್ರಮಾಣದಷ್ಟು ಮೆಕ್ಕೆಜೋಳದ ಮಾದರಿಯನ್ನು ನೀಡಿ, ಫ್ರುಟ್ಸ್ ತಂತ್ರಾಂಶದಲ್ಲಿ ನೋಂದಣಿಯಾಗಿರುವ ಸಂಖ್ಯೆಯೊಂದಿಗೆ ನೋಂದಾಯಿಸಿಕೊಳ್ಳಬಹುದು. ನೋಂದಣಿ ಪ್ರಕ್ರಿಯೆಯು ನ.11 ರಿಂದ ಪ್ರಾರಂಭವಾಗುತ್ತಿದ್ದು, ದಾವಣಗೆರೆ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ಮೆಕ್ಕೆಜೋಳ ಖರೀದಿ ಕೇಂದ್ರಗಳನ್ನು ತೆರೆಯಲಾಗಿರುತ್ತದೆ.

ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಪ್ರಸ್ತುತ ಬಳಕೆ ಮಾಡುತ್ತಿರುವ ಕ್ಷೀರಸಿರಿ ಮತ್ತು ಸರ್ಕಾರದ ಕೃಷಿ ಇಲಾಖೆ ಸಿದ್ಧಪಡಿಸಿರುವ ಫ್ರುಟ್ಸ್ ತಂತ್ರಾಂಶದ ಮೂಲಕ ಮೆಕ್ಕೆಜೋಳ ಖರೀದಿ (3ನೇ ಪುಟಕ್ಕೆ)

## ಪಡಿತರ ಧಾನ್ಯ ತೂಕದ ವ್ಯತ್ಯಾಸ ಪರಿಶೀಲಿಸಿ



### ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಶಾಮನೂರು ಟಿ. ಬಸವರಾಜ್

ದಾವಣಗೆರೆ, ನ.7 - ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ಧಾನ್ಯಗಳ ವಿತರಣೆಯಲ್ಲಿ ಆಗುವ ತೂಕದ ವ್ಯತ್ಯಾಸ, ಆಹಾರ ಧಾನ್ಯಗಳ ಗುಣಮಟ್ಟ ಪರಿಶೀಲನೆ ಮಾಡುವಂತೆ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಶಾಮನೂರು ಟಿ. ಬಸವರಾಜ್ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ, ಅವರು ಯೋಜನೆಯ ಪ್ರಗತಿಯನ್ನು ಪರಿಶೀಲಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ ಇಟ್ನಾಳ್ ಮಾತನಾಡುತ್ತಾ, ಸರ್ಕಾರದ ಐದು ಗ್ಯಾರಂಟಿ ಯೋಜನೆಗಳು ಪ್ರತಿಯೊಬ್ಬ ಅರ್ಹ ನಾಗರಿಕರಿಗೂ ಸಿಗುವಂತಾಗಬೇಕು.

ಈ ಯೋಜನೆಗಳು ಯಾರಿಗೆ ತಲುಪುತ್ತಿಲ್ಲ, ಅಂತವರಿಗೆ ಈಗಾಗಲೇ ಅರಿವು ಕಾರ್ಯಕ್ರಮ ಮಾಡಲಾಗಿದೆ. ಇನ್ನೂ ವೇಗವಾಗಿ ಕಾರ್ಯನಿರ್ವಹಿಸಲಾಗುವುದು ಎಂದು ತಿಳಿಸಿದರು.

ಅನ್ನಭಾಗ್ಯ ಯೋಜನೆಯಡಿ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಟಿ.ಬಸವರಾಜ್‌ರವರು ತಹಶೀಲ್ದಾರರು ಹಾಗೂ ಉಪ ವಿಭಾಗಾಧಿಕಾರಿಗಳು ಜಂಟಿಯಾಗಿ ಎಲ್ಲಾ ನ್ಯಾಯಬೆಲೆ ಅಂಗಡಿಗಳಿಗೆ ಭೇಟಿ ನೀಡಿ, ಪಡಿತರ ವಿತರಣೆ, ಪಡಿತರ ಧಾನ್ಯಗಳ ವಿತರಣೆಯಲ್ಲಿ ಆಗುವ ತೂಕದ ವ್ಯತ್ಯಾಸ, ಆಹಾರ ಧಾನ್ಯಗಳ ಗುಣಮಟ್ಟ ಪರಿಶೀಲನೆ ಮಾಡಲು ಸೂಚಿಸಿದರು.

ಸದಸ್ಯರಾದ ಶಶಿಕಲಾಮೂರ್ತಿ ಎಂ.ಜಿ, ಸುಭಾನ್‌ಸಾಬ್, ಎಸ್.ಎಸ್ ಗಿರೀಶ್, ಡೋಲಿ ಚಂದ್ರು, ಮುಖ್ಯ ಯೋಜನಾಧಿಕಾರಿ ಮಲ್ಲಾನಾಯ್ಕ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಉಪಾಧ್ಯಕ್ಷರುಗಳಾದ ನಂಜಾನಾಯ್ಕ, ಹನೀಫ್ ಷಾ ಹಾಗೂ ಅನುಷ್ಠಾನ ಸಮಿತಿಯ ಎಲ್ಲಾ ಸದಸ್ಯರುಗಳು ಉಪಸ್ಥಿತರಿದ್ದರು.

## ಜರ್ಮನಿ : ಆಡಳಿತಾರೂಢ ಮೈತ್ರಿಕೂಟ ಪತನ

ಬರ್ಲಿನ್, ನ. 7 – ಜರ್ಮನಿಯ ಚಾನ್ಸಲರ್ ಒಲಾಫ್ ಸ್ಕಾಲ್ಜ್ ಅವರು ಹಣಕಾಸು ಸಚಿವ ಕ್ರಿಶ್ಚಿಯನ್ ಲಿಂಡ್ನರ್ ಅವರನ್ನು ಸಂಪುಟದಿಂದ ವಜಾಗೊಳಿಸಿದ್ದಾರೆ. ಇದರಿಂದಾಗಿ ಜರ್ಮನ್ ಆಡಳಿತಾರೂಢ ಮೈತ್ರಿಕೂಟ ನಾಟಕೀಯವಾಗಿ ಪತನಗೊಂಡಿದೆ. ಅಲ್ಪಮತದಲ್ಲಿ ಸರ್ಕಾರ ಮುನ್ನಡೆಸುವುದಾಗಿ ಸ್ಕಾಲ್ಜ್ ಹೇಳಿದ್ದಾರೆ.

ಸೋಷಿಯಲ್ ಡೆಮಾಕ್ರಾಟ್ ಹಾಗೂ ಗ್ರೀನ್ ಪಕ್ಷಗಳೊಂದಿಗೆ ಅಲ್ಪಮತದ ಸರ್ಕಾರ (3ನೇ ಪುಟಕ್ಕೆ)

## ಬಿ.ಎಸ್.ಇ ಸೂಚ್ಯಂಕದಲ್ಲಿ ಮತ್ತೆ ಕುಸಿತ

ಮುಂಬೈ, ನ. 7 - ಬಿ.ಎಸ್.ಇ. ಷೇರು ಸೂಚ್ಯಂಕ ಗುರುವಾರದಂದು ಶೇ.1ರ ಕುಸಿತ ಕಂಡಿದೆ. ಇದಕ್ಕೂ ಹಿಂದಿನ ಎರಡು ದಿನಗಳಲ್ಲಿ ಷೇರುಪೇಟೆಯಲ್ಲಿ ಏರಿಕೆ ಕಂಡು ಬಂದಿತ್ತು. ಗುರುವಾರ ಬಿ.ಎಸ್.ಇ. ಸೂಚ್ಯಂಕ 836.34 ಅಂಕಗಳ ಕುಸಿತ ಕಂಡು 79,541.79 ರಲ್ಲಿ ಅಂತ್ಯವಾಗಿದೆ. ಎನ್.ಎಸ್.ಇ. ನಿಫ್ಟಿ ಸೂಚ್ಯಂಕ 284.70 ಅಂಕಗಳ ಇಳಿಕೆ ಕಂಡು 24,199.35ರಲ್ಲಿ ಅಂತ್ಯವಾಗಿದೆ.

## ನೇಮಕಾತಿ ಪ್ರಕ್ರಿಯೆ ಆರಂಭಿಸಿದ ನಂತರ ಅರ್ಹತೆ ಬದಲಿಸಲಾಗದು

### ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು

ನವದೆಹಲಿ, ನ. 7- ಸರ್ಕಾರಿ ಉದ್ಯೋಗಕ್ಕೆ ನೇಮಕಾತಿ ಪ್ರಕ್ರಿಯೆ ಆರಂಭವಾದ ನಂತರ ಅರ್ಹತಾ ಮಾನದಂಡಗಳನ್ನು ಬದಲಿಸುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಐವರು ಸದಸ್ಯರ ಸಂವಿಧಾನಿಕ ಪೀಠ ಈ ತೀರ್ಪು ನೀಡಿದೆ. ನೇಮಕಾತಿ ಜಾಹೀರಾತು ಪ್ರಕಟಿಸಿದ (3ನೇ ಪುಟಕ್ಕೆ)


## ಮಾವಿನತೋಪ ಆಸ್ಪತ್ರೆ

ಶಾಮನೂರು ರಸ್ತೆ, ದಾವಣಗೆರೆ. ದೂರವಾಣಿ : 08192 222266

**ಸಾರ್ವಜನಿಕರ ಗಮನಕ್ಕೆ**

ನಮ್ಮ ಆಸ್ಪತ್ರೆಗೆ ಸಂಬಂಧಿಸಿದ ಎಲ್ಲರಿಗೂ ಈ ಮೂಲಕ ತಿಳಿಸುವುದೇನೆಂದರೆ, 01 ಜನವರಿ 2010 ರಿಂದ 31 ಡಿಸೆಂಬರ್ 2018ರವರೆಗೆ ನಮ್ಮ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಒಳ ರೋಗಿಗಳ ಕೇಸ್ ಶೀಟ್‌ಗಳನ್ನು ಕಾನೂನಿನ ಮಿತಿಗೆ ಒಳಪಟ್ಟು ವಿಲೇ ಮಾಡಲು ನಿರ್ಧರಿಸಲಾಗಿದೆ. ಈ ಬಗ್ಗೆ ಅಗತ್ಯ ಮಾಹಿತಿ ಮತ್ತು ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ 08 ಡಿಸೆಂಬರ್ 2024ರೊಳಗಾಗಿ ಸಲ್ಲಿಸತಕ್ಕದ್ದು. 09 ಡಿಸೆಂಬರ್ 2024ರ ನಂತರ ಮೇಲ್ಕಂಡ ದಾಖಲೆಗಳ ಬಗ್ಗೆ ಯಾವುದೇ ಮಾಹಿತಿ ದೊರೆಯುವುದಿಲ್ಲ ಎಂಬುದನ್ನು ಈ ಪ್ರಕಟಣೆ ಮೂಲಕ ಸ್ಪಷ್ಟಪಡಿಸುತ್ತೇವೆ.

ದಿ. 07.11.2024
ದಾವಣಗೆರೆ.

ಸಹಿ/- ಆಡಳಿತ ಮಂಡಳಿ
ಮಾವಿನತೋಪು ಆಸ್ಪತ್ರೆ, ದಾವಣಗೆರೆ.




# ಅಧಿಕಾರಿಗಳ ಸಹಕಾರವಿಲ್ಲದೇ ವಕ್ಫ್ ಆಸ್ತಿಯಾಗಿ ಬದಲಿಸಲು ಹೇಗೆ ಸಾಧ್ಯ?

**ವಕ್ಫ್ ಸಂಸದೀಯ ಸಮಿತಿ ಅಧ್ಯಕ್ಷ ಜಗದಂಬಿಕಾ ಪಾಲ್**

ಬೆಂಗಳೂರು, ನ. 7 - ರೈತರ, ಮಠ, ಮಂದಿರಗಳ ಜಮೀನುಗಳ ಪಹಣಿಯನ್ನು ಅಧಿಕಾರಿಗಳ ಸಹಕಾರವಿಲ್ಲದೆ ವಕ್ಫ್ ಬೋರ್ಡ್ ಆಸ್ತಿಯಾಗಿ ಬದಲಿಸಲು ಹೇಗೆ ಸಾಧ್ಯ? ಎಂದು ವಕ್ಫ್ (ತಿದ್ದುಪಡಿ) ವಿಧೇಯಕ ಕುರಿತ ಜಂಟಿ ಸಂಸದೀಯ ಸಮಿತಿ (ಜೆಪಿಸಿ) ಅಧ್ಯಕ್ಷ ಜಗದಾಂಬಿಕಾ ಪಾಲ್ ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕದ ಹುಬ್ಬಳ್ಳಿಯಲ್ಲಿ ರೈತರ ಜಮೀನು, ದೇವಾಲಯಗಳ ಆಸ್ತಿ, 500ರಿಂದ ಒಂದು ಸಾವಿರ ವರ್ಷಗಳಷ್ಟು ಹಳೆಯ ದಾಖಲೆ ಇರುವ ಮಠಗಳ ಜಮೀನನ್ನು ವಕ್ಫ್ ಆಸ್ತಿ ಎಂದು ಘೋಷಿಸುತ್ತಿದ್ದಾರೆ. ಅಲ್ಲದೆ, ಪಹಣಿ, ಆಸ್ತಿ ಹಕ್ಕಿನಲ್ಲೂ ಬದಲಾವಣೆ ಮಾಡಲಾಗುತ್ತಿದೆ, ಇದು ಹೇಗೆ ಸಾಧ್ಯ? ಎಂದರು.

ಎಲ್ಲ ಕಂದಾಯ ದಾಖಲೆಗಳಿದ್ದರೂ ಈ ರೀತಿ ಅಚಾತುರ್ಯ ಆಗುತ್ತಿದೆ. ಇಲ್ಲಿನ ರಾಜ್ಯ ಸರ್ಕಾರ ನೋಟಿಸ್ ವಾಪಸ್ ಪಡೆಯುವುದಾಗಿ ತಿಳಿಸಿದೆ. ಸದ್ಯಕ್ಕೆ ರೈತರನ್ನು ಒಕ್ಕಲೆಬ್ಬಿಸದೇ ಇರಲು ಸರ್ಕಾರ ಕಂದಾಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಿರಬಹುದು. ಇದರಿಂದ ಸಮಸ್ಯೆ ಪರಿಹಾರವಾಗಲಿದೆಯೇ? ಎಂದು ಪ್ರಶ್ನಿಸಿದರು.

ಹುಬ್ಬಳ್ಳಿ, ಬೀದರ್, ಕಲಬುರಗಿ, ಶಿವಮೊಗ್ಗ ಮೊದಲಾದ ಜಿಲ್ಲೆಗಳಲ್ಲಿ ಇಂಥ ಸಮಸ್ಯೆಗಳಿವೆ. ಪುರಾತನ ಮಠ, ದೇವಾಲಯಗಳ 15 ಸಾವಿರ ಎಕರೆ, ಒಂದು ಸಾವಿರ ಎಕರೆಯನ್ನು ವಕ್ಫ್ ಆಸ್ತಿ ಎಂದು ತಿಳಿಸಲಾಗುತ್ತಿದೆ. 1920, 1930ರಿಂದ ವ್ಯವಸಾಯ ಮಾಡುತ್ತಿರುವ ರೈತರ ಜಮೀನು ವಕ್ಫ್ ಆಸ್ತಿ ಆಗಲು ಹೇಗೆ ಸಾಧ್ಯ? ಎಂದು ಕೇಳಿದರು.

ಇದೊಂದು ಗಂಭೀರ, ದೊಡ್ಡ ಸಮಸ್ಯೆಯಾಗಿದೆ. 70ಕ್ಕೂ ಹೆಚ್ಚು ಮನವಿಗಳನ್ನು ಈಗಾಗಲೇ ಸ್ವೀಕರಿಸಿ ದ್ದೇವೆ. ಶಾಸಕರೂ ಮನವಿ ಕೊಟ್ಟಿದ್ದಾರೆ. ಸಾವಿರಾರು ರೈತರು ಇದರಿಂದ ತೊಂದರೆಗೆ ಒಳಗಾಗಲಿದ್ದಾರೆ. ಕರ್ನಾಟಕದಲ್ಲಿ ಆಗಿರುವ ಸಮಸ್ಯೆಗಳ ಕುರಿತು ಜೆಪಿಸಿ ಸದಸ್ಯ ಹಾಗೂ ಸಂಸದ ತೇಜಸ್ವಿ ಸೂರ್ಯ ಅವರೂ ಮಾಹಿತಿ ನೀಡಿದ್ದಾರೆ ಎಂದು ಹೇಳಿದರು.

ಯಾವುದೇ ದಾಖಲಾತಿ ಇಲ್ಲದೆ ವಕ್ಫ್ ಆಸ್ತಿ ಎಂದು ತಿಳಿಸುತ್ತಿದ್ದು, ಟ್ರಿಬ್ಯೂನಲ್ ನಿರ್ಧಾರದ ಬಳಿಕ ಸಂತ್ರಸ್ತರು ಆಸ್ತಿ ಕಳೆದುಕೊಳ್ಳುತ್ತಾರೆ. ಇದೊಂದು ಗಂಭೀರ ಸಮಸ್ಯೆ, ರೈತರು ಸಂಕಷ್ಟಕ್ಕೆ ಸಿಲುಕುತ್ತಾರೆ. ಈ ಸಂಬಂಧ ದೇಶದ ವಿವಿಧ ಕಡೆಗಳಿಗೆ ಸಮಿತಿ ಭೇಟಿ ಕೊಟ್ಟಿದೆ ಎಂದು ಪಾಲ್ ತಿಳಿಸಿದರು.

ಬಿಜೆಪಿಯವರಷ್ಟೇ ಅಲ್ಲದೆ, ರೈತರು, ಜನಸಾಮಾನ್ಯರು, ಮಹಿಳೆಯರು, ಮುಸ್ಲಿಂ ಸಮುದಾಯದವರೂ ಸೇರಿದಂತೆ ಎಲ್ಲರೂ ಮನವಿ ಸಲ್ಲಿಸಿದ್ದಾರೆ, ಸಂತ್ರಸ್ತರನ್ನು ಭೇಟಿ ಮಾಡುತ್ತಿದ್ದೇವೆ ಎಂದವರು ಹೇಳಿದರು.

ಸಮಗ್ರ ಮಾಹಿತಿ ಪಡೆಯಲು ಮತ್ತು ವಿವರ ತಿಳಿಯಲು ಎಲ್ಲರನ್ನೂ ಭೇಟಿ ಮಾಡುತ್ತಿದ್ದೇವೆ. ಕಳೆದೊಂದು ತಿಂಗಳಿನಲ್ಲಿ ಕರ್ನಾಟಕದಲ್ಲಿ ಈ ಗಂಭೀರ ಸಮಸ್ಯೆ ಉದ್ಭವಿಸಿದೆ, ವರದಿಯಲ್ಲಿ ಇದೆಲ್ಲ ವಿವರಗಳನ್ನು ಸೇರಿಸುತ್ತೇವೆ ಎಂದರು.

ವಕ್ಫ್ (ತಿದ್ದುಪಡಿ) ವಿಧೇಯಕ ಕುರಿತ ಜಂಟಿ ಸಂಸದೀಯ ಸಮಿತಿ (ಜೆಪಿಸಿ)ಯನ್ನು ಲೋಕಸಭಾ ಸ್ಪೀಕರ್ ರಚಿಸಿದ್ದಾರೆ. ಬಿಜೆಪಿ ಮಾತ್ರವಲ್ಲದೆ, ಸಮಾಜವಾದಿ ಪಕ್ಷ, ಡಿಎಂಕೆ, ಕಾಂಗ್ರೆಸ್, ಎಐಎಂಐಎಂ ಸೇರಿದಂತೆ ವಿವಿಧ ಪಕ್ಷಗಳ ಸದಸ್ಯರು ಇದರಲ್ಲಿದ್ದಾರೆ.

ನಾಳೆ ಭುವನೇಶ್ವರ, ಕೊಲ್ಕತಾ ಸೇರಿದಂತೆ ದೇಶದ ಅನೇಕ ಪ್ರದೇಶಗಳಿಗೆ ಭೇಟಿ ಕೊಡಲಿದ್ದೇವೆ, ಸರ್ಕಾರಕ್ಕೆ ಸಮಿತಿ ತನ್ನ ವರದಿ ಸಲ್ಲಿಸಲಿದೆ ಎಂದರು.

# ಸರ್ಕಾರಿ ಸವಲತ್ತು ಸದುಪಯೋಗಕ್ಕೆ ಶಾಸಕರ ಕರೆ

## ಹರಪನಹಳ್ಳಿ ಬಾಲಕರ ವಿದ್ಯಾರ್ಥಿ ನಿಲಯದ ಉದ್ಘಾಟನಾ ಸಮಾರಂಭದಲ್ಲಿ ಲತಾ ಮಲ್ಲಿಕಾರ್ಜುನ್



ಹರಪನಹಳ್ಳಿ, ನ.7- ಸರ್ಕಾರಿ ಸವಲತ್ತುಗಳನ್ನು ಸರಿಯಾಗಿ ಸದುಪ ಯೋಗಪಡಿಸಿಕೊಂಡು, ವಿದ್ಯಾಭ್ಯಾಸದ ಕಡೆಗೆ ಹೆಚ್ಚಿನ ಗಮನಹರಿಸಬೇಕು ಎಂದು ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ್ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಪಟ್ಟಣದ ಗುರುಭವನದ ಮುಂಭಾಗದಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಕಟ್ಟಡದಲ್ಲಿ ಡಿ.ದೇವರಾಜ ಅರಸು ಮೆಟ್ರಿಕ್ ನಂತರದ ಬಾಲಕರ ನೂತನ ವಿದ್ಯಾರ್ಥಿ ನಿಲಯವನ್ನು ಇಂದು ಉದ್ಘಾಟಿಸಿ ಅವರು ಮಾತನಾಡಿದರು.

ಹರಪನಹಳ್ಳಿ ಶೈಕ್ಷಣಿಕವಾಗಿ ಮುಂದುವರೆದ ತಾಲ್ಲೂಕು, ಇಲ್ಲಿ ಹೆಚ್ಚು ಬಡ ವಿದ್ಯಾರ್ಥಿಗಳು ವಿದ್ಯಾಭ್ಯಾಸಕ್ಕೆ ಬರುತ್ತಾರೆ, ಅಂತಹ ವಿದ್ಯಾರ್ಥಿಗಳಿಗೆ ವಸತಿ ನಿಲಯದ ಕೊರತೆಯಾಗಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಹೊಸಪೇಟೆಯಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ಈ ವಿಚಾರ ಪ್ರಸ್ತಾಪ ಮಾಡಿದ್ದೆ, ಸಿಎಂ ಅವರು ಅಂದೇ ಹೊಸ ವಸತಿ ನಿಲಯ ಮಂಜೂರಾತಿ ಆದೇಶ ಮಾಡಿಸಿದರು ಎಂದು ತಿಳಿಸಿದರು.

ತಾಲ್ಲೂಕಿನ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ಇನ್ನೂ ಹೆಚ್ಚಿನ ವಸತಿ ನಿಲಯಗಳ ಮಂಜೂರಾತಿಗೆ ಪ್ರಯತ್ನ ಮಾಡುತ್ತೇನೆ. ಮಕ್ಕಳು ಸಹ ಉತ್ತಮವಾಗಿ ವಿದ್ಯಾಭ್ಯಾಸ ಮಾಡಿ ತಮ್ಮ ತಂದೆ, ತಾಯಿ ಹಾಗೂ ತಾಲ್ಲೂಕಿಗೆ ಒಳ್ಳೆಯ ಹೆಸರು ತನ್ನಿ ಎಂದು ಶಾಸಕರಾದ ಲತಾ ಕಿವಿ ಮಾತು ಹೇಳಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿ ಕೆ.ಬಿ.ರಾಮಚಂದ್ರಪ್ಪ ಮಾತನಾಡಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಜಿಲ್ಲೆಗೆ ಎರಡು ಹಾಸ್ಟೆಲ್‌ಗಳು ಮಂಜೂರಾಗಿದ್ದು, ಜಿಲ್ಲಾ ಕೇಂದ್ರದಲ್ಲಿ ಆರಂಭಿಸುವಂತೆ ಇಲಾಖೆಯಿಂದ ಆದೇಶ ಇತ್ತು, ಆದರೆ ಶಾಸಕರಾದ ಎಂ.ಪಿ.ಲತಾ ಮಲ್ಲಿಕಾರ್ಜುನ್ ಅವರು ಪಟ್ಟು ಹಿಡಿದು ಹರಪನಹಳ್ಳಿ ತಾಲ್ಲೂಕಿಗೆ ಒಂದು ಹಾಸ್ಟೆಲ್ ಮಂಜೂರು ಮಾಡಿಸಿದ್ದು, ಇದು ವಿದ್ಯಾರ್ಥಿಗಳ ಬಗ್ಗೆ ಅವರಿಗೆ ಇರುವ ಕಾಳಜಿ ತೋರಿಸುತ್ತದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಉಪವಿಭಾಗಾಧಿಕಾರಿ ಚಿದಾನಂದ ಗುರುಸ್ವಾಮಿ, ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಕೆ.ಭೀಮಪ್ಪ, ವಸತಿ ನಿಲಯದ ಮೇಲ್ವಿಚಾರಕರಾದ ಬಿ.ಎಚ್.ಚಂದ್ರಪ್ಪ, ವೀರಣ್ಣ, ಜುಂಜಪ್ಪ, ಪ್ರೇಮಾವತಿ, ಶೃತಿ, ಅನ್ನಪೂರ್ಣ, ಮತ್ತೂರು ಬಸವರಾಜ, ಸಿದ್ದೇಶ, ಹರಿಕೃಷ್ಣ, ಸೇರಿದಂತೆ ಇತರರು ಇದ್ದರು.

# ರಾಷ್ಟ್ರೀಯ ಉಗ್ರವಾದ ವಿರೋಧಿ ನೀತಿ ರಚನೆ

ನವದೆಹಲಿ, ನ. 7 - ಉಗ್ರವಾದದ ವಿರುದ್ಧ ಹೋರಾಡಲು ರಾಷ್ಟ್ರೀಯ ಉಗ್ರವಾದ ವಿರೋಧಿ ನೀತಿ ರೂಪಿಸಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಷಾ ತಿಳಿಸಿದ್ದಾರೆ.

ಇಲ್ಲಿ ಆಯೋಜಿಸಲಾಗಿದ್ದ ಉಗ್ರವಾದ ವಿರೋಧಿ ಸಮಾವೇಶದಲ್ಲಿ ಮಾತನಾಡಿದ ಅಮಿತ್ ಷಾ, ಕಾನೂನು ಸುವ್ಯವಸ್ಥೆ ರಾಜ್ಯಗಳಿಗೆ ಸೇರಿದ ವಿಷಯವಾಗಿದೆ. ರಾಜ್ಯಗಳಿಗೆ ಭೌಗೋಳಿಕ ಹಾಗೂ ಸಂವಿಧಾನದ ಮಿತಿಗಳಿವೆ. ಆದರೆ ಉಗ್ರರಿಗೆ ಇಂತಹ ಯಾವುದೇ ಮಿತಿ ಇಲ್ಲ. ಹೀಗಾಗಿ ಕೇಂದ್ರ ಹಾಗೂ ರಾಜ್ಯಗಳು ನಿಕಟ ಸಮನ್ವಯದೊಂದಿಗೆ ಕಾರ್ಯನಿರ್ವಹಿಸಬೇಕಿದೆ. ಜಂಟಿ ಯೋಜನೆ ರೂಪಿಸಬೇಕಿದೆ ಹಾಗೂ ಗುಪ್ತಚರ ಮಾಹಿತಿ ಹಂಚಿಕೊಳ್ಳಬೇಕಿದೆ ಎಂದು ಹೇಳಿದರು.

ಸರ್ಕಾರ ಶೀಘ್ರದಲ್ಲೇ ಮಾದರಿ ಉಗ್ರವಾದ ನಿಗ್ರಹ ದಳದ ಮಾರ್ಗಸೂಚಿ ರೂಪಿಸಲಿದೆ. ಮಾದರಿ ವಿಶೇಷ ಕಾರ್ಯಪಡೆ ಮಾರ್ಗಸೂಚಿ ಸಹ ರೂಪಿಸಲಾಗುವುದು ಎಂದು ಗೃಹ ಸಚಿವರು ಹೇಳಿದರು.

# ನಗರದಲ್ಲಿ ಇಂದು ಬನ್ನಿ ಮಹಾಂಕಾಳಿ ದೇವಸ್ಥಾನದ 20 ನೇ ವಾರ್ಷಿಕೋತ್ಸವ

ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್ 1 ನೇ ಅಡ್ಡ ರಸ್ತೆಯ (ಡಬಲ್ ರೋಡ್) ಶ್ರೀ ಬನ್ನಿಮಹಾಂಕಾಳಿ ದೇವಿ ಜೀರ್ಣೋದ್ಧಾರ ಸಮಿತಿ ವತಿಯಿಂದ ಶ್ರೀ ದೇವಿಯ 20 ನೇ ವರ್ಷದ ವಾರ್ಷಿಕೋತ್ಸವ ಇಂದು ನಡೆಯಲಿದೆ.ಬೆಳಿಗ್ಗೆ 6 ಕ್ಕೆ ಶ್ರೀ ದೇವಿಗೆ ಅಭಿಷೇಕ ಮತ್ತು ಮಹಾಪೂಜೆ, ಮಧ್ಯಾಹ್ನ 12 ರಿಂದ ಮಹಾ ಪ್ರಸಾದ ಏರ್ಪಡಿಸಲಾಗಿದೆ.

# ಹಿರಿಮೆ-ಗರಿಮೆ ಹೊಂದಿದ ಕ್ಷೇತ್ರ 'ರಂಗಭೂಮಿ'

**(1ನೇ ಪುಟದಿಂದ)** ಪ್ರೇಕ್ಷಕರ ಮನ ಗೆಲ್ಲುವ ಪ್ರಾಮಾಣಿಕ ಪ್ರಯತ್ನ ಮಾಡಿದರು.

ಇದೇ ವೇಳೆ ರಂಗ ಸಂಗೀತ, ವೃತ್ತಿ ರಂಗ ಗೀತೆಗಳ ಕಲಿಕಾ ಕಾರ್ಯಾಗಾರದ ಸಮಾರೋಪ ಮತ್ತು ಅಭಿನಯ ಸಂಗೀತ ಪ್ರದರ್ಶನ ಕಾರ್ಯಕ್ರಮದಲ್ಲಿ ಸಮಾರೋಪ ನುಡಿಗಳನ್ನಾಡಿದ ಕೇಂದ್ರ ಸಂಗೀತ-ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ತುಮಕೂರಿನ ಡಾ. ಲಕ್ಷ್ಮಣದಾಸ್ ಅವರು, 'ಭೂಮಿ' ಎಂಬ ಹಿರಿಮೆ-ಗರಿಮೆ ಹೊಂದಿದ ಏಕೈಕ ಕ್ಷೇತ್ರ ಅದು 'ರಂಗಭೂಮಿ'. ಮತ್ತೆ ವೈಭವದತ್ತ ವೃತ್ತಿ ರಂಗ ಭೂಮಿ ಹೆಜ್ಜೆ ಹಾಕುತ್ತಿದೆ ಎಂದರು.

ಈ ಭೂಮಿ ವೃತ್ತಿ ರಂಗಭೂಮಿಗೆ ನೆಲೆ ಒದಗಿಸಿಕೊಟ್ಟಿದೆ. ರೋಮಾಂಚನಗೊಳಿಸುವ ರಂಗ ಗೀತೆಗಳು ಮತ್ತು ರಂಗಭೂಮಿ ಪರಂಪರೆ ಮುಂದುವರೆಯಬೇಕಾಗಿದೆ ಎಂಬ ಸದಾಶಯ ವ್ಯಕ್ತಪಡಿಸಿದರು.

ರಂಗಭೂಮಿಗೆ ತನ್ನದೇ ಆದ ಶಿಸ್ತು ಇದೆ. ರಂಗಭೂಮಿ ಎತ್ತರಕ್ಕೆ ಹೋದಷ್ಟು ರಂಗಾಸಕ್ತರು ಹತ್ತಿರವಾಗುತ್ತಾರೆ. ದಾವಣಗೆರೆ ಅನೇಕ ರಂಗ ಕಲಾವಿದರನ್ನು ಕೊಡುಗೆಯಾಗಿ ನೀಡಿದೆ. ಇದೀಗ ರಂಗಾಯಣ ಸಂಸ್ಥೆ ದಾವಣಗೆರೆಯಲ್ಲಿ ಆರಂಭವಾ ಗಿದ್ದು, ಸದಾ ಚಲನಶೀಲತೆಯಿಂದ ಕೂಡಿರಲಿ. ಯುವಕರಲ್ಲಿ ರಂಗ ಕಿಚ್ಚು ಹೆಚ್ಚಿಸಲಿ ಎಂದು ಆಶಿಸಿದರು.

ಈ ನಾಡಿನಲ್ಲಿ ಅನೇಕ ರಂಗ ಕಲಾವಿದರು ತಮ್ಮ ರಂಗ ಕಲೆ ಮೂಲಕ ಸಾಕಷ್ಟು ಹೆಸರು ಮಾಡಿದ್ದಾರೆ. ಅವರ ಅಭಿನಯ ಮಾತ್ರ ಮರೆಯಾಗಿಲ್ಲ. ರಂಗ ಬಾಹುಳ್ಯ ಕಟ್ಟಿಕೊಟ್ಟ ಪ್ರಮುಖರಲ್ಲಿ ಹಿರಿಯ ಪತ್ರಕರ್ತ ಗುಡಿಹಳ್ಳಿ ನಾಗರಾಜ್, ಇತ್ತೀಚಿನ ದಿನಗಳಲ್ಲಿ ಅಂತಹ ರಂಗ ಸೇವೆಯನ್ನು ಮಲ್ಲಿಕಾರ್ಜುನ ಕಡಕೋಳ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಹಿರಿಯ ರಂಗಕರ್ಮಿ ಬಾ.ಮ. ಬಸವರಾಜಯ್ಯ ಮಾತನಾಡಿ, ರಂಗಭೂಮಿಗೆ ತಾಯಿಬೇರು ವೃತ್ತಿ ರಂಗಭೂಮಿ. ಇತ್ತೀಚಿನ ದಿನಗಳಲ್ಲಿ ವೃತ್ತಿ ರಂಗಭೂಮಿ ರಂಗಾಯಣ ಹೆಚ್ಚು ಕ್ರಿಯಾಶೀಲತೆಯಿಂದ ಕೂಡಿದೆ. ಗುಬ್ಬಿ ಕಂಪನಿಯಂತಹ ರಂಗ ವೈಭವ ಮತ್ತೆ ಮರುಕಳಿಸಬೇಕಾಗಿದೆ ಎಂದರು.

ಕೊಂಡಜ್ಜಿ ಗುಡ್ಡಕ್ಕೂ ರಂಗಭೂಮಿಗೂ ಅವಿನಾಭಾವ ಸಂಬಂಧವಿದೆ. ಖ್ಯಾತ ರಂಗಕರ್ಮಿ ಬಿ.ವಿ. ಕಾರಂತ ಅವರು ರಂಗಭೂಮಿ ಹಾಗೂ ಹವ್ಯಾಸಿ ರಂಗಭೂಮಿ ಸಮನ್ವಯ ಆಗಬೇಕು ಎಂದು ಹೇಳಿದ್ದನ್ನು ಸ್ಮರಿಸಿದ ಬಾ.ಮ. ಅವರು, ದಾವಣಗೆರೆಗೆ ಬರಬೇಕಾಗಿದ್ದ ರಂಗಾಯಣ ರಾಜಕಾರಣದ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಸ್ಥಾಪಿತವಾಯಿತು ಎಂದು ಹೇಳಿದರು.

ಹಳೆಯ ರಂಗ ವೈಭವ ಮತ್ತೆ ಮರುಕಳಿಸಲು ರಂಗಾಸಕ್ತರು ರಂಗಾಯಣದ ಜೊತೆ ಕೈಜೋಡಿಸಬೇಕು. ರಂಗಭೂಮಿ ಕ್ರಿಯಾಶೀಲತೆಯ ಪ್ರತೀಕ. ಎಲ್ಲಾ ನೋವನ್ನು ಮರೆಸುತ್ತದೆ. ಕೇವಲ ಸರ್ಕಾರ ಮಾತ್ರವಲ್ಲದೇ ಸಾರ್ವಜನಿಕರ ಸಹಕಾರ ಅತ್ಯಗತ್ಯ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ವೃತ್ತಿ ರಂಗಭೂಮಿ ರಂಗಾಯಣದ ನಿರ್ದೇಶಕ ಮಲ್ಲಿಕಾರ್ಜುನ ಕಡಕೋಳ ಮಾತನಾಡಿ, ರಂಗ ಗೀತೆಗಳ ಮಾಧುರ್ಯ ಮರು ರೂಪಿಸುವ ಕಾರ್ಯವನ್ನು ಕೈಗೆತ್ತಿಕೊಂಡಿದ್ದು, ರಾಜ್ಯದ ವಿವಿಧ ಜಿಲ್ಲೆಗಳಲ್ಲಿ 39 ಕಲಾವಿದರು ಅರ್ಜಿ ಸಲ್ಲಿಸಿದ್ದರು. ಈ ಪೈಕಿ 18 ಜನರನ್ನು ಆಯ್ಕೆ ಮಾಡಿ ಅವರಿಗೆ ವೃತ್ತಿ ರಂಗಭೂಮಿ ಸಂಗೀತದ ಪರಂಪರೆ, ನಾಟ್ಯ ಸಂಗೀತದ ಪರಿಚಯ, ಅಭಿನಯವನ್ನು ಕಾರ್ಯಾಗಾರದ ಮೂಲಕ ತರಬೇತಿ ನೀಡಲಾಗಿದೆ ಎಂದರು.

ದಾವಣಗೆರೆಯಲ್ಲಿ ನಿರ್ಮಾಣ ಹಂತದಲ್ಲಿರುವ ರಂಗಮಂದಿರದ ಪಿಲ್ಲರ್‌ಗಳನ್ನು ತೆಗೆದು ಸ್ಮಾರ್ಟ್ ಸಿಟಿ ಯೋಜನೆಯಡಿ ಸುಸಜ್ಜಿತ ರಂಗಮಂದಿರ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಿ ರಂಗ ಚಟುವಟಿಕೆಗಳನ್ನು ನಡೆಸಲು ಅನುವು ಮಾಡಿಕೊಡುವಂತೆ ಹಾಜರಿದ್ದ ಅಪರ ಜಿಲ್ಲಾಧಿಕಾರಿ ಲೋಕೇಶ್ ಅವರಲ್ಲಿ ಮನವಿ ಮಾಡಿದರು.

ಅಪರ ಜಿಲ್ಲಾಧಿಕಾರಿ ಪಿ.ಎನ್.ಲೋಕೇಶ್, ರಂಗಾಯಣ ವಿಶೇಷ ಅಧಿಕಾರಿ ರವಿಚಂದ್ರ, ರಂಗಕರ್ಮಿ ಡಾ. ಪ್ರಕಾಶ್ ಗರುಡ, ವೀರೇಶ್ವರ ಪುಣ್ಯಾಶ್ರಮದ ಕಾರ್ಯದರ್ಶಿ ಜಾಲಿಮರದ ಕರಿಬಸಪ್ಪ, ಶಿವಯೋಗಾಶ್ರಮದ ಓಂಕಾರಪ್ಪ, ರಂಗ ನಿರ್ದೇಶಕ ರಾಘವ ಕಮ್ಮಾರ ಮತ್ತಿತರರು ಇದ್ದರು.

ಸುವರ್ಣ ಕರ್ನಾಟಕ ಪ್ರಶಸ್ತಿ ಪುರಸ್ಕೃತ ರಂಗ ನಟಿ ಸಾವಿತ್ರಿ ರಿತ್ತಿ, ಆರ್.ಜಿ. ಹಳ್ಳಿ ನಾಗರಾಜ್, ಡಾ. ಪ್ರಕಾಶ ಗರುಡ, ರಾಘವ ಕಮ್ಮಾರ್, ಕಲಾವಿದ ಆರ್.ಟಿ. ಅರುಣ್ ಕುಮಾರ್, ವೀರೇ ಶ್ವರ ಪುಣ್ಯಾಶ್ರಮದ ಕಾರ್ಯದರ್ಶಿ ಜಾಲಿಮರದ ಕರಿಬಸಪ್ಪ ಅವರನ್ನು ಗೌರವಿಸಲಾಯಿತು.

ಕಲಿಕಾರ್ಥಿಗಳು ನಾಂದಿ ಗೀತೆ ಹಾಡಿದರು. ರವಿಚಂದ್ರ ಸ್ವಾಗತಿಸಿದರು. ಆರ್.ಟಿ. ಅರುಣ್ ಕುಮಾರ್, ಡಾ. ಶೃತಿ ರಾಜ್ ವಿಭಿನ್ನ ರೀತಿಯಲ್ಲಿ ನಿರೂಪಣೆ ಮಾಡಿದರು. ಉಮಾಶಂಕರ್, ಎಸ್.ಎಸ್. ಸಿದ್ಧರಾಜ್, ನೀಲಗುಂದ ಬಸವನಗೌಡ್ರು ಮತ್ತಿತರರು ಉಪಸ್ಥಿತರಿದ್ದರು.

# ಕೊಟ್ಟೂರು ಎಪಿಎಂಸಿ ಅಧ್ಯಕ್ಷರಾಗಿ ಎ.ನಂಜಪ್ಪ, ಉಪಾಧ್ಯಕ್ಷರಾಗಿ ಎಂ.ಶಿವಣ್ಣ



ಕೊಟ್ಟೂರು, ನ.7- ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆಡಳಿತ ಮಂಡಳಿಗೆ ಸರ್ಕಾರದಿಂದ ನಾಮ ನಿರ್ದೇಶಿತರಾದ ಅಧ್ಯಕ್ಷ, ಉಪಾಧ್ಯಕ್ಷರು ಮತ್ತು ನಿರ್ದೇಶಕರು ಬುಧವಾರ ಕಚೇರಿಯಲ್ಲಿ ಅಧಿಕಾರ ವಹಿಸಿಕೊಂಡರು.

ಅಧ್ಯಕ್ಷರಾಗಿ ಕಾಂಗ್ರೆಸ್ ಮುಖಂಡ ಹರಾಳು ಗ್ರಾಮದ ಎ.ನಂಜಪ್ಪ, ಉಪಾಧ್ಯಕ್ಷರಾಗಿ ಕೊಟ್ಟೂರಿನ ಎಂ. ಶಿವಣ್ಣ ಸೇರಿದಂತೆ, ಶಿರಿಬಿ ಕೊಟ್ರೇಶ್, ಎಂ.ಓ. ಕೊಟ್ರಯ್ಯ ಹಾಗೂ ಇತರೆ 15 ನಿರ್ದೇಶಕರೊಂದಿಗೆ ಅಧಿಕಾರ ವಹಿಸಿಕೊಂಡರು.

ಎಪಿಎಂಸಿ ಕಾರ್ಯದರ್ಶಿ ಎಚ್.ಕೆ.ವೀರಣ್ಣ, ಬಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಐ. ಎಂ. ದಾರುಕೇಶ್, ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಅಡಕಿ ಮಂಜುನಾಥ್ ಸೇರಿದಂತೆ ಅನೇಕ ಮುಖಂಡರುಗಳು ಹಾಜರಿದ್ದರು.

# ನಗರದಲ್ಲಿ ಇಂದು ದಲಿತ ಹಕ್ಕುಗಳ ಆಂದೋಲನದ ರಾಜ್ಯ ಸಮ್ಮೇಳನ

ಅಖಿಲ ಭಾರತ ದಲಿತ ಆಂದೋಲನದ ಪ್ರಥಮ ಕರ್ನಾಟಕ ರಾಜ್ಯ ಸಮ್ಮೇಳನವು ಇಂದು ನಗರದಲ್ಲಿ ನಡೆಯಲಿದೆ ಎಂದು ಸಮ್ಮೇಳನದ ಸಿದ್ಧತಾ ಸಮಿತಿ ಅಧ್ಯಕ್ಷ ಕಾಂ. ಆವರಗೆರೆ ಚಂದ್ರು ತಿಳಿಸಿದ್ದಾರೆ.

ಬೆಳಿಗ್ಗೆ 11.45ಕ್ಕೆ ಡಾ. ಬಿ.ಆರ್. ಅಂಬೇಡ್ಕರ್ ಸರ್ಕಲ್‌ನಿಂದ ರ‍್ಯಾಲಿ ಆರಂಭವಾಗಿ ಅಶೋಕ ರಸ್ತೆ, ಗಾಂಧಿ ಸರ್ಕಲ್, ಪಿಬಿ ರಸ್ತೆ, ಐಬಿ ರಸ್ತೆ ಮೂಲಕ ಸಾಗಿ ಪುನಃ ಜಯದೇವ ಸರ್ಕಲ್‌ಗೆ ಆಗಮಿಸಿ ಅಂತ್ಯಗೊಳ್ಳುವುದು.

ನಂತರ ಜಯದೇವ ಸರ್ಕಲ್ ಹತ್ತಿರದ ನಾಟ್ಯಾಚಾರ್ಯ ಕುಲಕರ್ಣಿ ರಸ್ತೆಯಲ್ಲಿ ಬಹಿರಂಗ ಸಭೆ ನಡೆಯುವುದು.

ಬಹಿರಂಗ ಸಭೆಯಲ್ಲಿ ಕಾಂ. ಎ. ರಾಮಮೂರ್ತಿ, ಡಾ. ಸದಾಶಿವ ಮರ್ಜಿ, ಎಸ್.ಎಸ್. ಮಲ್ಲಿಕಾರ್ಜುನ್, ಡಾ. ಪ್ರಭಾ ಮಲ್ಲಿಕಾರ್ಜುನ್, ಡಾ. ಸಿದ್ದನಗೌಡ ಪಾಟೀಲ, ಡಾ. ಮಹೇಶ್ ಕುಮಾರ ರಾಥೋಡ್, ಕೆ.ಎಸ್. ಬಸವರಾಜ್, ಕಾಂ. ಆವರಗೆರೆ ಚಂದ್ರು, ಕಾಂ. ಹೆಚ್.ಜಿ. ಉಮೇಶ್, ಕಾಂ. ರೇಣುಕಮ್ಮ, ಕಾಂ. ಹೆಚ್.ಎಂ. ಸಂತೋಷ್, ಕಾಂ. ಷಣ್ಮುಖ ಸ್ವಾಮಿ, ಕಾಂ. ಹೊನ್ನಪ್ಪ ಮರೆಮ್ಮನವರ ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಬಹಿರಂಗ ಸಭೆ ಮುಕ್ತಾಯದ ನಂತರ ಸಂಜೆ ಹರಿಹರದ ಕೃಷ್ಣಪ್ಪ ಭವನದಲ್ಲಿ ಪ್ರತಿನಿಧಿಗಳ ಸಮಾವೇಶ ಆರಂಭವಾಗಿ ಮಾರನೇ ದಿನ ಸಂಜೆವರೆಗೂ ಮುಂದುವರೆದು ನಂತರ ರಾಜ್ಯ ಸಮಿತಿ ಪದಾಧಿಕಾರಿಗಳ ಆಯ್ಕೆಯೊಂದಿಗೆ ಸಮ್ಮೇಳನ ಮುಕ್ತಾಯವಾಗುವುದು.

# ಜೈನ್ ಸಮಾಜದವರು ದುಡಿಮೆ, ಕ್ರೀಡೆ ಮೈಗೂಡಿಸಿಕೊಂಡಿದ್ದಾರೆ: ದಿನೇಶ್ ಶೆಟ್ಟಿ



ದಾವಣಗೆರೆ, ನ.7- ಇಂದಿಲ್ಲಿ ಜಿಲ್ಲಾ ಕ್ರೀಡಾಂಗಣದಲ್ಲಿ ಜೈನ್ ಸಮಾಜದ ಯುವಕರು ಬಾಷ್ ಬ್ರದರ್ಸ್ ವತಿಯಿಂದ 'ಬಾಷ್ ಟಿ ಟೆನ್ ಲೀಗ್' ರಾಜ್ಯ ಮಟ್ಟದ ಕ್ರಿಕೆಟ್ ಪಂದ್ಯಾವಳಿ ಏರ್ಪಡಿಸಲಾಗಿತ್ತು.

ಈ ಪಂದ್ಯಾವಳಿಯ ಉದ್ಘಾಟನೆಯನ್ನು ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಬ್ಯಾಟ್ ಮಾಡುವುದರ ಮೂಲಕ ಉದ್ಘಾಟಿಸಿದರು.

ಜೈನ್ ಸಮಾಜದ ಯುವಕರು ದುಡಿಮೆ ಮತ್ತು ಕ್ರೀಡೆಯನ್ನು ಉತ್ತಮವಾಗಿ ಮೈಗೂಡಿಸಿಕೊಂಡಿದ್ದಾರೆ. ಇದೇ ರೀತಿ ಕ್ರೀಡೆಯಲ್ಲಿ ಭಾಗವಹಿಸಿ, ಉತ್ತಮ ಆರೋಗ್ಯವಂತ ಪ್ರಜೆಗಳಾಗಿ ದೇಶಕ್ಕೆ ಒಳ್ಳೆಯ ಸಮಾಜ ಕಟ್ಟಿ ಎಂದು ಹಾರೈಸಿದರು.

ಈ ಸಂದರ್ಭದಲ್ಲಿ ಜೈನ್ ಯುವಕ ಮಂಡಳಿಯ ಮುಖಂಡರಾದ ಗೌತಮ್ ಜೈನ್, ಪ್ರದೀಪ್ ಜೈನ್, ನಿತೀಶ್ ಜೈನ್, ಸನ್ನಿ ಪರಮಾತ್, ಚಿರಾಗ್ ಜೈನ್, ಪ್ರಣಯ, ಪಕ್ಷಾಲ್, ದೀಪಕ್, ರಾಥೋಡ್ ಸೇರಿದಂತೆ ಮತ್ತಿತರರಿದ್ದರು.

# 11ಕ್ಕೆ ಕುರಿ-ಮೇಕೆ ಸಾಕಾಣಿಕೆ ತರಬೇತಿ

ದಾವಣಗೆರೆ, ನ.7- ಇಲ್ಲಿನ ಪಶುಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರದಲ್ಲಿ ರೈತರಿಗೆ ಪಶು ಸಂಗೋಪನಾ ಚಟುವಟಿಕೆಗಳ ತರಬೇತಿ ನಡೆಯಲಿದೆ.

ಇದೇ ದಿನಾಂಕ 11 ಮತ್ತು 12ರಂದು ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ ಹಾಗೂ ಇದೇ ದಿನಾಂಕ 15 ಮತ್ತು 16ರಂದು ಕೋಳಿ ಸಾಕಾಣಿಕೆ ತರಬೇತಿ, ಇದೇ ದಿನಾಂಕ 29, 30ರಂದು ಆಧುನಿಕ ಹೈನುಗಾರಿಕೆ ತರಬೇತಿ ನಡೆಯಲಿದೆ. ಮಾಹಿತಿಗಾಗಿ 08192-233787 ಸಂಪರ್ಕಿಸಿ.

# ಆಸ್ಟ್ರೇಲಿಯಾದಲ್ಲಿ 16ರ ಒಳಗಿನವರಿಗೆ ಜಾಲತಾಣ ನಿಷೇಧ

ಮೆಲ್ಬೋರ್ನ್, ನ. 7- ಸಾಮಾಜಿಕ ಮಾಧ್ಯಮಗಳ ಬಳಕೆಗೆ 16 ವರ್ಷದ ವಯೋಮಿತಿ ನಿಗದಿಪಡಿಸಲು ಶಾಸನ ರೂಪಿಸುವುದಾಗಿ ಆಸ್ಟ್ರೇಲಿಯಾ ಸರ್ಕಾರ ಘೋಷಿಸಿದೆ.

ಸಾಮಾಜಿಕ ಮಾಧ್ಯಮಗಳಿಂದ ನಮ್ಮ ಮಕ್ಕಳಿಗೆ ಹಾನಿಯಾಗುತ್ತಿದೆ. ಈ ಬಗ್ಗೆ ಕ್ರಮ ತೆಗೆದುಕೊಳ್ಳುವ ಸಮಯ ಬಂದಿದೆ ಎಂದು ಆಸ್ಟ್ರೇಲಿಯಾ ಪ್ರಧಾನ ಮಂತ್ರಿ ಆಂಥೋನಿ ಅಲ್ಬಾನೀಸ್ ಹೇಳಿದ್ದಾರೆ.

ಈ ವರ್ಷದ ಅಂತ್ಯದೊಳಗೆ ಸಂಸತ್ತಿನಲ್ಲಿ ಶಾಸನ ಮಂಡಿಸಲಾಗುವುದು. ಈ ಶಾಸನವು ವಿಶ್ವದಲ್ಲೇ ಮುಂಚೂಣಿ ಸ್ವರೂಪದಲ್ಲಿರಲಿದೆ ಎಂದು ಪ್ರಧಾನಮಂತ್ರಿ ಹೇಳಿದ್ದಾರೆ.

16 ವರ್ಷದ ಒಳಗಿನವರನ್ನು ಯಾವ ರೀತಿ ನಿರ್ಬಂಧಿಸಬೇಕು ಎಂಬುದನ್ನು ಸಾಮಾಜಿಕ ಜಾಲತಾಣ ವೇದಿಕೆಗಳು ನಿರ್ಧರಿಸಬೇಕಿದೆ ಎಂದು ಅಲ್ಬಾನೀಸ್ ತಿಳಿಸಿದ್ದಾರೆ.

ನಾನು ಸಾವಿರಾರು ಪೋಷಕರು ಹಾಗೂ ಕುಟುಂಬದವರ ಜೊತೆ ಮಾತನಾಡಿದ್ದೇನೆ. ಅವರೆಲ್ಲರೂ ನನ್ನಂತೆಯೇ ಆನ್‌ಲೈನ್‌ನಲ್ಲಿ ಮಕ್ಕಳ ಸುರಕ್ಷತೆ ಕುರಿತು ಕಳವಳ ಹೊಂದಿದ್ದಾರೆ ಎಂದು ಪ್ರಧಾನಿ ತಿಳಿಸಿದ್ದಾರೆ.

ಸ್ಮಾರ್ಟ್‌ಫೋನ್ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಮಕ್ಕಳ ಸುರಕ್ಷತೆ ಕುರಿತು ವಿಶ್ವದಾದ್ಯಂತ ಸರ್ಕಾರಗಳಿಗೆ ಚಿಂತೆ ಇದೆ. ಆಸ್ಟ್ರೇಲಿಯಾದ ಪ್ರಸ್ತಾಪಿತ ಶಾಸನದ ಪ್ರಕಾರ ಕಡಿಮೆ ವಯಸ್ಸಿನ ಮಕ್ಕಳು ಸಾಮಾಜಿಕ ಜಾಲತಾಣ ಬಳಸಿದಲ್ಲಿ ಮಕ್ಕಳು ಇಲ್ಲವೇ ಪೋಷಕರಿಗೆ ಶಿಕ್ಷೆ ವಿಧಿಸುವುದಿಲ್ಲ. ಸಾಮಾಜಿಕ ಜಾಲತಾಣ ಕಂಪನಿಗಳಿಗೆ ಮಾತ್ರ ಶಿಕ್ಷೆ ವಿಧಿಸಲಾಗುವುದು.

ಮಕ್ಕಳು ಸಾಮಾಜಿಕ ಜಾಲತಾಣ ಬಳಸದಂತೆ ನಿರ್ಬಂಧಿಸುವ ಹೊಣೆ ಸಾಮಾಜಿಕ ಜಾಲತಾಣ ವೇದಿಕೆಗಳ ಮೇಲಿರಲಿದೆ. ಈ ಹೊರೆಯನ್ನು ಪೋಷಕರು ಇಲ್ಲವೇ ಯುವಪೀಳಿಗೆಯ ಮೇಲೆ ಹೇರುವುದಿಲ್ಲ ಎಂದು ಅಲ್ಬಾನೀಸ್ ತಿಳಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಫೇಸ್‌ಬುಕ್ ಹಾಗೂ ಇನ್‌ಸ್ಟಾಗ್ರಾಂ ಮಾತೃ ಕಂಪನಿಯಾಗಿರುವ ಮೆಟಾ ಸುರಕ್ಷತಾ ಮುಖ್ಯಸ್ಥೆ ಆಂಟಿಗೋನ್ ಡೇವಿಸ್, ಸರ್ಕಾರ ವಿಧಿಸುವ ಯಾವುದೇ ವಯೋಮಿತಿಯನ್ನು ಗೌರವಿಸುವುದಾಗಿ ಹೇಳಿದ್ದಾರೆ.

ಆದರೆ, ಈ ಸುರಕ್ಷತೆಯನ್ನು ಯಾವ ರೀತಿ ಜಾರಿಗೆ ತರಬೇಕು ಎಂಬ ಬಗ್ಗೆ ಆಳವಾದ ಚರ್ಚೆಗಳು ನಡೆಯಬೇಕಿದೆ. ಆಪ್ ಸ್ಟೋರ್‌ಗಳು ಹಾಗೂ ಆಪರೇಟಿಂಗ್ ಸಿಸ್ಟಮ್ ಮೇಲೆ ಪೋಷಕರು ಹೆಚ್ಚಿನ ನಿಯಂತ್ರಣ ಹೊಂದುವುದು ಸರಳ ಹಾಗೂ ಪರಿಣಾಮಕಾರಿ ಪರಿಹಾರ ಎಂದವರು ಅಭಿಪ್ರಾಯಪಟ್ಟಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಡಿಜಿಟಲ್ ಇಂಡಸ್ಟ್ರಿ ಗ್ರೂಪ್ ಇನ್‌ಕಾರ್ಪೊರೇಷನ್, ನಿರ್ಬಂಧ ಹೇರುವುದು ಎಂದರೆ 21ನೇ ಶತಮಾನದ ಸವಾಲುಗಳಿಗೆ 20ನೇ ಶತಮಾನದ ಪ್ರತಿಕ್ರಿಯೆ ನೀಡಿದಂತೆ. ನಿಷೇಧ ಹೇರುವ ಬದಲು ಸಮತೋಲನದ ಮಾರ್ಗ ಕಂಡುಕೊಳ್ಳಬೇಕಿದೆ. ಡಿಜಿಟಲ್ ಸಾಕ್ಷರತೆ ಕಲ್ಪಿಸಬೇಕಿದೆ ಎಂದು ತಿಳಿಸಿದೆ.

ನಿಷೇಧವನ್ನು ವಿರೋಧಿಸಿರುವ ಯುವ ಆರೋಗ್ಯ ಸೇವಾ ಸಂಸ್ಥೆಯಾದ ರೀಚೌಟ್ ನಿರ್ದೇಶಕಿ ಜಾಕಿ ಹಲನ್, ಆಸ್ಟ್ರೇಲಿಯಾದ ಶೇಕಡ 73ರಷ್ಟು ಯುವ ಪೀಳಿಗೆ ಸಾಮಾಜಿಕ ಜಾಲತಾಣಗಳ ಮೂಲಕ ತಮ್ಮ ಮಾನಸಿಕ ಆರೋಗ್ಯ ಬೆಂಬಲ ಪಡೆಯುತ್ತಿದ್ದಾರೆ ಎಂದು ತಿಳಿಸಿದ್ದಾರೆ.

ಯುವಪೀಳಿಗೆ ನಿಷೇಧದಿಂದ ನುಣುಚಿಕೊಳ್ಳುವ ಪ್ರಯತ್ನ ನಡೆಸುತ್ತದೆ. ನಂತರ ಯಾವುದೇ ಸಮಸ್ಯೆ ಎದುರಾದರೆ ಸಹಾಯ ಪಡೆಯಲು ಬರುವುದಿಲ್ಲ. ನಿಯಮ ಉಲ್ಲಂಘಿಸಿದ ಕಾರಣಕ್ಕೆ ಸಮಸ್ಯೆ ಎದುರಾಗಬಹುದು ಎಂದು ಭಾವಿಸುತ್ತಾರೆ ಎಂದು ಹಲನ್ ಹೇಳಿದ್ದಾರೆ.

ಆದರೆ, ಯುವ ಪೀಳಿಗೆಯ ಸಾಮಾಜಿಕ ಜಾಲತಾಣಗಳ ಬಳಕೆಗೆ ವಿನಾಯಿತಿಗಳು ಇರಲಿವೆ. ಶಿಕ್ಷಣ ಸೇವೆಯಂತಹ ಉದ್ದೇಶಗಳಿಗೆ ಇವುಗಳನ್ನು ಬಳಸಬಹುದು ಎಂದು ಆಸ್ಟ್ರೇಲಿಯಾ ಪ್ರಧಾನಿ ಹೇಳಿದ್ದಾರೆ.

ಈ ವರ್ಷದ ಆರಂಭದಲ್ಲಿ ಸರ್ಕಾರ ತಂತ್ರಜ್ಞಾನ ಬಳಕೆಯ ಮೇಲೆ ನಿರ್ಬಂಧ ಹೇರುವ ಪ್ರಾಯೋಗಿಕ ಕ್ರಮ ತೆಗೆದುಕೊಂಡಿತ್ತು. ಇದರ ಫಲಿತಾಂಶದ ಆಧಾರದ ಮೇಲೆ ಸಾಮಾಜಿಕ ಜಾಲತಾಣಗಳ ಮೇಲೆ ನಿರ್ಬಂಧ ಹೇರಲು ಸರ್ಕಾರ ಮುಂದಾಗುತ್ತಿದೆ.

# ನಗರದಲ್ಲಿ ಇಂದು ಶ್ರೀ ಚೌಡೇಶ್ವರಿ ದೇವಿ ಜಾತ್ರಾ ಮಹೋತ್ಸವ

ಪಿ.ಜೆ. ಬಡಾವಣೆ 6ನೇ ಮುಖ್ಯ ರಸ್ತೆ, 6ನೇ ಕ್ರಾಸ್‌ನಲ್ಲಿರುವ ಶ್ರೀ ಚೌಡೇಶ್ವರಿ ದೇವಸ್ಥಾನದಲ್ಲಿ ಜಾತ್ರಾ ಮಹೋತ್ಸವದ ಪ್ರಯುಕ್ತ ಪಲ್ಲಕ್ಕಿ ಉತ್ಸವ ಮತ್ತು ಕುಂಭ ಮೇಳ ಇಂದು ಜರುಗಲಿದೆ.

ಅಮ್ಮನವರಿಗೆ ಬೆಳಗ್ಗೆ 6 ರಿಂದ ಹೋಮ, ಹವನ, ಪಂಚಾಮೃತ ಅಭಿಷೇಕ, ರುದ್ರಾಭಿಷೇಕ ಮತ್ತು ಪೂಜೆ ಹೂವಿನ ಅಲಂಕಾರ ಇರುತ್ತದೆ. ಕುಂಭ ಹೊರುವ ಹೆಣ್ಣು ಮಕ್ಕಳು (ಗೃಹಿಣಿಯರು) ಬೆಳಿಗ್ಗೆ 9ಕ್ಕೆ ಅಮ್ಮನವರ ಮನೆಯ ಹತ್ತಿರ ಬರುವಂತೆ ತಿಳಿಸಲಾಗಿದೆ.


## ಮೂರನೇ ವರ್ಷದ ಪುಣ್ಯಸ್ಮರಣೆ



**ಲಿಂ. ಕೋಟೆಹಾಳ್ ಶ್ರೀಮತಿ ಹಾಲಮ್ಮನವರು**

ನಿಧನ : 08-11-2021

ಲಿಂ. ಶ್ರೀ ಕೋಟೆಹಾಳ್ ಕೆ.ಎಂ. ನಾರಪ್ಪ, (ನಿವೃತ್ತ ಪಶು ವೈದ್ಯಕೀಯ ಸಹಾಯಕರು, ಅಣಬೇರು) ಇವರ ಧರ್ಮಪತ್ನಿ

ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು.
ಪರಮಾತ್ಮನು ನಿಮ್ಮ ಪವಿತ್ರ ಆತ್ಮಕ್ಕೆ ಚಿರಶಾಂತಿ ನೀಡಲೆಂದು
ಪ್ರಾರ್ಥಿಸುತ್ತೇವೆ. ಸದಾ ನಿಮ್ಮ ಸ್ಮರಣೆ ಹಾಗೂ
ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ

ಶ್ರೀಮತಿ ಬಸಮ್ಮ ಮತ್ತು ಕೆ.ಎಂ. ಶೇಖರಪ್ಪ ಹಾಗೂ ಮಕ್ಕಳು ಅಣಬೇರು
ಶ್ರೀಮತಿ ಅನಸೂಯಮ್ಮ ಮತ್ತು ಕೆ.ಎಂ. ಪರಮೇಶ್ವರಪ್ಪ ಹಾಗೂ ಮಕ್ಕಳು ಅಣಬೇರು
ಶ್ರೀಮತಿ ವೀಣಾ ಎಸ್. ಮತ್ತು ಕೆ.ಎನ್ ಬಸವರಾಜು, ಮೊಮ್ಮಗ : ಕೆ.ಬಿ. ಚೇತನ್
ಶ್ರೀಮತಿ ಶಿವರುದ್ರಮ್ಮ ಮತ್ತು ಕೆ.ಎನ್ ಸಿದ್ದಪ್ಪ ಹಾಗೂ ಮಕ್ಕಳು ಕೋಗುಂಡಿ
ಕೋಟೆಹಾಳ್ ವಂಶಸ್ಥರು ಅಣಬೇರು, ಗೌಡ್ರ ವಂಶಸ್ಥರು ಕೋಗುಂಡಿ.


## ಮುರಿಗೆಪ್ಪ ಗೋಪಾಲಪುರ ನಿಧನ



ದಾವಣಗೆರೆ ಸಿಟಿ, 2ನೇ ಮುಖ್ಯರಸ್ತೆ, 4ನೇ ಕ್ರಾಸ್, ಟೀಚರ್ ಕಾಲೋನಿ ವಾಸಿ ಮುರಿಗೆಪ್ಪ ಗೋಪಾಲಪುರ (76) ಇವರು ದಿನಾಂಕ : 7.11.2024ರ ಗುರುವಾರ ಬೆಳಿಗ್ಗೆ 10.15ಕ್ಕೆ ನಿಧನರಾದರು. ಮೂವರು ಪುತ್ರರು, ನಾಲ್ವರು ಪುತ್ರಿಯರು, ಗೋಪಾಲಪುರ ವಂಶಸ್ಥರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 8.11.2024ರ ಶುಕ್ರವಾರ ಬೆಳಿಗ್ಗೆ 9 ಗಂಟೆಗೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

# ಹರಿಹರ : ಸ್ಮಶಾನಕ್ಕಾಗಿ ಭೂಮಿ ನೀಡಲು ದಲಿತರ ಒತ್ತಾಯ



ಹರಿಹರ, ನ. 7 - ನಗರ ಸಭೆ ವ್ಯಾಪ್ತಿಯಲ್ಲಿನ ಗುತ್ತೂರು ಗ್ರಾಮದ ದಲಿತರಿಗೆ ಸ್ಮಶಾನ (ರುದ್ರ ಭೂಮಿ) ಇಲ್ಲದ ಕಾರಣ, ಮೃತ ಪಟ್ಟವರ ಶವ ಸಂಸ್ಕಾರ (ಅಂತ್ಯಕ್ರಿಯೆ) ಮಾಡಲು ಗ್ರಾಮದ ದಲಿತರು ಹಲವಾರು ತೊಂದರೆ ಅನುಭವಿಸುತ್ತಿದ್ದು, ಸ್ಮಶಾನಕ್ಕಾಗಿ ಭೂಮಿ ನೀಡಬೇಕೆಂದು ಒತ್ತಾಯಿಸಿ ಗ್ರಾಮದ ದಲಿತರು ಬುಧವಾರ ನಗರಸಭೆ ಅಧ್ಯಕ್ಷೆ ಕವಿತಾ ಮಾರುತಿ ಬೇಡರ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಅಜ್ಜಪ್ಪ ದೊಡ್ಮನಿ ಮಾತನಾಡಿ, ಕಳೆದ ಹಲವಾರು ವರ್ಷಗಳಿಂದ ರುದ್ರ ಭೂಮಿಗಾಗಿ ಅಧಿಕಾರಿಗಳಿಗೆ ಮತ್ತು ಜನ ಪ್ರತಿನಿಧಿಗಳಿಗೆ ಮನವಿ ಸಲ್ಲಿಸುತ್ತಾ ಬಂದಿದ್ದು, ಇಲ್ಲಿಯವರೆಗೂ ನಮಗೆ ರುದ್ರಭೂಮಿಯನ್ನು ನೀಡಿಲ್ಲ ಎಂದು ಕಿಡಿಕಾರಿದರು. ಗುತ್ತೂರು ಗ್ರಾಮದಲ್ಲಿರುವ ದಲಿತರಾದ ನಮಗೆ ಸ್ಮಶಾನಕ್ಕೆ ಸರ್ಕಾರ ಭೂಮಿಯನ್ನು ನೀಡದಿರುವ ಕಾರಣ, ಊರ ಹತ್ತಿರದಲ್ಲಿಯೇ ಹರಿಯುತ್ತಿರುವ ತುಂಗಭದ್ರಾ ನದಿಯ ದಡದಲ್ಲಿಯೇ ಶವ ಸಂಸ್ಕಾರವನ್ನು ಮಾಡುತ್ತಾ ಬಂದಿರುತ್ತೇವೆ.

ಮಳೆಗಾಲ ಬಂತೆಂದರೆ ಸಾಕು, ಆ ಸಮಯದಲ್ಲಿ ಸತ್ತವರ ಶವವನ್ನು ಹೆಗಲ ಮೇಲೆ ಹೊತ್ತು ಹರಿಯುವ ನದಿಯ ನೀರಿನಲ್ಲಿಯೇ, ರೈತರ ಗದ್ದೆಗಳ ಬದುವಿನಲ್ಲಿ ಏಳುತ್ತಾ-ಬೀಳುತ್ತಾ ಸಾಗಿ ನದಿಯ ದಡದಲ್ಲಿಯೇ ಶವ ಸಂಸ್ಕಾರ ಮಾಡುವ ದೃಶ್ಯ ನೋಡಿದರೆ ಎಂಥವರಿಗಾದರೂ ನೋವೆನ್ನಿಸದಿರಲಾರದು. ಆದ ಕಾರಣ ಸರ್ಕಾರದಿಂದ ಗುತ್ತೂರು ಗ್ರಾಮದ ದಲಿತರಿಗೆ ರುದ್ರ ಭೂಮಿ ನೀಡಬೇಕೆಂದು ಆಗ್ರಹಿಸಿದರು.

ಮುಖಂಡ ಹೆಚ್.ಬಿ.ಸಿ ನಾಗರಾಜ ಮಾತನಾಡಿ, ಸಂವಿಧಾನ ದೇಶದ ದಲಿತರಿಗೆ ಎಲ್ಲಾ ಸೌಲಭ್ಯಗಳನ್ನು ನೀಡಿದೆ. ಆದರೆ, ಗುತ್ತೂರು ಗ್ರಾಮದಲ್ಲಿ ದಲಿತರಿಗೆ ಸ್ಮಶಾನವನ್ನು ನೀಡದಿರುವುದು ನೋವಿನ ಸಂಗತಿಯಾಗಿದೆ ಎಂದರು. ಮನವಿ ಪತ್ರ ಸ್ವೀಕರಿಸಿದ ನಗರಸಭೆ ಅಧ್ಯಕ್ಷೆ ಕವಿತಾ ಮಾರುತಿ ಬೇಡರ ಮಾತನಾಡಿ, ಸಂವಿಧಾನ ಬದ್ದವಾಗಿ ದಲಿತರಿಗೆ ಸ್ಮಶಾನ ಭೂಮಿಯನ್ನು ನೀಡಲು ಸರ್ಕಾರಕ್ಕೆ ಪತ್ರ ಬರೆದು, ಭೂಮಿ ನೀಡಲಾಗುವುದೆಂದು ಭರವಸೆ ನೀಡಿದರು.

ಮುಖಂಡರಾದ ಮರಿಯಪ್ಪ, ಹನುಮಂತಪ್ಪ, ನಿಂಗಪ್ಪ, ರಾಜಶೇಖರ, ಬಸವರಾಜಪ್ಪ, ಎಲ್.ಬಿ. ಚೌಡಪ್ಪ, ಬಿ. ಬಸವರಾಜಪ್ಪ, ಹಾಲಪ್ಪ, ಪ್ರಕಾಶ, ಪರಶುರಾಮ್, ಹೊನ್ನಪ್ಪ, ಕೆಂಚಪ್ಪ, ಅಂಜಿನಪ್ಪ, ಮಾರ್ತಾಂಡಪ್ಪ, ನಾಗಪ್ಪ, ರಾಮಪ್ಪ, ರಘು, ಮೈಲಪ್ಪ ಸೇರಿದಂತೆ ಅನೇಕರು ಇದ್ದರು.

# ಕಮಲಾ ಸೋಲಿನಲ್ಲಿ ಬಿಡೆನ್ ಸಿಂಹಪಾಲು



**ಬಿಡೆನ್ ಸರ್ಕಾರದ ನೀತಿಗಳು, ವಿಳಂಬವಾಗಿ ಸ್ಪರ್ಧೆಯಿಂದ ಹಿಂದೆ ಸರಿದಿದ್ದು ಪರಾಭವಕ್ಕೆ ಪ್ರಮುಖ ಕಾರಣ**

ವಾಷಿಂಗ್ಟನ್, ನ. 7 - ಅಮೆರಿಕದ ಅಧ್ಯಕ್ಷ ಸ್ಥಾನದ ಚುನಾವಣೆಗೆ ಹಾಲಿ ಅಧ್ಯಕ್ಷ ಜೋ ಬಿಡೆನ್ ಸ್ಪರ್ಧಿಸಿಲ್ಲ. ಆದರೆ, ಸ್ಪರ್ಧೆಯಲ್ಲಿ ಧುಮುಕಿದ್ದ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಸೋಲಿನಲ್ಲಿ ದೊಡ್ಡ ಪಾಲು ಬಿಡೆನ್ ಅವರದ್ದಾಗಿದೆ ಎಂದು ವಿಶ್ಲೇಷಕರು ಹೇಳುತ್ತಿದ್ದಾರೆ.

ರಿಪಬ್ಲಿಕನ್ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಅವರು ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸಿದ್ದಾರೆ. ಬಿಡೆನ್ ಅವರು ವಯೋಸಂಬಂಧಿ ಸಮಸ್ಯೆ ಎದುರಿಸುತ್ತಿದ್ದರು. ಇಷ್ಟಾದರೂ, ಕೊನೆ ಗಳಿಗೆವರೆಗೂ ಮತ್ತೊಂದು ಅವಧಿಗೆ ಸ್ಪರ್ಧಿಸುವುದಾಗಿ ಪಟ್ಟು ಹಿಡಿದಿದ್ದರು. ಇದೇ ಕಮಲಾ ಹಿನ್ನಡೆಗೆ ಕಾರಣವಾಯಿತು ಎಂದು ಡೆಮಾಕ್ರಾಟ್ ಬಣದಲ್ಲಿ ಮಾತುಗಳು ಕೇಳಿ ಬರುತ್ತಿವೆ.

ಅಲ್ಲದೇ, ಕೊರೊನಾ ನಂತರ ಉಂಟಾದ ಹಣದುಬ್ಬರ ಮತ್ತು ಅಮೆರಿಕ - ಮೆಕ್ಸಿಕೋ ಗಡಿ ನಿರ್ವಹಣೆಯಲ್ಲಿ ಆದ ವೈಫಲ್ಯ ಪಕ್ಷಕ್ಕೆ ಹಿನ್ನಡೆ ತಂದಿದೆ.

ಸೋಲಿನ ದೊಡ್ಡ ಹೊಣೆ ಬಿಡೆನ್ ಮೇಲಿದೆ ಎಂದು 2020ರಲ್ಲಿ ಡೆಮೊಕ್ರಾಟಿಕ್ ಅಭ್ಯರ್ಥಿಯಾಗಲು ಸ್ಪರ್ಧೆ ನಡೆಸಿದ್ದ ಆಂಡ್ರ್ಯೂ ಯಾಂಗ್ ಹೇಳಿದ್ದಾರೆ. ಬಿಡೆನ್ ಜುಲೈ ತಿಂಗಳಲ್ಲಿ ಸ್ಪರ್ಧೆಯಿಂದ ಹಿಂದೆ ಸರಿದಿದ್ದರು. ಜನವರಿಯಲ್ಲೇ ಹಿಂದೆ ಸರಿದಿದ್ದರೆ ಪರಿಸ್ಥಿತಿ ಬೇರೆಯದೇ ಆಗಿರುತ್ತಿತ್ತು ಎಂದಿದ್ದಾರೆ.

ಕೊರೊನಾ ನಂತರ ಪರಿಸ್ಥಿತಿ ಎದುರಿಸಿದ್ದು, ಉಕ್ರೇನ್ ಸಮರಕ್ಕೆ ಬೆಂಬಲ ಕಲೆ ಹಾಕಿದ್ದು ಹಾಗೂ 1 ಟ್ರಿಲಿಯನ್ ಮೂಲಭೂತ ಸೌಲಭ್ಯದ ಮಸೂದೆಯ ಮೂಲಕ ಮುಂದಿನ ಪೀಳಿಗೆಗಳ ಮೇಲೆ ಪರಿಣಾಮ ಬೀರಿದ್ದು ಬಿಡೆನ್ ಅವರ ಕಾಲದ ಪ್ರಮುಖ ಬೆಳವಣಿಗೆಗಳಾಗಿವೆ. ಆದರೆ, ಟ್ರಂಪ್ ಮತ್ತೆ ಅಧಿಕಾರಕ್ಕೆ ಬರದಂತೆ ತಡೆಯುವಲ್ಲಿ ಬಿಡೆನ್ ವಿಫಲವಾಗಿದ್ದಾರೆ.

**ಮುಗಿದಿದ್ದ ರಾಜಕೀಯ :** ಟ್ರಂಪ್ ಅವರು ಎರಡು ಮಹಾಭಿಯೋಗ, ಗಂಭೀರ ಆರೋಪಕ್ಕೆ ಶಿಕ್ಷೆ ಹಾಗೂ ತಮ್ಮ ಬೆಂಬಲಿಗರಿಂದಲೇ ವಿರೋಧ ಎದುರಿಸಿದ್ದರು. ಟ್ರಂಪ್ ಅವರ ರಾಜಕೀಯ ಜೀವನ ಮುಗಿಯಿತು ಎಂದೇ ಬಹಳಷ್ಟು ಜನರು ಭಾವಿಸಿದ್ದರು. ಆದರೆ, ಬಿಡೆನ್ ಈ ಪರಿಸ್ಥಿತಿಯನ್ನು ಬಳಸಿಕೊಳ್ಳುವಲ್ಲಿ ವಿಫಲರಾಗಿದ್ದಾರೆ.

**ಟ್ರಂಪ್‌ಗೆ ಹಾದಿ :** ಬಿಡೆನ್ ಆಡಳಿತದ ಹಲವಾರು ನಿರ್ಧಾರಗಳನ್ನು ವಾಪಸ್ ಪಡೆಯುವುದಾಗಿ ಟ್ರಂಪ್ ಘೋಷಿಸಿದ್ದಾರೆ. ಮುಂದಿನ 20 ಇಲ್ಲವೇ 30 ವರ್ಷಗಳ ನಂತರ ಬಿಡೆನ್ ಅವರ ಕೆಲವು ಸಾಧನೆಗಳನ್ನು ಇತಿಹಾಸಕಾರರು ಗುರುತಿಸಬಹುದು ಎಂದು ಅರಿಜೋನಾ ವಿಶ್ವವಿದ್ಯಾಲಯದ ಸಸ್ಟೈನೆಬಲ್ ಡೆಮಾಕ್ರಸಿ ಸೆಂಟರ್ ನಿರ್ದೇಶಕ ಥಾಮ್ ರೈಲಿ ಹೇಳಿದ್ದಾರೆ.

ಆದರೆ, ಒಂದು ಬಾರಿ ಡೊನಾಲ್ಡ್ ಟ್ರಂಪ್ ಸೋಲಿಸಿ, ಮತ್ತೊಂದು ಅವಧಿಗೆ ಅವರೇ ಅಧಿಕಾರಕ್ಕೆ ಬರಲು ದಾರಿ ಮಾಡಿಕೊಟ್ಟವರು ಬಿಡೆನ್ ಎಂದೇ ಸದ್ಯದ ರಾಜಕೀಯ ಅವರನ್ನು ಗುರುತಿಸಲಿದೆ ಎಂದು ರೈಲಿ ತಿಳಿಸಿದ್ದಾರೆ.

**ವಯೋ ಸಮಸ್ಯೆ :** ಈ ಬಾರಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವ ಸಾಮರ್ಥ್ಯ ಇಲ್ಲ ಎಂಬುದನ್ನು ಗುರುತಿಸುವಲ್ಲಿ ಬಿಡೆನ್ ಸಾಕಷ್ಟು ವಿಳಂಬ ಮಾಡಿದರು ಎಂದು ಕಮಲಾ ಹ್ಯಾರಿಸ್ ಪ್ರಚಾರ ತಂಡದ ಹಲವು ಉನ್ನತರು ಅಭಿಪ್ರಾಯ ಪಟ್ಟಿದ್ದಾರೆ.

81 ವರ್ಷದ ಬಿಡೆನ್ ಅವರು ಮಾಧ್ಯಮಗಳ ಎದುರು ನಡೆದ ಚುನಾವಣಾ ಪ್ರಚಾರ ಅಭಿಯಾನದಲ್ಲಿ ಮುಖಭಂಗ ಕಂಡಿದ್ದರು. ಇನ್ನೂ ನಾಲ್ಕು ವರ್ಷ ದೇಶ ಮುನ್ನಡೆಸಲು ಅವರು ಸಮರ್ಥರಿದ್ದಾರೆಯೇ? ಎಂಬ ಪ್ರಶ್ನೆಗಳೂ ಉದ್ಭವಿಸಿದ್ದವು. ಆದರೆ, ಚುನಾವಣೆಗೆ ಸಾಕಷ್ಟು ಮೊದಲಿನಿಂದಲೂ ಬಿಡೆನ್ ವಯಸ್ಸಿನ ಸಮಸ್ಯೆಗಳ ಬಗ್ಗೆ ಅಮೆರಿಕದ ಮತದಾರರಿಗೆ ಕಳವಳ ಇತ್ತು.

ಬಿಡೆನ್‌ಗೆ ಸಾಕಷ್ಟು ವಯಸ್ಸಾಗಿದೆ, ಇನ್ನೂ ನಾಲ್ಕು ವರ್ಷ ಆಡಳಿತ ಮಾಡಲು ಸಾಧ್ಯವಾಗದು ಎಂದು 2023ರ ಆಗಸ್ಟ್‌ನಲ್ಲಿ ಶೇ.77ರಷ್ಟು ಅಮೆರಿಕನ್ನರು ಭಾವಿಸಿದ್ದರು ಎಂದು ಎಪಿ - ನಾರ್ಕ್ ಸೆಂಟರ್ ಫಾರ್ ಪಬ್ಲಿಕ್ ಅಫೇರ್ಸ್ ಸಮೀಕ್ಷೆ ತಿಳಿಸಿತ್ತು.

ಮಾಜಿ ಅಧ್ಯಕ್ಷ ಬರಾಕ್ ಒಬಾಮಾ ಸೇರಿದಂತೆ ಡೆಮಾಕ್ರಟಿಕ್ ಪಕ್ಷದ ಹಲವು ಪ್ರಭಾವಿಗಳು ಒತ್ತಡ ಹೇರಿದ ನಂತರ ಜುಲೈ 21ರಂದು ಬಿಡೆನ್ ಸ್ಪರ್ಧಾ ಕಣದಿಂದ ಹಿಂದೆ ಸರಿದಿದ್ದರು. ನಂತರ ಕಮಲಾ ಹ್ಯಾರಿಸ್ ಅವರು ಸ್ಪರ್ಧಿಸುವುದನ್ನು ಬೆಂಬಲಿಸಿದ್ದರು.

ನಂತರ ಕಮಲಾ ಅವರು ಬಿಡೆನ್‌ಗಿಂತ ಹೆಚ್ಚು ಉತ್ಸಾಹದಿಂದ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಿದ್ದರು. ಆದರೆ, ತಾವು ಆಯ್ಕೆಯಾದಲ್ಲಿ ಮುಂದಿನ ಆಡಳಿತ ಬಿಡೆನ್ ಅವರಿಗಿಂತ ಹೇಗೆ ಭಿನ್ನವಾಗಿರಲಿದೆ ಎಂಬುದನ್ನು ಜನರಿಗೆ ತಿಳಿಸುವಲ್ಲಿ ವಿಫಲರಾದರು.

**ಸ್ಪಷ್ಟವಿಲ್ಲದ ನಿಲುವು :** ಕಳೆದ ಸೆಪ್ಟೆಂಬರ್‌ನಲ್ಲಿ ಎ.ಬಿ.ಸಿ.ಯ ದಿ ವ್ಯೂ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಕಮಲಾ ಹ್ಯಾರಿಸ್, ಕಳೆದ ನಾಲ್ಕು ವರ್ಷಗಳಲ್ಲಿ ಬಿಡೆನ್ ಆಡಳಿತದಲ್ಲಿ ಸಂಪೂರ್ಣವಾಗಿ ಭಾಗಿಯಾಗಿದ್ದೆ. ನಾನು ಅಧ್ಯಕ್ಷಳಾಗಿದ್ದರೂ ಯಾವುದೇ ಬೇರೆ ನಿರ್ಧಾರ ತೆಗೆದುಕೊಳ್ಳುತ್ತಿರಲಿಲ್ಲ ಎಂದಿದ್ದರು. ಟ್ರಂಪ್ ಅಭಿಯಾನದಲ್ಲಿ ಹ್ಯಾರಿಸ್ ಅವರ ಈ ಹೇಳಿಕೆಯನ್ನು ವ್ಯಾಪಕವಾಗಿ ಬಳಸಿಕೊಳ್ಳಲಾಗಿತ್ತು.

ಅಲ್ಲದೇ, ಹ್ಯಾರಿಸ್ ಪ್ರಚಾರಕ್ಕೆ ಸಿಕ್ಕ ಸಮಯವೂ ತೀರಾ ಕಡಿಮೆ ಇತ್ತು. ಹೀಗಾಗಿ ತಮ್ಮ ನಿಲುವುಗಳನ್ನು ಜನತೆಗೆ ಸ್ಪಷ್ಟವಾಗಿ ತಿಳಿಸಲು ಸಾಧ್ಯವಾಗಲಿಲ್ಲ. ಬಿಡೆನ್ ಈ ವರ್ಷದ ಆರಂಭದಲ್ಲೇ ಕಣದಿಂದ ಹಿಂದೆ ಸರಿದಿದ್ದರೆ, ಹ್ಯಾರಿಸ್ ತಮ್ಮ ನಿಲುವುಗಳನ್ನು ಸ್ಪಷ್ಟಪಡಿಸಲು ಸಾಧ್ಯವಾಗಿರುತ್ತಿತ್ತು.

**ಹಣದುಬ್ಬರ, ವಲಸೆ :** ಕೊರೊನಾ ಮಹಾಮಾರಿ ನಂತರ ಹೆಚ್ಚಾದ ಹಣದುಬ್ಬರ ಹಾಗೂ ವಲಸೆ ವ್ಯವಸ್ಥೆಯ ಲೋಪಗಳು ಈ ಬಾರಿಯ ಚುನಾವಣೆ ಮೇಲೆ ಪ್ರಮುಖ ಪರಿಣಾಮ ಬೀರಿದ್ದವು. ಈ ವಿಷಯಗಳನ್ನು ಎದುರಿಸುವ ಕುರಿತು ಕಮಲಾ ಹ್ಯಾರಿಸ್ ಸ್ಪಷ್ಟ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ.

ಟ್ರಂಪ್ ಅಧ್ಯಕ್ಷರಾಗುವ ಜೊತೆಗೆ, ಅವರ ರಿಪಬ್ಲಿಕ್ ಪಕ್ಷವು ಸೆನೆಟ್ ಮೇಲೆ ನಿಯಂತ್ರಣ ಪಡೆದುಕೊಂಡಿದೆ. ಜನಪ್ರತಿನಿಧಿಗಳ ಸದನದ ಬಗ್ಗೆ ಇನ್ನೂ ನಿರ್ಧಾರವಾಗಿಲ್ಲ. ಹೀಗಾಗಿ ಈ ಚುನಾವಣೆಯಲ್ಲಿ ಬಿಡೆನ್ ತೆಗೆದುಕೊಂಡ ನಿರ್ಧಾರಗಳು ಪಕ್ಷಕ್ಕೆ ಸಾಕಷ್ಟು ಹಾನಿ ಮಾಡಿವೆ.

# ಟ್ರಂಪ್ ಗೆಲುವಿನಿಂದ ಜಾಗತಿಕ ಪರಿಣಾಮ

## ಉಕ್ರೇನ್ ಸಮರ, ಮಧ್ಯಪ್ರಾಚ್ಯ ಸಂಘರ್ಷ, ಕೊರಿಯಾ ಚಕಮಕಿಯಲ್ಲಿ ಬದಲಾವಣೆ ಸಾಧ್ಯತೆ

ಬರ್ಮಿಂಗ್‌ಹ್ಯಾಮ್, ನ. 7 - ಅಮೆರಿಕದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆ ಮುಂಬರುವ ದಿನಗಳಲ್ಲಿ ವಿಶ್ವದಾದ್ಯಂತ ಪರಿಣಾಮ ಬೀರಲಿದೆ. ಡೊನಾಲ್ಡ್ ಟ್ರಂಪ್ ಅಧ್ಯಕ್ಷರಾಗಲಿರುವುದು ಹಾಗೂ ಸೆನೆಟ್ ಬಹುಮತವನ್ನು ರಿಪಬ್ಲಿಕನ್ ಪಕ್ಷ ಪಡೆದಿರುವುದು ಹಲವು ನೀತಿಗಳಲ್ಲಿ ಬದಲಾವಣೆ ತರಲಿದೆ.



ಈ ಬೆಳವಣಿಗೆಯನ್ನು ಅಂತರರಾಷ್ಟ್ರೀಯ ಸಮುದಾಯದಲ್ಲಿ ಹಲವು ದೇಶಗಳು ಸ್ವಾಗತಿಸಿದ್ದರೆ, ಇನ್ನು ಹಲವು ದೇಶಗಳು ಮುಂದಿನ ಪರಿಣಾಮಗಳ ಬಗ್ಗೆ ಚಿಂತಿತವಾಗಿವೆ.

**ಉಕ್ರೇನ್ ಸಮರದಲ್ಲಿ ಮಧ್ಯಸ್ಥಿಕೆ :** ಉಕ್ರೇನ್ ಸಮರಕ್ಕೆ ಮಂಗಳ ಹಾಡಲು ಟ್ರಂಪ್ ಪ್ರಯತ್ನ ನಡೆಸುವ ಸಾಧ್ಯತೆ ಇದೆ. ಉಕ್ರೇನ್ ಹಾಗೂ ರಷ್ಯಾ ಸಂಧಾನಕ್ಕೆ ಟ್ರಂಪ್ ಮಧ್ಯಸ್ಥಿಕೆ ವಹಿಸಿ, ಕದನ ವಿರಾಮಕ್ಕೆ ಪ್ರಯತ್ನ ನಡೆಸುವ ಸಾಧ್ಯತೆ ದಟ್ಟವಾಗಿದೆ. ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡು ಹಿಡಿಯಲೂ ಅವರು ಮುಂದಾಗುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ.

ಮುಂದಿನ ದಿನಗಳಲ್ಲಿ ನ್ಯಾಟೋದಲ್ಲಿ ಉಕ್ರೇನ್‌ಗೆ ಸದಸ್ಯತ್ವ ನೀಡಬಾರದು ಎಂಬ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುತಿನ್ ಬೇಡಿಕೆಗೆ ಟ್ರಂಪ್ ಒಪ್ಪಲಿದ್ದಾರೆ ಎನ್ನಲಾಗುತ್ತಿದೆ.

**ನೇತನ್ಯಾಹು ಹಾದಿ ಸುಗಮ :** ಟ್ರಂಪ್ ಅವರು ಈ ಹಿಂದಿನಿಂದಲೂ ಸೌದಿ ಅರೇಬಿಯ ಹಾಗೂ ಇಸ್ರೇಲ್‌ನ ಪ್ರಬಲ ಬೆಂಬಲಿಗರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಇರಾನ್ ಕುರಿತು ಕಠಿಣ ನಿಲುವು ತಳೆಯುವ ಸಾಧ್ಯತೆ ಇದೆ. ಇದು ಇಸ್ರೇಲ್ ಪ್ರಧಾನ ಮಂತ್ರಿ ಬೆಂಜಮಿನ್ ನೇತನ್ಯಾಹು ಅವರ ಹಾದಿ ಸುಗಮಗೊಳಿಸಲಿದೆ.

ಇರಾನ್ ಪರೋಕ್ಷ ಪಡೆಗಳಾದ ಹಮಾಸ್, ಹೆಜ್ಬುಲ್ಲಾ ಹಾಗೂ ಹೌತಿಗಳನ್ನು ನಿವಾರಿಸಲು ನೇತನ್ಯಾಹು ಪ್ರಯತ್ನ ನಡೆಸಿದ್ದಾರೆ. ಇರಾನ್ ಸಾಮರ್ಥ್ಯ ಕಡಿಮೆ ಮಾಡಲು ಹೋರಾಟ ನಡೆಸುತ್ತಿದ್ದಾರೆ. ಗಾಜಾದಲ್ಲಿ ದಾಳಿ ನಡೆಸುವುದನ್ನು ಟೀಕಿಸುತ್ತಿದ್ದ ರಕ್ಷಣಾ ಸಚಿವ ಯೋವ್ ಗ್ಯಾಲಂಟ್ ಅವರನ್ನು ಸಂಪುಟದಿಂದ ಕೈ ಬಿಟ್ಟಿರುವ ನೇತನ್ಯಾಹು, ಸಂಘರ್ಷ ಮುಂದುವರೆಸುವ ಸೂಚನೆ ನೀಡಿದ್ದಾರೆ. ಲೆಬನಾನ್‌ನಲ್ಲಿ ಸಂಘರ್ಷ ಇನ್ನಷ್ಟು ವಿಸ್ತಾರವಾಗಲಿದೆ. ಇದರಿಂದ ಇರಾನ್ ಹಿನ್ನಡೆ ಅನುಭವಿಸುವ ಸಾಧ್ಯತೆಯೂ ಇದೆ.

ಟ್ರಂಪ್ ಗೆಲುವು ನೇತನ್ಯಾಹು ಕೈ ಮತ್ತಷ್ಟು ಬಲಪಡಿಸಿದೆ. ಮತ್ತೊಂದೆಡೆ, ನೇತನ್ಯಾಹು ಕಾರಣ ದಿಂದ ಟ್ರಂಪ್ ಸಹ ಬಲ ಪಡೆಯಲಿದ್ದಾರೆ. ರಷ್ಯಾ ತನ್ನ ಉಕ್ರೇನ್ ಸಮರಕ್ಕಾಗಿ ಇರಾನ್‌ನಿಂದ ಬೆಂಬಲ ಪಡೆಯುತ್ತಿದೆ. ಇರಾನ್ ಮೇಲೆ ಒತ್ತಡ ಹೆಚ್ಚಾದರೆ, ರಷ್ಯಾ ಸಂಧಾನಕ್ಕೆ ಬರುವ ಸಾಧ್ಯತೆಯೂ ಹೆಚ್ಚಾಗಿದೆ. ಉಕ್ರೇನ್‌ನಿಂದ ಹಿಂದೆ ಸರಿದಲ್ಲಿ, ನೇತನ್ಯಾಹು ಮೇಲೆ ಕಡಿವಾಣ ಹಾಕುವುದಾಗಿ ಟ್ರಂಪ್ ದಾಳ ಹಾಕುವ ಸಾಧ್ಯತೆಯೂ ಇದೆ.

**ಆಮದು ತೆರಿಗೆ ಹೆಚ್ಚಳ :** ಚೀನಾ ಹಾಗೂ ಅಮೆರಿಕದ ನಡುವಿನ ಸಂಬಂಧಗಳಲ್ಲೂ ಬದಲಾವಣೆಯಾಗುವ ಸಾಧ್ಯತೆ ಇದೆ. ಚೀನಾ ಕುರಿತು ಈ ಹಿಂದೆ ಟ್ರಂಪ್ ಆಡಳಿತದಲ್ಲಿ ಜಾರಿಗೆ ತರಲಾದ ಹಲವಾರು ನೀತಿಗಳನ್ನು ಬಿಡೆನ್ ಆಡಳಿತ ಮುಂದು ವರೆಸಿತ್ತು. ಈಗ ಮತ್ತಷ್ಟು ಬಲದಿಂದ ಟ್ರಂಪ್ ಅದೇ ನೀತಿಗಳನ್ನು ಜಾರಿಗೆ ತರುವ ಸಾಧ್ಯತೆ ಇದೆ.

ಆಮದು ತೆರಿಗೆ ಹೆಚ್ಚಿಸಲು ಟ್ರಂಪ್ ಮುಂದಾಗಲಿದ್ದಾರೆ. ಚೀನಾ ಗುರಿಯಾಗಿಟ್ಟುಕೊಂಡು ಈ ಕ್ರಮ ತೆಗೆದುಕೊಳ್ಳುವ ಸಾಧ್ಯತೆ ಇದೆ. ಆದರೆ, ಚೀನಾ ಜೊತೆ ಮುತ್ಸದ್ದಿತನದಿಂದ ನಡೆದುಕೊಳ್ಳುವ ಹೊಣೆಯೂ ಟ್ರಂಪ್ ಮೇಲಿದೆ.

ತೈವಾನ್, ಫಿಲಿಪೈನ್ಸ್, ದಕ್ಷಿಣ ಕೊರಿಯಾ ಹಾಗೂ ಜಪಾನ್ ಸೇರಿದಂತೆ ಹಲವು ಏಷಿಯಾ ದೇಶಗಳ ಜೊತೆ ಅಮೆರಿಕ ಒಪ್ಪಂದ ಹೊಂದಿದೆ. ಈ ಒಪ್ಪಂದಗಳನ್ನು ಯಾವ ರೀತಿ ಟ್ರಂಪ್ ನಿರ್ವಹಿಸಲಿದ್ದಾರೆ ಎಂಬ ಪ್ರಶ್ನೆಗಳೂ ಇವೆ.

**ಕೊರಿಯಾ ಕುತೂಹಲ :** 2017ರಲ್ಲಿ ಉತ್ತರ ಕೊರಿಯಾ ಖಂಡಾಂತರ ಕ್ಷಿಪಣಿ ಪರೀಕ್ಷೆ ನಡೆಸಿತ್ತು. ಆಗ ಮೊದಲ ಅವಧಿಯ ಅಧಿಕಾರದಲ್ಲಿದ್ದ ಟ್ರಂಪ್, ದಕ್ಷಿಣ ಕೊರಿಯಾವನ್ನು ಅಪಾಯಕಾರಿ ಸಮರದ ಅಂಚಿಗೆ ತಂದು ನಿಲ್ಲಿಸಿದ್ದರು. ಇತ್ತೀಚಿನ ದಿನಗಳಲ್ಲಿ ಉತ್ತರ ಕೊರಿಯಾ ರಷ್ಯಾ ಜೊತೆ ನಿಕಟ ಸಂಬಂಧ ಹೊಂದುತ್ತಿದೆ. ಹೀಗಾಗಿ ಟ್ರಂಪ್ ಎರಡನೇ ಅವಧಿ ಕೊರಿಯಾ ವಲಯದಲ್ಲೂ ಕುತೂಹಲಕ್ಕೆ ಕಾರಣವಾಗಿದೆ.

ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುತಿನ್ ಜೊತೆ ಟ್ರಂಪ್ ಒಪ್ಪಂದ ಮಾಡಿಕೊಂಡಲ್ಲಿ ಅದು ಯುರೋಪ್ ಒಕ್ಕೂಟ ಹಾಗೂ ನ್ಯಾಟೋಗೆ ಹಿನ್ನಡೆ ಯಾಗಲಿದೆ. ಹೀಗಾಗಿ ಯುರೋಪ್ ದೇಶಗಳೂ ಸಹ ಟ್ರಂಪ್ ಮುಂದಿನ ಹೆಜ್ಜೆ ಬಗ್ಗೆ ತುದಿಗಾಲಿನಿಂದ ಕಾಯುತ್ತಿವೆ. ಯುರೋಪ್ ರಕ್ಷಣಾ ಸಾಮರ್ಥ್ಯ ಅಷ್ಟೇನೂ ಉತ್ತಮ ಸ್ಥಿತಿಯಲಿಲ್ಲ. ಅಮೆರಿಕದ ರಕ್ಷಣಾ ನೆರಳು ಹಿಂದೆ ಸರಿದರೆ, ಪುತಿನ್ ತಮ್ಮ ಮಹತ್ವಾಕಾಂಕ್ಷೆ ವಿಸ್ತರಿಸಬಹುದು ಎಂಬ ಕಳವಳ ಯುರೋಪ್ ದೇಶಗಳಲ್ಲಿದೆ.

ಅಮೆರಿಕ ಬಲಿಷ್ಠ ದೇಶವಾಗಿದೆಯಾದರೂ, ಅದರ ಸಾಮರ್ಥ್ಯ ಕುಸಿಯುವ ಹಾದಿಯಲ್ಲಿದೆ. ಮತ್ತೊಂದೆಡೆ ಚೀನಾ ಬಲಿಷ್ಠವಾಗುವ ಹಾದಿಯಲ್ಲಿದೆ. ಈ ಹಿನ್ನೆಲೆಯಲ್ಲಿ ಅಮೆರಿಕವನ್ನು ನಂಬಿಕೊಂಡು ಮುಂದುವರಿಯಬೇಕೇ? ಅಥವಾ ಪರ್ಯಾಯ ದಾರಿ ಹುಡುಕಿಕೊಳ್ಳಬೇಕೇ ಎಂಬ ಚಿಂತೆ ಏಷಿಯಾದ ಹಲವು ದೇಶಗಳಲ್ಲಿದೆ. ಈ ಎಲ್ಲ ಕಾರಣಗಳಿಂದ ಟ್ರಂಪ್ ಆಡಳಿತವು ಅನಿಶ್ಚಿತತೆ ಹಾಗೂ ಅಸ್ಥಿರತೆಗಳನ್ನು ಎದುರಿಸಬೇಕಿದೆ.

# ಜಿಲ್ಲೆಯಲ್ಲಿ ಬೆಂಬಲ ಬೆಲೆಯಲ್ಲಿ ಮೆಕ್ಕೆಜೋಳ ಖರೀದಿ

**(1ನೇ ಪುಟದಿಂದ)** ಪ್ರಕ್ರಿಯೆಯನ್ನು ದಾವಣಗೆರೆ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಮೆಕ್ಕೆಜೋಳ ಬೆಳೆದ ಆಸಕ್ತ ರೈತರು, ತಮ್ಮ ಮೆಕ್ಕೆಜೋಳದ ಮಾದರಿಗಳನ್ನು ತಮ್ಮ ವ್ಯಾಪ್ತಿಯ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ನೀಡಬಹುದು.

ಪ್ರತಿ ಒಬ್ಬ ರೈತರಿಂದ ಗರಿಷ್ಠ 500 ಕ್ವಿಂಟಾಲ್ ಮೆಕ್ಕೆಜೋಳ ಸರಬರಾಜಿಗೆ ಸೀಮಿತಗೊಳಿಸಿದ್ದು, ದಾವಣಗೆರೆ, ಹರಿಹರ, ಜಗಳೂರು ತಾಲ್ಲೂಕಿಗೆ ಸಹಾಯಕ ವ್ಯವಸ್ಥಾಪಕರು (ಪ.ಸಂ) ಡಾ. ಸೂರಜ್, ಮೊ.ಸಂ: 9844346640, ಹೊನ್ನಾಳಿ, ಚನ್ನಗಿರಿ ಹಾಗೂ ನ್ಯಾಮತಿ ಸಹಾಯಕ ವ್ಯವಸ್ಥಾಪಕರು (ಎಫ್ ಅಂಡ್ ಎಫ್) ಹರೀಶ್ ಕರೇಗೌಡ ಮೊ.ಸಂ: 7399530405ಗೆ ಸಂಪರ್ಕಿಸಲು ಶಿಕಾರಿಪುರದ ಪಶು ಆಹಾರ ಘಟಕದ ಪ್ರಧಾನ ವ್ಯವಸ್ಥಾಪಕರು ತಿಳಿಸಿದ್ದಾರೆ.

## ನಂತರ ಅರ್ಹತೆ ಬದಲಿಸಲಾಗದು

**(1ನೇ ಪುಟದಿಂದ)** ನಂತರ ಉದ್ಯೋಗ ಭರ್ತಿಯವರೆಗೆ ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿ ಇರುತ್ತದೆ. ಈ ಅವಧಿಯಲ್ಲಿ ನಿಯಮಗಳನ್ನು ಬದಲಿಸಬಾರದು ಎಂದು ಪೀಠ ತಿಳಿಸಿದೆ.

ಆದರೆ ನಿಯಮಗಳಲ್ಲಿ ಅವಕಾಶ ಇದ್ದರೆ ಹಾಗೂ ಈ ಬದಲಾವಣೆಯ ನಿಯಮಗಳು ಜಾಹೀರಾತಿನಲ್ಲಿದ್ದರೆ ಮಾತ್ರ ಅರ್ಹತಾ ಮಾನದಂಡಗಳನ್ನು ಬದಲಿಸಬಹುದು ಎಂದು ಪೀಠ ಹೇಳಿದೆ.

ಈ ತೀರ್ಪು ನೀಡಿದ ಪೀಠದಲ್ಲಿ ನ್ಯಾಯಮೂರ್ತಿಗಳಾದ ಹೃಶಿಕೇಶ್ ರಾಯ್, ಪಿ.ಎಸ್. ನರಸಿಂಹ, ಪಂಕಜ್ ಮಿತ್ತಲ್ ಹಾಗೂ ಮನೋಜ್ ಮಿಶ್ರ ಅವರಿದ್ದಾರೆ. ನೇಮಕಾತಿ ಜಾಹೀರಾತು ಪ್ರಕಟಿಸಿದ ನಂತರ ನಿಯಮಗಳಲ್ಲಿ ಬದಲಾವಣೆ ತರುವುದಿದ್ದರೆ ಅದು ಸಂವಿಧಾನದ 14ನೇ ವಿಧಿಗೆ ಅನುಗುಣವಾಗಿರಬೇಕು ಹಾಗೂ ನಿರಂಕುಶ ಸ್ವರೂಪದಲ್ಲಿ ಇರಬಾರದು ಎಂದು ಪೀಠ ತಿಳಿಸಿದೆ.

## ವಿದ್ಯಾರ್ಥಿ ಭವನ ವೃತ್ತ ಆಗಲಿದೆ ಜರ್ಮನ್ ಮಾದರಿ

**(1ನೇ ಪುಟದಿಂದ)** ನಿರ್ಮಿಸುವ ಈ ವೃತ್ತದ ಸುತ್ತಲಿನ ಪ್ರದೇಶ ಬಹು ವರ್ಷ ಬಾಳಿಕೆಗೆ ಬರುತ್ತದೆ ಎನ್ನಲಾಗಿದೆ. ಒಂದು ಅಡಿ ನಾಲ್ಕು ಇಂಚು ಆಳದಲ್ಲಿ 100 ಎಂಎ ಜಿಲ್ಲಿ ಕಲ್ಲು, 100 ಎಂಎಂ ಡಿಎಲ್‌ಪಿ, ಉತ್ತಮ ದರ್ಜೆಯ ಕಾಂಕ್ರಿಟ್ ಹಾಕಲಾಗುತ್ತದೆ. ಜೊತೆಗೆ ಆಂಧ್ರ ಪ್ರದೇಶದಿಂದ ತರಿಸಲಾಗಿರುವ ಗ್ರಾನೈಟ್ ಕಲ್ಲುಗಳನ್ನು ಹೊಂದಿಸಲಾಗುತ್ತದೆ.

ನಗರದ ಅಂದ ಹೆಚ್ಚಿಸುವ ಹಾಗೂ ಬಾಳಿಕೆ ಬರುವಂತಹ ಈ ಜರ್ಮನ್ ಬಾದರಿ ಯಶಸ್ವಿಯಾದರೆ, ಉಳಿದ ವೃತ್ತಗಳೂ ಸಹ ಅಂದಗೊಳ್ಳುವುದರಲ್ಲಿ ಸಂದೇಹವಿಲ್ಲ.

# ಡಿ.15ಕ್ಕೆ ಜಿಲ್ಲಾ ಮಾದಿಗರ ಸಮಾವೇಶ, ಸಾಮೂಹಿಕ ಕಲ್ಯಾಣ ಮಹೋತ್ಸವ



ದಾವಣಗೆರೆ, ನ.7- ಶ್ರೀ ಗುರು ರಾಮದಾಸ ಸ್ವಾಮಿ ಅಧ್ಯಾತ್ಮಿಕ ಸೇವಾ ಟ್ರಸ್ಟ್ ವತಿಯಿಂದ ಎವಿಕೆ ರಸ್ತೆಯಲ್ಲಿನ ಆದಿ ಕರ್ನಾಟಕ ವಿದ್ಯಾರ್ಥಿ ನಿಲಯದ ಮೈದಾನ ದಲ್ಲಿ ಬರುವ ಡಿಸೆಂಬರ್ 15ರ ಭಾನುವಾರ ಬೆಳಗ್ಗೆ 11.30ಕ್ಕೆ ಗುರು ರಾಮದಾಸರ 66ನೇ ಹಾಗೂ ಕೊಂಡಯ್ಯ ಸ್ವಾಮಿಗಳ 18ನೇ ಪುಣ್ಯಾರಾಧನೆ ಜತೆಗೆ ಮಾದಿಗ ಸಮಾಜದ ಜಿಲ್ಲಾ ಮಟ್ಟದ ಸಮಾವೇಶ ಹಮ್ಮಿಕೊಂಡಿದ್ದೇವೆ ಎಂದು ಟ್ರಸ್ಟಿನ ಅಧ್ಯಕ್ಷ ಬಿ.ಹೆಚ್. ವೀರಭದ್ರಪ್ಪ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು 33ನೇ ವರ್ಷದ ಸಾಮೂಹಿಕ ಸರ್ವ ಧರ್ಮೀಯರ ಸಾಮೂಹಿಕ ಕಲ್ಯಾಣ ಮಹೋತ್ಸವ ಹಾಗೂ 33ನೇ ವರ್ಷದ ಗುರು ಮಾದಾರ ಚನ್ನಯ್ಯ ಸ್ವಾಮಿಯವರ ಜಯಂತ್ಯುತ್ಸವ ಏರ್ಪಡಿಸಲಾಗಿದೆ ಎಂದು ಹೇಳಿದರು.

ಜಿಲ್ಲಾ ಮಾದಿಗರ ಸಮಾವೇಶವನ್ನು ಸಿಎಂ ಸಿದ್ದರಾಮಯ್ಯ ಉದ್ಘಾಟಿಸಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಆಹಾರ, ನಾಗರಿಕರ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ, ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್, ಮಾಜಿ ಸಚಿವ ಹೆಚ್. ಆಂಜನೇಯ, ಬಿ.ಎನ್. ಚಂದ್ರಪ್ಪ, ಶಾಸಕ ರಾದ ಕೆ.ಎಸ್. ಬಸವಂತಪ್ಪ, ಬಸವ ರಾಜ ಶಿವಗಂಗಾ ಮಾಜಿ ಸಚಿವ ಎಸ್.ಎ ರವೀಂದ್ರ ನಾಥ್ ಸೇರಿದಂತೆ ಸಮಾಜದ ಮುಖಂಡರು ಹಾಗೂ ಶಾಸಕರು ಪಾಲ್ಗೊಳ್ಳಲಿ ದ್ದಾರೆ ಎಂದು ಮಾಹಿತಿ ನೀಡಿದರು.

ಎಸ್ಸಿ ವಿಭಾಗದಲ್ಲಿನ ಎಲ್ಲಾ ಜನಾಂಗದವರು ಸಮಾವೇಶದಲ್ಲಿ ಪಾಲ್ಗೊಳ್ಳಬಹುದಾಗಿದ್ದು, ಎಲ್ಲರೂ ಒಕ್ಕೊರಲಿನಿಂದ ಸುಪ್ರೀಂ ಕೋರ್ಟ್ ತೀರ್ಪಿನಂತೆ ಸದಾಶಿವ ಆಯೋಗದ ಮೀಸಲಾತಿ ವರದಿಯನ್ನು ಜಾರಿಗೊಳಿಸುವಂತೆ ಸರ್ಕಾರಕ್ಕೆ ಒತ್ತಾಯಿಸಲಿದ್ದೇವೆ ಎಂದು ತಿಳಿಸಿದರು.


ಈ ವೇಳೆ ಟ್ರಸ್ಟಿನ ಖಜಾಂಚಿ ಬಿ.ಎಂ. ರಾಮಸ್ವಾಮಿ, ಪ್ರಧಾನ ಕಾರ್ಯದರ್ಶಿ ಬಿ.ಆರ್. ಶಿವಮೂರ್ತಿ, ಮುಖಂಡರಾದ ಎನ್. ರುದ್ರಮುನಿ, ಶೇಖರಪ್ಪ, ಎಲ್.ಡಿ ಗೋಣೆಪ್ಪ, ಹೆಚ್. ಮಲ್ಲೇಶ್, ಎಂ. ಗುರುಮೂರ್ತಿ, ಅಂಜಿನಪ್ಪ, ಮಲ್ಲೇಶಪ್ಪ, ನಾಗರಾಜಪ್ಪ, ಹೆಗ್ಗೆರೆ ರಂಗಪ್ಪ, ಜಿ.ರಾಕೇಶ್, ಹರೀಶ್, ಮಲ್ಲಿಕಾರ್ಜುನ್ ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.

## ವಕ್ಫ್ ಸಮಿತಿಗೆ ವಿಪಕ್ಷಗಳ ಸದಸ್ಯರ ಬಹಿಷ್ಕಾರ

ಕೊಲ್ಕತಾ, ನ. 7 - ವಕ್ಫ್ ತಿದ್ದುಪಡಿ ಮಸೂದೆಗೆ ಸಂಬಂಧಿಸಿದಂತೆ ರೂಪಿಸಲಾಗಿರುವ ಸಂಸತ್ತಿನ ಜಂಟಿ ಸಮಿತಿ ಅಧ್ಯಕ್ಷ ಜಗದಂಬಿಕ ಪಾಲ್ ಅವರು ಏಕಪಕ್ಷೀಯವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಆರೋಪಿಸಿರುವ ವಿರೋಧ ಪಕ್ಷಗಳು, ನವೆಂಬರ್ 9 ರಿಂದ ಆರಂಭವಾಗಲಿರುವ ಮುಂದಿನ ಸುತ್ತಿನ ಸಭೆಯಲ್ಲಿ ಪಾಲ್ಗೊಳ್ಳುವುದಿಲ್ಲ ಎಂದು ಹೇಳಿವೆ.

ಜಗದಂಬಿಕಾ ಪಾಲ್ ಅವರು ಆರು ದಿನಗಳಲ್ಲಿ ಲಖ್ನೌ, ಭುವನೇಶ್ವರ, ಕೊಲ್ಕೊತಾ, ಪಾಟ್ನಾ ಹಾಗೂ ಲಖ್ನೌಗಳಲ್ಲಿ ಸಭೆಗಳನ್ನು ನಿಗದಿಪಡಿಸಿದ್ದಾರೆ. ಈ ಪ್ರವಾಸಕ್ಕೆ ಬಹಿಷ್ಕಾರ ಹಾಕಲು ಪ್ರತಿಪಕ್ಷಗಳ ಸದಸ್ಯರು ನಿರ್ಧರಿಸಿದ್ದಾರೆ ಎಂದು ತೃಣಮೂಲ ಕಾಂಗ್ರೆಸ್ ಸಂಸದ ಕಲ್ಯಾಣ್ ಬ್ಯಾನರ್ಜಿ ತಿಳಿಸಿದ್ದಾರೆ.

## ನಟ ಶಾರುಕ್ ಖಾನ್‌ಗೆ ಬೆದರಿಕೆ ಕರೆ



ಮುಂಬೈ, ನ. 7 - ಬಾಲಿವುಡ್ ನಟ ಶಾರುಖ್ ಖಾನ್ ಅವರಿಗೆ ಜೀವ ಬೆದರಿಕೆ ಎದುರಾಗಿದೆ. 50 ಲಕ್ಷ ರೂ. ನೀಡುವಂತೆ ಬೆದರಿಕೆ ಕರೆ ಬಂದಿದೆ ಎಂದು ಮುಂಬೈ ಪೊಲೀಸರು ಹೇಳಿದ್ದಾರೆ.

ಛತ್ತೀಸ್‌ಘಡದ ರಾಜಧಾನಿ ರಾಯಪುರದ ವಕೀಲರೊಬ್ಬರ ಹೆಸರಿನಲ್ಲಿ ನೋಂದಣಿ ಆಗಿರುವ ಮೊಬೈಲ್ ಸಂಖ್ಯೆಯಿಂದ ನಟನಿಗೆ ಬೆದರಿಕೆ ಬಂದಿದೆ. ಈ ಹಿನ್ನೆಲೆಯಲ್ಲಿ ವಕೀಲರಿಗೆ ಹಾಜರಾಗಲು ಸಮನ್ಸ್ ಕಳಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಕಳೆದ ವಾರ ನಾನು ಮೊಬೈಲ್ ಕಳೆದುಕೊಂಡಿದ್ದೆ. ಈ ಬಗ್ಗೆ ಪೊಲೀಸರಲ್ಲಿ ದೂರು ದಾಖಲಿಸಿದ್ದೇನೆ ಎಂದು ವಕೀಲ ಹೇಳಿದ್ದಾರೆ. ಈ ಹಿಂದೆ ನಟ ಸಲ್ಮಾನ್ ಖಾನ್‌ಗೆ ಬೆದರಿಕೆ ಕರೆಗಳು ಬಂದಿದ್ದವು. ಈ ಬಗ್ಗೆ ದೂರುಗಳು ದಾಖಲಾಗಿವೆ. ಅದರ ಬೆನ್ನಲ್ಲೇ ಶಾರುಖ್ ಖಾನ್ ಅವರಿಗೆ ಬೆದರಿಕೆ ಕರೆ ಬಂದಿದೆ.

## ಜರ್ಮನಿ : ಆಡಳಿತಾರೂಢ ಮೈತ್ರಿಕೂಟ ಪತನ

**(1ನೇ ಪುಟದಿಂದ)** ಮುದುವರೆಸುವುದಾಗಿ ಚಾನ್ಸಲರ್ ಸ್ಕಾಲ್ಜ್ ಹೇಳಿದ್ದಾರೆ. ಆದರೆ, ಸರ್ಕಾರ ವಿಸರ್ಜಿಸಿ, ಚುನಾವಣೆಗೆ ತೆರಳುವಂತೆ ಪ್ರತಿಪಕ್ಷಗಳು ಒತ್ತಾಯಿಸಿವೆ.

ದೇಶದ ಆರ್ಥಿಕತೆ ಮುನ್ನಡೆಸುವ ಬಗ್ಗೆ ಮೈತ್ರಿಕೂಟದಲ್ಲಿ ತೀವ್ರ ಭಿನ್ನಮತವಿತ್ತು. ಈ ಭಿನ್ನಮತವೇ ಮೈತ್ರಿಕೂಟದ ಕುಸಿತಕ್ಕೆ ಕಾರಣವಾಗಿದೆ.

## ಜಗಳೂರು: ಬೆಳೆಹಾನಿ ಪರಿಹಾರ ಅರ್ಜಿ ಸಲ್ಲಿಕೆಗೆ ದಿನಾಂಕ ವಿಸ್ತರಿಸಲು ಆಗ್ರಹ



ಜಗಳೂರು, ನ. 7 - ಹಿಂಗಾರು ಬೆಳೆ ಹಾನಿ ಪರಿಹಾರಕ್ಕೆ ಅರ್ಜಿ ಸಲ್ಲಿಕೆ ದಿನಾಂಕ ವಿಸ್ತರಿಸಲು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ (ನಂಜುಂಡಸ್ವಾಮಿ ಬಣ)ದಿಂದ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ತಾಲ್ಲೂಕು ಕಛೇರಿ ಮುಂಭಾಗದಲ್ಲಿ ಸರ್ಕಾರದ ವಿರುದ್ದ ಘೋಷಣೆ ಕೂಗುತ್ತಾ ಅರ್ಜಿ ಸ್ವೀಕರಿಸಲು ಕೈಯಲ್ಲಿ ಅರ್ಜಿ ಹಿಡಿದು ಆಗ್ರಹಿಸಿದರು.

ತಾಲ್ಲೂಕಿನಾದ್ಯಂತ ಅತಿವೃಷ್ಟಿಯಿಂದ ರೈತರ ಜಮೀನುಗಳು ಜಲಾವೃತಗೊಂಡು ಬೆಳೆಹಾನಿಗೊಳಗಾಗಿದ್ದು, ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದಾರೆ.

ಸರ್ಕಾರದಿಂದ ಹಿಂಗಾರು ಬೆಳೆ ಹಾನಿ ಪರಿಹಾರಕ್ಕೆ ಅರ್ಜಿ ಸ್ವೀಕರಿಸಲು ನವೆಂಬರ್ 6 ಕೊನೆ ದಿನಾಂಕ ನಿಗದಿಗೊಳಿಸಿದ್ದು ಮಾಹಿತಿ ಕೊರತೆಯಿಂದ ಬಹುತೇಕ ಅರ್ಹ ರೈತರು ಪರಿಹಾರ ಸೌಲಭ್ಯದಿಂದ ವಂಚಿತರಾಗುತ್ತಿದ್ದಾರೆ. ಇನ್ನೂ ಕಾಲಾವಕಾಶ ನೀಡಿ ದಿನಾಂಕ ವಿಸ್ತರಣೆ ಗೊಳಿಸಲು ಜಿಲ್ಲಾಡಳಿತ ಕ್ರಮಕೈಗೊಳ್ಳಬೇಕು ಎಂದು ಕಾರ್ಯದರ್ಶಿ ಭರಮಸಮುದ್ರ ಕುಮಾರ್ ಮನವಿ ಮಾಡಿದರು.

ತಹಶೀಲ್ದಾರ್ ಸೈಯ್ಯದ್ ಕಲೀಂ ಉಲ್ಲಾ ಮಾತನಾಡಿ, ಸರ್ಕಾರದ ಆದೇಶದಂತೆ ಅರ್ಜಿ ಸಲ್ಲಿಕೆಗೆ ಅವಧಿ ಮುಕ್ತಾಯಗೊಂಡಿದ್ದು. ರೈತರ ಹಿತದೃಷ್ಟಿಯಿಂದ ನ.7 ಸಂಜೆವರೆಗೂ ದಿನಾಂಕ ವಿಸ್ತರಿಸಲಾಗಿದೆ. ಹೆಚ್ಚಿನ ಬೇಡಿಕೆಗೆ ಜಿಲ್ಲಾಧಿಕಾರಿಗಳಿಗೆ ಸಂಪರ್ಕಿಸಲು ರೈತ ಸಂಘಟನೆ ಮುಖಂಡರುಗಳಿಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಮುಖಂಡರಾದ ತಿಮ್ಲಾಪುರ ಸೂರಪ್ಪ, ವಾಸಣ್ಣ, ಪಾಲನಾಯಕಪ್ಪ, ಮಾರಪ್ಪ ಮುಂತಾದವರು ಭಾಗವಹಿಸಿದ್ದರು.

# ಉಪಗ್ರಹ ಬ್ರಾಡ್‌ಬ್ಯಾಂಡ್ ಹರಾಜಿಲ್ಲ

## ಅಂಬಾನಿ ಬೇಡಿಕೆಗೆ ನಕಾರ, ಎಲಾನ್ ಮಸ್ಕ್ ವಾದಕ್ಕೆ ಬೆಂಬಲ

ನವದೆಹಲಿ, ನ. 7 - ಉಪಗ್ರಹ ಬ್ರಾಡ್‌ಬ್ಯಾಂಡ್ ಅನ್ನು ಹರಾಜಿಗೆ ಹಾಕುವುದಿಲ್ಲ. ಇದನ್ನು ಕಂಪನಿಗಳಿಗೆ ಆಡಳಿತಾತ್ಮಕವಾಗಿ ವಿತರಣೆ ಮಾಡಲಾಗುವುದು ಎಂದು ಕೇಂದ್ರ ಸಂಪರ್ಕ ಸಚಿವ ಜ್ಯೋತಿರಾದಿತ್ಯ ಹೇಳಿದ್ದಾರೆ.

ಉಪಗ್ರಹ ಬ್ರಾಡ್‌ಬ್ಯಾಂಡ್ ಅನ್ನು ಹರಾಜಿಗೆ ಹಾಕಬೇಕು ಎಂದು ಭಾರತೀಯ ಉದ್ಯಮಿಗಳಾದ ಮುಖೇಶ್ ಅಂಬಾನಿ ಹಾಗೂ ಸುನಿಲ್ ಮಿತ್ತಲ್ ಒತ್ತಾಯಿಸಿದ್ದರು. ಆದರೆ ಅಮೆರಿಕದ ಸ್ಟಾರ್‌ಲಿಂಕ್ ಮುಖ್ಯಸ್ಥ ಎಲಾನ್ ಮಸ್ಕ್ ಅವರು ಹರಾಜನ್ನು ವಿರೋಧಿಸಿದ್ದರು. ಆದರೆ, ಉಪಗ್ರಹ ಬ್ರಾಡ್‌ಬ್ಯಾಂಡ್ ಸ್ಪೆಕ್ಟ್ರಮ್ ಅನ್ನು ಉಚಿತವಾಗಿ ನೀಡುವುದಿಲ್ಲ. ಇದಕ್ಕಾಗಿ ಟೆಲಿಕಾಂ ನಿಯಂತ್ರಕ ಟ್ರಾಯ್ ಬೆಲೆ ನಿಗದಿಪಡಿಸಲಿದೆ ಎಂದು ಸಿಂಧಿಯಾ ಹೇಳಿದ್ದಾರೆ.

ಪ್ರತಿಯೊಂದು ದೇಶವು ಅಂತರರಾಷ್ಟ್ರೀಯ ಟೆಲಿ ಕಮ್ಯುನಿಕೇಷನ್ ಒಕ್ಕೂಟದಂತೆ ನಡೆದುಕೊಳ್ಳಬೇಕಿದೆ. ಈ ಸಂಘಟನೆಯು ಬಾಹ್ಯಾಕಾಶ ಇಲ್ಲವೇ ಉಪಗ್ರಹ ಸ್ಪೆಕ್ಟ್ರಮ್ ಕುರಿತ ನೀತಿಯನ್ನು ರೂಪಿಸುತ್ತದೆ. ಅದರ ನೀತಿಯ ಅನ್ವಯ ಉಪಗ್ರಹ ಸ್ಪೆಕ್ಟ್ರಮ್ ಅನ್ನು ಕಾರ್ಯನಿರ್ವಹಣೆ ಆಧಾರವಾಗಿ ನೀಡಬೇಕಿದೆ. ವಿಶ್ವದ ಯಾವುದೇ ದೇಶ ಉಪಗ್ರಹ ಸ್ಪೆಕ್ಟ್ರಮ್ ಹರಾಜಿಗೆ ಹಾಕಿಲ್ಲ ಎಂದು ಸಚಿವರು ತಿಳಿಸಿದ್ದಾರೆ.

ಭಾರತ ಸಹ ವಿಶ್ವಸಂಸ್ಥೆಯ ಡಿಜಿಟಲ್ ತಂತ್ರಜ್ಞಾನ ಸಂಸ್ಥೆಯಾದ ಇಂಟರ್‌ನ್ಯಾಷನಲ್ ಟೆಲಿಕಮ್ಯುನಿಕೇಷನ್ ಸದಸ್ಯ ದೇಶವಾಗಿದೆ.

ಆಡಳಿತಾತ್ಮಕ ಮಾರ್ಗದ ಮೂಲಕ ಉಪಗ್ರಹ ಸ್ಪೆಕ್ಟ್ರಮ್ ವಿತರಣೆ ಮಾಡಬೇಕು ಎಂದು ಸ್ಟಾರ್‌ಲಿಂಕ್ ಕಂಪನಿಯ ಮಸ್ಕ್ ಅವರಲ್ಲದೆ ಅಮೆಜಾನ್‌ನ ಪ್ರಾಜೆಕ್ಟ್ ಕ್ಯೂಪರ್ ಸಹ ಅಭಿಪ್ರಾಯ ಪಟ್ಟಿದ್ದರು.

ಅಂಬಾನಿ ನೇತೃತ್ವದ ರಿಲಯನ್ಸ್ ಜಿಯೋ ಕಂಪನಿಯು ಹರಾಜಿನ ಮೂಲಕ ಸ್ಪೆಕ್ಟ್ರಮ್ ವಿತರಣೆ ಮಾಡಬೇಕು ಎಂದು ಒತ್ತಾಯಿಸುತ್ತಾ ಬಂದಿದೆ. ಇದರಿಂದಾಗಿ ಈ ವಲಯದ ಹಳೆಯ ಹಾಗೂ ಹೊಸ ಕಂಪನಿಗಳಿಗೆ ಸಮಾನ ವೇದಿಕೆ ಸಿಗಲಿದೆ ಎಂದು ರಿಲಯನ್ಸ್ ಜಿಯೋ ಹೇಳಿತ್ತು.

ಟೆಲಿಕಾಂ ಉದ್ಯಮಿ ಸುನಿಲ್ ಮಿತ್ತಲ್ ಅವರೂ ಸಹ ಸ್ಪೆಕ್ಟ್ರಮ್ ಹರಾಜಿಗೆ ಒತ್ತಾಯಿಸಿದ್ದರು. ರಿಲಯನ್ಸ್ ಜಿಯೋ ಹಾಗೂ ಮಿತ್ತಲ್ ಅವರ ಭಾರತಿ ಏರ್‌ಟೆಲ್ ಕಂಪನಿಗಳು ದೇಶದ ಮುಂಚೂಣಿ ಟೆಲಿಕಾಂ ಕಂಪನಿಗಳಾಗಿವೆ. ಎರಡೂ ಕಂಪನಿಗಳು ಉಪಗ್ರಹ ಬ್ರಾಡ್‌ಬ್ಯಾಂಡ್ ವಲಯಕ್ಕೆ ಕಾಲಿರಿಸಲು ಬಯಸಿವೆ.


ಜಾಗತಿಕ ಪದ್ಧತಿಯಂತೆ ಭಾರತದಲ್ಲೂ ಸ್ಪೆಕ್ಟ್ರಮ್ ಅನ್ನು ಆಡಳಿತಾತ್ಮಕ ಮಾರ್ಗದ ಮೂಲಕ ನೀಡಬೇಕು ಎಂದು ಮಸ್ಕ್ ಒತ್ತಾಯಿಸುತ್ತಾ ಬಂದಿದ್ದಾರೆ. ಭಾರತದ ಟೆಲಿಕಾಂ ಹಾಗೂ ಇಂಟರ್‌ನೆಟ್ ಮಾರುಕಟ್ಟೆಗೆ ಪ್ರವೇಶಿಸಲು ಸ್ಟಾರ್‌ಲಿಂಕ್ ಬಯಸಿದೆ.

ಕಳೆದ ಡಿಸೆಂಬರ್‌ನಲ್ಲಿ ಟೆಲಿಕಾಂ ಕಾಯ್ದೆ 2023 ಜಾರಿಗೆ ತರಲಾಗಿತ್ತು. ಇದರ ಅನ್ವಯ ಉಪಗ್ರಹ ಸ್ಪೆಕ್ಟ್ರಮ್ ಅನ್ನು ಆಡಳಿತಾತ್ಮಕವಾಗಿ ವಿತರಣೆ ಮಾಡಲಾಗುವುದು ಎಂದು ಸಿಂಧಿಯಾ ಹೇಳಿದ್ದಾರೆ.

ಅದರಂತೆ ಸರ್ಕಾರ ಸ್ಪೆಕ್ಟ್ರಮ್ ಬೆಲೆ ನಿಗದಿ ಪಡಿಸಲಿದೆ. ಸ್ಟಾರ್‌ಲಿಂಕ್ ರೀತಿಯ ವಿದೇಶಿ ಉದ್ಯಮಗಳು ಧ್ವನಿ ಹಾಗೂ ಡಾಟಾ ಸೇವೆ ಒದಗಿಸಲು ಸಾಧ್ಯವಾಗಲಿದೆ. ಸ್ಪೆಕ್ಟ್ರಮ್ ಹರಾಜಿಗೆ ಮುಂದಾದರೆ ಸ್ಟಾರ್‌ಲಿಂಕ್ ರೀತಿಯ ಕಂಪನಿಗಳು ಸೇವೆ ಆರಂಭಿಸುವುದು ಕಠಿಣವಾಗಲಿದೆ.

ಸ್ಟಾರ್‌ಲಿಂಕ್ ತನ್ನ ಕಾರ್ಯನಿರ್ವಹಣೆಗಾಗಿ ಅರ್ಜಿ ದಾಖಲಿಸಿದೆ. ಆದರೆ, ಈ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಲಾಗುವುದು ಎಂಬ ಬಗ್ಗೆ ತಮಗೆ ತಿಳಿದಿಲ್ಲ. ಪಾರದರ್ಶಕವಾಗಿ ನಿಯಂತ್ರಣ ಪ್ರಕ್ರಿಯೆ ಮೂಲಕ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಸಚಿವರು ಹೇಳಿದ್ದಾರೆ.

**ವಿದೇಶ ಪ್ರವಾಸ - ಶುಭ ಹಾರೈಕೆ**



ದಿನಾಂಕ 08.11.2024ರಂದು ಬೆಂಗಳೂರು ಮೂಲಕ ಮಲೇಷಿಯಾ, ಥೈಲ್ಯಾಂಡ್, ಬ್ಯಾಂಕಾಕ್, ಪಟ್ಟಾಯ ದೇಶಗಳಿಗೆ ಪ್ರವಾಸ ಕೈಗೊಂಡಿರುವ ಆತ್ಮೀಯರು ಹಾಗೂ ಸ್ನೇಹಿತರು, ಪರಿಸರ ಪ್ರೇಮಿಗಳೂ ಆದ ವಿದ್ಯಾನಗರದ

**ಶ್ರೀ ಹೆಚ್. ನಂಜಪ್ಪ ಹಳೇಕುಂದುವಾಡ**

ಅವರ ಪ್ರವಾಸ ಸುಖಕರವಾಗಿರಲೆಂದು ಶುಭ ಹಾರೈಸುತ್ತೇವೆ.



**ಭಾಸ್ಕರ್‌ರಾವ್**
ರಿಯಲ್ ಎಸ್ಟೇಟ್ ಉದ್ಯಮಿ
ದಾವಣಗೆರೆ.

**ಕಣ್ಣಾಳ ಅಂಜಿನಪ್ಪ ಶಾಮನೂರು**
ಸದಸ್ಯರು, ಆಶ್ರಯ ಸಮಿತಿ,
ನಗರ ಪಾಲಿಕೆ, ದಾವಣಗೆರೆ.

**ಕುಂದುವಾಡ ಮಹಾಂತೇಶ್, ಬಿ.ನಿಂಗಪ್ಪ, ಅಂಜಿನಪ್ಪ, ಮಂಜುನಾಥ, ಎನ್.ಎಸ್. ಸುನೀಲ್ ಹಾಗು ನಂಜಪ್ಪ ಸ್ನೇಹ ಬಳಗ, ಹಳೇಕುಂದುವಾಡ ಹಾಗು ವಿದ್ಯಾನಗರ - ದಾವಣಗೆರೆ.**

# ಕರ್ನಾಟಕ ರಾಜ್ಯೋತ್ಸವ : ಆಡಳಿತ ಭಾಷೆಯಾಗಿ ಕನ್ನಡ - ಒಂದು ಅವಲೋಕನ

ಪ್ರತಿ ವರ್ಷ ನವೆಂಬರ್ ಒಂದ ರಂದು ಕರ್ನಾಟಕ / ಕನ್ನಡ ರಾಜ್ಯೋತ್ಸವ ದಿನವನ್ನು ರಾಜ್ಯದಾದ್ಯಂತ ಸಡಗರ, ಸಂಭ್ರಮದಿಂದ ಆಚರಿಸಲಾಗುವುದು. ಈ ದಿನದ ಆಚರಣೆಯ ಹಿನ್ನೆಲೆಯನ್ನು ನೋಡುವುದಾದರೆ 1956 ರಲ್ಲಿ ದಕ್ಷಿಣ ಭಾರತದಲ್ಲಿ ಕನ್ನಡ ಮಾತನಾಡುವ ಪ್ರದೇಶಗಳನ್ನು ವಿಲೀನಗೊಳಿಸಿ ಕರ್ನಾಟಕ ರಾಜ್ಯವನ್ನು ರಚಿಸಲಾಯಿತು. ಆಲೂರು ವೆಂಕಟರಾವ್ ಅವರು ಕರ್ನಾಟಕ ಏಕೀಕರಣ ಚಳುವಳಿಯೊಂದಿಗೆ 1905 ರಲ್ಲಿ ರಾಜ್ಯವನ್ನು ಏಕೀಕರಿಸುವ ಕನಸು ಕಂಡವರು. ಭಾಷಾವಾರು ಪ್ರಾಂತ್ಯಗಳನ್ನು ರಚಿಸಿದಾಗ ಆಗ ಮೈಸೂರು ರಾಜ್ಯ ಉದಯವಾಯಿತು. ಕರ್ನಾಟಕದ ಏಕೀಕರಣದ ರೂವಾರಿಗಳಲ್ಲಿ ಕುವೆಂಪು, ಶಿವರಾಮ ಕಾರಂತರು, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎ.ಎನ್. ಕೃಷ್ಣರಾವ್, ಬಿ.ಎಂ. ಶ್ರೀಕಂಠಯ್ಯ ಪ್ರಮುಖರು.

ದೇವರಾಜ ಅರಸು ಮುಖ್ಯಮಂತ್ರಿಯಾಗಿದ್ದಾಗ 'ಮೈಸೂರು ರಾಜ್ಯ'ಎಂಬುದರ ಬದಲಾಗಿ 'ಕರ್ನಾಟಕ ರಾಜ್ಯ' ಎಂದು 1, ನವೆಂಬರ್ 1973 ರಂದು ನಾಮಕರಣ ಮಾಡಿದರು.

ಇನ್ನು ಆಡಳಿತ ಭಾಷೆಯಾಗಿ ಕನ್ನಡ ಎಂಬುದರ ಕುರಿತು ಅವಲೋಕಿಸುವುದಾದರೆ ಎಲ್ಲ ರಾಜ್ಯಗಳ ಪ್ರಾದೇಶಿಕ ಭಾಷೆಗಳೇ ಆಡಳಿತ ಭಾಷೆಯಾದರೆ ಅದರಿಂದ ಎಲ್ಲ ವರ್ಗದ ಜನರಿಗೆ ಬಹು ಉಪಯೋಗವಾಗುವುದರಲ್ಲಿ ಎರಡು ಮಾತಿಲ್ಲ. ಕನ್ನಡ ಬರಿ ನಮ್ಮ ಭಾಷೆಯಲ್ಲ; ಅದು ನಿತ್ಯದ ಬದುಕು. ಆಡಳಿತದಲ್ಲಿ ಪರಿಣಾಮಕಾರಿಯಾಗಿ ಕನ್ನಡ ಬಳಸಬೇಕು ಎಂಬ ಆದೇಶ ಕೇವಲ ಕಾಗದದ ಮೇಲಿರದೇ ಕ್ರಿಯಾಶೀಲವಾಗಿ ಅನುಷ್ಠಾನಗೊಳ್ಳಬೇಕು. ಜನರ ಆಡುವ ಭಾಷೆ ಅಥವಾ ಜನಸಾಮಾನ್ಯರ ಭಾಷೆಯನ್ನು ಆಡಳಿತದಲ್ಲಿ ಅನುಷ್ಠಾನಕ್ಕೆ ತಂದರೆ ಸರ್ಕಾರದ ನೀತಿ -ನಿಯಮಗಳು, ಆಜ್ಞೆಗಳು, ಮಾಡಿದ ಕೆಲಸ ಕಾರ್ಯಗಳು ಪ್ರತಿಯೊಬ್ಬರ ಗಮನಕ್ಕೆ ಬರುವವು. ನಮ್ಮದಲ್ಲದ ಭಾಷೆಯಲ್ಲಿ ಆಡಳಿತದ ವ್ಯವಹಾರಗಳು ನಡೆದಲ್ಲಿ ವಿದ್ಯಾವಂತರಿಗೆ ಅಷ್ಟೇ ತಿಳಿದು ಅವಿದ್ಯಾವಂತರಿಗೆ ಏನೂ ತಿಳಿಯದಂತಾಗುವುದು. ಆದ್ದರಿಂದ ಜನರಿಂದ ಆಯ್ಕೆಯಾದ ಸರ್ಕಾರ ಎಂದೆಂದಿಗೂ ಜನಪರವಾಗಿರಬೇಕು . ಕರ್ನಾಟಕದಲ್ಲಿ ಕನ್ನಡ ಭಾಷೆ ಆಡಳಿತ ಭಾಷೆಯಾಗಬೇಕೆಂಬ ಕೂಗು ಇಂದು ನಿನ್ನೆಯದಲ್ಲ, ಇದು ಬಹಳ ಹಳೆಯದು 1956ರಲ್ಲಿ ಭಾಷಾವಾರು ಪ್ರಾಂತ್ಯಗಳ ವಿಂಗಡಣೆಯ ನಂತರ ಅಂದಿನ ವಿಶಾಲ ಮೈಸೂರು ರಾಜ್ಯದ ಆಡಳಿತ ಭಾಷೆ ಕನ್ನಡವಾಗಬೇಕೆಂದು1963 ರಲ್ಲಿ ಜಾರಿಗೆ ಬಂದ ಮೈಸೂರು ಅಧಿಕೃತ ಭಾಷಾ ಶಾಸನದಲ್ಲಿ ಘೋಷಣೆ ಮಾಡಲಾಗಿದೆ.ತರುವಾಯ 1970ರಲ್ಲಿ ಕನ್ನಡ ಭಾಷಾ ಸಮಿತಿಯು ಸರ್ಕಾರಕ್ಕೆ ಸಲ್ಲಿಸಿದ ವರದಿಯಲ್ಲಿ ಗ್ರಾಮಮಟ್ಟದಿಂದ ಹಿಡಿದು ಕೇಂದ್ರ ಮಟ್ಟದವರೆಗೆ ಆಡಳಿತ ಭಾಷೆ ಕನ್ನಡವಾಗಿರಬೇಕೆಂದು ಶಿಫಾರಸು ಮಾಡಿತು.

ಕರ್ನಾಟಕ ಸರ್ಕಾರವು ಅಧಿಕೃತವಾಗಿ 10.10.1963 ರಂದು ಕನ್ನಡವನ್ನು ರಾಜ್ಯದ ಆಡಳಿತ ಭಾಷೆ ಎಂದು ಘೋಷಿಸಿತು. ತಾಲ್ಲೂಕು ಜಿಲ್ಲಾ ಮತ್ತು ಸಚಿವಾಲಯದ ಮಟ್ಟದಲ್ಲಿ ಕನ್ನಡ ಭಾಷೆಯನ್ನು ಆಡಳಿತದಲ್ಲಿ ಕಟ್ಟುನಿಟ್ಟಾಗಿ ಜಾರಿಗೆ ತರಬೇಕೆಂದು ರಾಜ್ಯ ಸರ್ಕಾರ ಆದೇಶಿಸಿದೆ. ಇದಲ್ಲದೆ 1981-82ರ ಅವಧಿಯಲ್ಲಿ ಕನ್ನಡವನ್ನು ಶಿಕ್ಷಣ ಮತ್ತು ಆಡಳಿತದಲ್ಲಿ ಅನುಷ್ಠಾನಗೊಳಿಸಲು ಗೋಕಾಕ್ ರವರ





ನೇತೃತ್ವದಲ್ಲಿ ಕವಿಗಳು, ಸಾಹಿತಿಗಳು, ಸ್ವಯಂ ಸೇವಾ ಸಂಘಟನೆಗಳು, ಕನ್ನಡ ಪರ ಸಂಘಟನೆಗಳು, ಸಿನಿಮಾ ನಟ ನಟಿಯರು, ಶಾಲಾ ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು ಹಾಗೂ ಇನ್ನು ಮುಂತಾದವರು ಒಟ್ಟಾಗಿ ಒಂದು ದೀರ್ಘ ಚಳುವಳಿಯನ್ನೇ ಪ್ರಾರಂಭಿಸಿದರು. ನಮ್ಮ ರಾಜ್ಯದಲ್ಲಿ ನಮ್ಮ ಪ್ರಾದೇಶಿಕ ಭಾಷೆಯನ್ನೇ ಒಂದು ಆಡಳಿತ ಭಾಷೆಯನ್ನಾಗಿ ಮಾಡಿ ಎಂದು ಹೋರಾಟ ಮಾಡುವುದು ನಿಜಕ್ಕೂ ಹಾಸ್ಯಾಸ್ಪದ ಸಂಗತಿ. ಆಡಳಿತದ ಬಹುಮುಖ್ಯ ಕೇಂದ್ರ ಸ್ಥಾನದಲ್ಲಿರುವವರೇ ಕನ್ನಡವನ್ನು ವ್ಯಾವಹಾರಿಕ ಭಾಷೆಯಾಗಿ ಬಳಸದೆ ವಿದೇಶಿ ಭಾಷೆಗೆ ಜೋತು ಬಿದ್ದಿರುವುದು ಕನ್ನಡಿಗರ ದುರ್ದೈವವೇ ಸರಿ. ಇತ್ತೀಚೆಗಷ್ಟೇ ಇಂಗ್ಲಿಷ್ ನಾಮಫಲಕಗಳಿಗೆ ಕಪ್ಪು ಮಸಿ ಬಳಿದು ಅದರ ಜಾಗದಲ್ಲಿ ಶೇ 60 ರಷ್ಟು ಕನ್ನಡದಲ್ಲಿ ಬರೆದ ನಾಮಫಲಕಗಳನ್ನು ಅಳವಡಿಸಬೇಕೆಂಬ ಕೂಗು ಕೇಳಿ ಬಂದಿತು. ಆದರೆ ಬಹುತೇಕ ಬಹುರಾಷ್ಟ್ರೀಯ ಕಂಪನಿಗಳು ಇದನ್ನು ಇನ್ನೂ ಪೂರ್ಣ ಪ್ರಮಾಣದಲ್ಲಿ ಜಾರಿಗೆ ತಂದಿಲ್ಲದಿರುವುದು ಕನ್ನಡದ ಬಗ್ಗೆ ಅವರಿಗೆ ಇರುವ ಧೋರಣೆ ಎಂತಹದ್ದು ಎಂಬುದು ಇದರಿಂದ ತಿಳಿದುಬರುತ್ತದೆ. ಒಂದೊಮ್ಮೆ ಸರ್ಕಾರಗಳು ಎಲ್ಲಾ ಹಂತದ ಕಚೇರಿಗಳಲ್ಲಿ ಕನ್ನಡವೇ ಆಡಳಿತ ಭಾಷೆಯಾಗಬೇಕು ಎಂಬ ಸುತ್ತೋಲೆಯನ್ನು ಹೊರಡಿಸದರೂ ಸಹ ಅಲ್ಲಿನ ಅಧಿಕಾರಿ ವರ್ಗ ಇದನ್ನು ಕಟ್ಟುನಿಟ್ಟಾಗಿ ಜಾರಿಗೆ ತರದಿರುವುದು ಬೇಸರದ ಸಂಗತಿ. ಅದೇನೇ ಇದ್ದರೂ ಕನ್ನಡ ನಾಡು- ನುಡಿ ಮತ್ತು ಸಂಸ್ಕೃತಿಯನ್ನು ಎತ್ತಿ ಹಿಡಿಯುವಂತಹ ಕೆಲಸವನ್ನು ಕನ್ನಡಕಾವಲು ಸಮಿತಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳು ಅವಿರತವಾಗಿ ಶ್ರಮಿಸುತ್ತಿವೆ.

ಪ್ರತಿ ವರ್ಷ ನವಂಬರ್ 1 ರಂದು ಹಾಗೂ ತಿಂಗಳು ಪೂರ್ತಿ ಕನ್ನಡ ರಾಜ್ಯೋತ್ಸವವನ್ನು ಆಚರಣೆ ಮಾಡುವಾಗ ಒಂದಿಷ್ಟು ಸಂಘಟನೆಗಳು ಕನ್ನಡ ಆಡಳಿತ ಭಾಷೆಯಾಗಬೇಕೆಂದು ಮಾತನಾಡಿ, ಮುಂದಿನ ದಿನಗಳಲ್ಲಿ ಅದನ್ನು ಮರೆತುಬಿಡುವುದೇ ಹೆಚ್ಚು. ಪೂರ್ಣ ಪ್ರಮಾಣದ ಫಲ ದೊರಕುವವರೆಗೂ ಹೋರಾಟ ನಿರಂತರವಾಗಿರಬೇಕು, ಇದಕ್ಕೆ ಕೇವಲ ಸಂಘಟನೆಗಳಷ್ಟೇ ಅಲ್ಲದೆ ಎಲ್ಲರ ಸಹಕಾರ ಅತೀ ಅಗತ್ಯ.ಒಟ್ಟಾರೆ ಸರ್ಕಾರದ ಚುಕ್ಕಾಣಿ ಹಿಡಿದಿರುವವರು ಮತ್ತು ಅಲ್ಲಿನ ಆಡಳಿತ ವರ್ಗ ಕನ್ನಡವನ್ನು ಆಡಳಿತ ಭಾಷೆಯಾಗಿ ಅನುಷ್ಠಾನಕ್ಕೆ ತರದಿದ್ದರೆ ಬೇಲಿಯೇ ಎದ್ದು ಹೊಲವನ್ನು ಮೇಯ್ದಂತಾಗುವುದು.ಎಷ್ಟೋ ಬಾರಿ 'ಕನ್ನಡ ಉಳಿಯಲಿ ಇಂಗ್ಲಿಷ್ ತೊಲಗಲಿ ' ಎಂಬ ಅಭಿಯಾನವನ್ನು ಮಾಡಿದರೂ ಅದರಿಂದ ಯಾವುದೇ ಪ್ರಯೋಜನವಾಗಿಲ್ಲ. ಇದು ಹೀಗೆ ಮುಂದುವರೆದರೆ ಇನ್ನೂ ಎಷ್ಟೇ ದಶಕಗಳು ಕಳೆದರೂ ಆಡಳಿತ ಭಾಷೆಯಾಗಿ ಕನ್ನಡ ಪೂರ್ಣ ಪ್ರಮಾಣದಲ್ಲಿ ನಿಲ್ಲಲಾರದೆಂಬ ನಂಬಿಕೆ ಜನ ಸಾಮಾನ್ಯರದ್ದಾಗಿದೆ. ಈ ಸಂದರ್ಭದಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಪ್ರಾದೇಶಿಕ ಭಾಷೆಯ ಕುರಿತು ಆಡಿರುವ ಮಾತುಗಳು ತುಂಬಾ ಚಿಂತನೆಗೆ ಒಳಪಡಿಸುತ್ತವೆ. ಅಂದರೆ, "ಕೈಗೊಳ್ಳುವ ಪ್ರತಿಯೊಂದು ಕಾರ್ಯ, ಆಡುವ ಎಲ್ಲ ನುಡಿ ಮತ್ತು ಉದ್ದೇಶ ಪ್ರಾಂತೀಯ ಭಾಷೆಯಲ್ಲಿ ನಡೆದಾಗ ಸಾಮಾನ್ಯ ಜನರ ಮನಸ್ಸು ಪ್ರಫುಲ್ಲಿತಗೊಂಡು ಪ್ರಾಂತ್ಯ ಜೀವನದಲ್ಲಿ ಯುಕ್ತವಾದ ಪ್ರಭಾವವನ್ನು ಬೀರಲು ಸಾಧ್ಯವಾಗುವುದು ಎಂದಿದ್ದಾರೆ.ಈ ದಿಸೆಯಲ್ಲಿ ಕರ್ನಾಟಕದಲ್ಲಿ ಆಡಳಿತ ಭಾಷೆಯಾಗಿ ಪ್ರಾದೇಶಿಕ (ಕನ್ನಡ) ಭಾಷೆಯನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಕ್ಕೆ ತರುವ ತೀವ್ರತರ ಪ್ರಯತ್ನವನ್ನು ಆಳುವ ಸರ್ಕಾರಗಳು ಮಾಡಲೇಬೇಕು.'ಕುವೆಂಪು ರವರು "ಕನ್ನಡಕ್ಕಾಗಿ ಕೈಯೆತ್ತು, ನಿನ್ನ ಕೈ ಕಲ್ಪವೃಕ್ಷವಾಗುತ್ತದೆ. ಕನ್ನಡಕ್ಕಾಗಿ ಕೊರಳೆತ್ತು ಅಲ್ಲಿ ಪಾಂಚಜನ್ಯ ಮೂಡುತ್ತದೆ! ಕನ್ನಡಕ್ಕಾಗಿ ಕಿರುಬೆರಳೆತ್ತಿದರೂ ಸಾಕು, ಇಂದು ಅದೇ ಗೋವರ್ಧನ ಗಿರಿಧಾರಿಯಾಗುತ್ತದೆ.'ಇದು ನಿನ್ನ ಭಾಷೆ, ಇದು ದೇಶ ಭಾಷೆ,"ಎಂದಿದ್ದಾರೆ. ಈ ಮಾತುಗಳನ್ನು ಗಮನಿಸಿದರೆ ಕನ್ನಡ ಎಂಥ ಸುಮಧುರ ಭಾಷೆ ಎಂಬುದು ವೇದ್ಯವಾಗುತ್ತದೆ. ಆದ್ದರಿಂದ ಜನರಿಗೆ ಅರ್ಥವಾಗುವ ಭಾಷೆಯಲ್ಲಿಯೇ ಸರ್ಕಾರದ ಎಲ್ಲ ನಿರ್ಧಾರ, ಆಜ್ಞೆಗಳು, ಟಿಪ್ಪಣಿಗಳು ಇನ್ನು ಮುಂತಾದವು ಬಂದಲ್ಲಿ ಅದು ಜನಪರ ಸರ್ಕಾರವಾಗುವುದರಲ್ಲಿ ಎರಡು ಮಾತಿಲ್ಲ.

**- ಡಾ. ಶಿವಯ್ಯ ಎಸ್.**
ವಿಶ್ರಾಂತ ಪ್ರಾಧ್ಯಾಪಕರು, ದಾವಣಗೆರೆ.

# ನಾಡಿದ್ದು ಶ್ರೀ ಸತ್ಯ ದತ್ತ ವ್ರತ, ದತ್ತಮಾಲಾ ಅಭಿಯಾನ

ದಾವಣಗೆರೆ, ನ.7- ಶ್ರೀರಾಮ ಸೇನೆ ವತಿಯಿಂದ ಇದೇ ದಿನಾಂಕ 10 ರಂದು ಚಿಕ್ಕಮಗಳೂರು ಸಮೀಪದಲ್ಲಿರುವ ಚಂದ್ರದ್ರೋಣ ಪರ್ವತದ ದತ್ತಪೀಠದಲ್ಲಿ ಶ್ರೀ ಸತ್ಯ ದತ್ತ ವ್ರತ, ಶ್ರೀ ದತ್ತ ಹೋಮ ಹಾಗೂ ದತ್ತಮಾಲ ಅಭಿಯಾನ-2024 ಹಮ್ಮಿಕೊಳ್ಳಲಾಗಿದೆ ಎಂದು ಶ್ರೀರಾಮ ಸೇನೆಯ ರಾಜ್ಯ ಕಾರ್ಯದರ್ಶಿ ಪರಶುರಾಮ ನಡುಮನಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಅಂದು ಬೆಳಿಗ್ಗೆ 10.30 ಕ್ಕೆ ಚಿಕ್ಕಮಗಳೂರಿನಲ್ಲಿ ಶೋಭಾಯಾತ್ರೆ ನಡೆಯಲಿದ್ದು, ನಂತರ ಧಾರ್ಮಿಕ ಸಭೆ ಹಮ್ಮಿಕೊಳ್ಳಲಾಗಿದೆ. ಶ್ರೀರಾಮ ಸೇನೆಯ ರಾಷ್ಟ್ರೀಯ ಗೌರವಾಧ್ಯಕ್ಷ ಶ್ರೀ ಸಿದ್ಧಲಿಂಗ ಸ್ವಾಮೀಜಿ, ಶ್ರೀಕ್ಷೇತ್ರ ಗಾಣಗಾಪುರದ ಶ್ರೀ ವಿವೇಕ ಚಿಂತಾಮಣಿ ಮಹಾರಾಜರು ಸಾನ್ನಿಧ್ಯ ವಹಿಸಲಿದ್ದು, ಶ್ರೀರಾಮ ಸೇನೆಯ ರಾಷ್ಟ್ರೀಯ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಪಾಲ್ಗೊಳ್ಳಿದ್ದಾರೆಂದು ಹೇಳಿದರು.

ವಿಶೇಷ ಆಹ್ವಾನಿತರಾಗಿ ತೆಲಂಗಾಣದ ಪ್ರಖರ ವಾಗ್ಮಿ ಮಾಧವಿ ಲತಾ ಆಗಮಿಸಲಿದ್ದು, ಮುಖ್ಯ ಅತಿಥಿಗಳಾಗಿ ಪರಿಷತ್ ಸದಸ್ಯ ಸಿ.ಟಿ. ರವಿ, ಮಾಜಿ ಸಂಸದ ಪ್ರತಾಪ್ ಸಿಂಹ, ಸೇನೆಯ ರಾಜ್ಯಾಧ್ಯಕ್ಷ ಗಂಗಾಧರ ಕುಲಕರ್ಣಿ, ವಿಶ್ವಧರ್ಮ ರಕ್ಷಾ ಸೇವಾ ಸಂಸ್ಥಾನದ ಯೋಗಿ ಸಂಜೀತ್ ಸುವರ್ಣ, ದತ್ತಾತ್ರೇಯ ಅಲ್ಲಂ ಪುರ, ಅರ್ಚಕರಾದ ರಾಜೇಂದ್ರ ಕುಮಾರ್, ದೀಪಕ್ ದೊಡ್ಡಯ್ಯ ಭಾಗವಹಿಸಲಿದ್ದಾರೆ.

**ಹಿಂದೂ ಪೀಠವನ್ನಾಗಿಸಲು ಆಗ್ರಹ:** ಚಿಕ್ಕಮಗಳೂರಿನ ದತ್ತಪೀಠದಲ್ಲಿನ ಇಸ್ಲಾಮಿಕ್ ಅತಿಕ್ರಮಣದ ಮುಕ್ತಿಗಾಗಿ ಸಂಪೂರ್ಣ ಹಿಂದೂ ಪೀಠ ನಿರ್ಮಾಣ ಮಾಡಲು ಸರ್ಕಾರ ಶೀಘ್ರವೇ ಮುಂದಾಗುವಂತೆ ಪರಶುರಾಮ ನಡುಮನಿ ಆಗ್ರಹಿಸಿದರು.

ಚಂದ್ರದ್ರೋಣ ಪರ್ವತ ಶ್ರೇಣಿಯಲ್ಲಿನ ಅತ್ಯಂತ ರಮಣೀಯ ತಾಣ ದತ್ತಪೀಠವಾಗಿದ್ದು, ಇಲ್ಲಿ ಇಸ್ಲಾಮಿಕ್ ಅತಿಕ್ರಮಣದ ಮೂಲಕ ಹಿಂದೂಗಳ ಭಾವನೆಗೆ ಧಕ್ಕೆ ತರುವ ಪ್ರಯತ್ನ ನಡೆದಿತ್ತು. ಇದರ ವಿರುದ್ಧ 20 ವರ್ಷಗಳಿಂದ ನಿರಂತರ ಹೋರಾಟವನ್ನು ಶ್ರೀರಾಮ ಸೇನೆ ಮಾಡುತ್ತಾ ಬಂದಿದ್ದು, ಇದಲ್ಲದೇ ರಥಯಾತ್ರೆ, ಶೋಭಾಯಾತ್ರೆ, ಧರ್ಮಸಭೆ, ಸಾಮೂಹಿಕ ದತ್ತ ಜಪ ಮುಂತಾದವುಗಳ ಮೂಲಕ ನಮ್ಮ ಹಕ್ಕನ್ನು ಪಡೆಯಲು ಪ್ರಯತ್ನಗಳು ನಡೆಯುತ್ತಲೇ ಇವೆ ಎಂದರು.

ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ದತ್ತಪೀಠದಲ್ಲಿರುವ ಅನಧಿಕೃತ ಇಸ್ಲಾಮಿಕ್ ಕುರುಹುಗಳನ್ನು ಮೂಲ ದರ್ಗಾ ನಾಗೇನಹಳ್ಳಿಗೆ ಸ್ಥಳಾಂತರ ಮಾಡಬೇಕು. ಕೇವಲ ಹಿಂದೂ ಅರ್ಚಕರು ಇರಬೇಕು. ಮೌಲ್ವಿಗಳು ನಾಗೇನಹಳ್ಳಿಗೆ ಸ್ಥಳಾಂತರಗೊಳ್ಳಬೇಕು. ಇದಲ್ಲದೇ ದತ್ತ ಭಕ್ತರಿಗೆ ಪ್ರಸಾದ ಮತ್ತು ವಸತಿ ವ್ಯವಸ್ಥೆ ಕಲ್ಪಿಸಬೇಕು. ದತ್ತಪೀಠದಲ್ಲಿ ಕಳುವಾದ ಎಲ್ಲಾ ವಸ್ತುಗಳನ್ನು ಪೀಠಕ್ಕೆ ಹಿಂತಿರುಗಿಸಬೇಕೆಂದು ಒತ್ತಾಯಿಸಿದರು.

ಗಾಣಗಾಪುರದಿಂದ ದತ್ತಪೀಠಕ್ಕೆ ದಿನ ನಿತ್ಯ ಬಸ್ ಸೇವೆ ಆರಂಭಿಸಬೇಕು. ಪೀಠದಲ್ಲಿ ನಮಾಜ್ ಹಾಗೂ ಮಾಂಸಾಹಾರ ನಿಲ್ಲಿಸಬೇಕು. ದತ್ತಪೀಠದ ಆಸ್ತಿ ಕಬಳಿಸಿದವರಿಗೆ ನೋಟಿಸ್ ನೀಡಬೇಕೆಂದು ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಾಗರ್, ಶ್ರೀಧರ್, ರಾಜು, ಪಳನಿ ಮತ್ತಿತರರು ಉಪಸ್ಥಿತರಿದ್ದರು.

# ಉಕ್ಕಡಗಾತ್ರಿ : ಭತ್ತದ ಬೆಳೆ ಕ್ಷೇತ್ರೋತ್ಸವ



ಮಲೇಬೆನ್ನೂರು, ನ.7- ಉಕ್ಕಡಗಾತ್ರಿ ಗ್ರಾಮದ ಶ್ರೀನಿವಾಸ್ ಕುಲಕರ್ಣಿ ಅವರ ಗದ್ದೆಯಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮತ್ತು ಕೃಷಿ ಇಲಾಖೆ ಸಹಯೋಗದೊಂದಿಗೆ ಯಾಂತ್ರೀಕೃತ ಭತ್ತದ ನಾಟಿ ಮಾಡಿದ ಬೆಳೆ ಕ್ಷೇತ್ರೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಕೃಷಿ ಇಲಾಖೆಯ ಉಪ ನಿರ್ದೇಶಕ ಡಾ. ಅಶೋಕ್ ಮತ್ತು ದಾವಣಗೆರೆ ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಬೇಸಾಯ ತಜ್ಞರು ಡಾ ಮಲ್ಲಿಕಾರ್ಜುನ್ ಅವರು, ಭತ್ತದ ಬೇಸಾಯದ ಬಗ್ಗೆ ಸಮಗ್ರವಾಗಿ ತಿಳಿಸಿಕೊಟ್ಟರು.

ಮಲೇಬೆನ್ನೂರು ಹೋಬಳಿ ವ್ಯಾಪ್ತಿಯ ಕೃಷಿ ಅಧಿಕಾರಿ ಇನಾಯತ್, ಧರ್ಮಸ್ಥಳ ಯೋಜನೆಯ ಕೃಷಿ ಅಧಿಕಾರಿ ಎಸ್.ಮನೋಹರ್, ರೈತ ಸಂಪರ್ಕ ಕೇಂದ್ರದ ತಾಂತ್ರಿಕ ವ್ಯವಸ್ಥಾಪಕ ಜಿಗಳಿಯ ರಾಕೇಶ್, ಯಂತ್ರ ನಾಟಿ ಬ್ಯಾಂಕ್ ಮೇಲ್ವಿಚಾರಕ ಸುನೀಲ್, ನೋಡಲ್ ಅಧಿಕಾರಿ ಚಿನ್ ಮೂರ್ತಿ ಮತ್ತು ಉಕ್ಕಡಗಾತ್ರಿ, ಪತ್ಯಪುರ ಸೇವಾ ಪ್ರತಿನಿಧಿ ವಾಣಿ, ಕೃಷಿ ಸಖಿ ಪ್ರಗತಿಪರ ರೈತರು ಭಾಗವಹಿಸಿದ್ದರು. ಪ್ರಗತಿಪರ ರೈತ ಶ್ರೀನಿವಾಸ್ ಕುಲಕರ್ಣಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

# ಹೊನ್ನಾಳಿ ತಾಲ್ಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸ್ಥಾನಕ್ಕೆ 2 ನಾಮಪತ್ರ

ಹೊನ್ನಾಳಿ, ನ. 7- ತಾಲ್ಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಲು ಅಂತಿಮ ದಿನವಾದ ಇಂದು ಕೆ. ಶಿವಪದ್ಮ ಹಾಗೂ ಕೆ. ಅರುಣ ನಾಮಪತ್ರ ಸಲ್ಲಿಸಿದ್ದಾರೆ.

ಖಜಾಂಚಿ ಸ್ಥಾನಕ್ಕೆ ಬಿ.ಎಂ. ಅನಿಲ್ ಕುಮಾರ್, ಎಂ.ಎಲ್. ರಾಜಕುಮಾರ್, ಹೆಚ್.ಎಸ್. ಚೇತನ್ ನಾಮಪತ್ರ ಸಲ್ಲಿಸಿದ್ದಾರೆ.

ರಾಜ್ಯ ಪರಿಷತ್‌ಗೆ ಬಿ.ಎಂ.ಧರ್ಮಪ್ಪ, ಎಂ. ನಾಗರಾಜನಾಯ್ಕ, ಅಭಿಜಿತ್ ಚವ್ಹಾಣ್ ನಾಮಪತ್ರ ಸಲ್ಲಿಸಿದ್ದು, ನಾಳೆ ದಿನಾಂಕ 8 ರಂದು ನಾಮಪತ್ರ ಪರಿಶೀಲನೆ, ದಿನಾಂಕ 11 ರಂದು ನಾಮಪತ್ರ ವಾಪಸ್ ಪಡೆಯುವುದು. 16 ರಂದು ಚುನಾವಣೆ ನಡೆಯಲಿದೆ ಎಂದು ಚುನಾವಣಾಧಿಕಾರಿ ತಿಪ್ಪೇಶಪ್ಪ ತಿಳಿಸಿದ್ದಾರೆ.

# ಹರಿಹರ : ಇಂದು ಸಹಸ್ರಾರ್ಜುನ ಮಹಾರಾಜರ ಜಯಂತ್ಯೋತ್ಸವ

ಎಸ್.ಎಸ್.ಕೆ. ಸಮಾಜದ ವತಿಯಿಂದ ಶ್ರೀ ಸಹಸ್ರಾರ್ಜುನ ಮಹಾರಾಜರ ಜಯಂತಿಯನ್ನು ಇಂದು ಆಚರಣೆ ಮಾಡಲಾಗುವುದು ಎಂದು ಎಸ್.ಎಸ್.ಕೆ. ಸಮಾಜದ ಅಧ್ಯಕ್ಷ ಎನ್. ಮೋಹನ್ ಖಿರೋಜಿ ತಿಳಿಸಿದ್ದಾರೆ.

ಇಂದು ಬೆಳಿಗ್ಗೆ 8 ಗಂಟೆಗೆ ಶ್ರೀ ಸಹಸ್ರಾರ್ಜುನ ವೃತ್ತದಲ್ಲಿ ಶ್ರೀ ಸಹಸ್ರಾರ್ಜುನ ಮಹಾ ರಾಜರ ಭಾವ ಚಿತ್ರಕ್ಕೆ ಪುಷ್ಪ ನಮನ, ಬೆಳಗ್ಗೆ 9 ಗಂಟೆಗೆ ಎಸ್.ಎಸ್.ಕೆ. ಯುವ ಗಜಪಡೆ ಇವರಿಂದ ಶ್ರೀಮತಿ ಯಲ್ಲಮ್ಮ ಭೂತೆ ಸಮುದಾಯ ಭವನದಲ್ಲಿ ಶ್ರೀ ಸಹಸ್ರಾರ್ಜುನ ಮಹಾರಾಜರ ಧ್ವಜಾರೋಹಣ, ಬೆಳಿಗ್ಗೆ 10 ಗಂಟೆಗೆ ಬೈಕ್ ರ್‍ಯಾಲಿ ನಡೆಯಲಿದೆ. ಮಧ್ಯಾಹ್ನ 12 ಗಂಟೆಗೆ ಸರ್ಕಾರಿ ಆಸ್ಪತ್ರೆಯ ರೋಗಿಗಳಿಗೆ ಹಾಲು-ಹಣ್ಣು ವಿತರಣೆ, ಸಂಜೆ 4 ಗಂಟೆಗೆ ಶ್ರೀ ಸಹಸ್ರಾರ್ಜುನ ಮಹಾರಾಜರ ಪುಷ್ಪಾಲಂಕೃತ ಭಾವಚಿತ್ರದ ಮೆರವಣಿಗೆ ನಡೆಯಲಿದೆ.

ಸಂಜೆ 7 ಗಂಟೆಗೆ ಮಾಜಿ ಅಧ್ಯಕ್ಷ ದಿ. ನಲ್ಲಿ ನಾಗರಾಜ್ ಮೆಹರ್ವಾಡೆ ವೇದಿಕೆಯಲ್ಲಿ ಸಭಾ ಕಾರ್ಯಕ್ರಮ ನಡೆಯಲಿದ್ದು, ಅಧ್ಯಕ್ಷತೆಯನ್ನು ಎಸ್.ಎಸ್.ಕೆ. ಸಮಾಜದ ಅಧ್ಯಕ್ಷ ಮೋಹನ್ ಎನ್. ಖೀರೋಜಿ ವಹಿಸಲಿದ್ದಾರೆ. ಉದ್ಘಾಟನೆಯನ್ನು ಎಸ್.ಎಸ್.ಕೆ. ಸಮಾಜದ ರಾಜ್ಯ ಅಧ್ಯಕ್ಷ ಶಶಿಕುಮಾರ್ ವಿ. ಮೆಹರ್ವಾಡೆ ಉದ್ಘಾಟನೆ ಮಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್, ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕ ಎಚ್.ಎಸ್. ಶಿವಶಂಕರ್, ಎಸ್. ರಾಮಪ್ಪ, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಜಿ.ಪಂ. ಮಾಜಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ನಗರಸಭೆ ಅಧ್ಯಕ್ಷೆ ಕವಿತಾ ಮಾರುತಿ, ಮಾಜಿ ನಗರ ಸಭೆ ಅಧ್ಯಕ್ಷ ಕೃಷ್ಣ ಸಾ ಭೂತೆ, ಹುಬ್ಬಳ್ಳಿ ಅರ್ಜುನ ಸಾ. ಪವರ್, ಕೆ. ವಿನಯ ಪವರ್, ದಾವಣಗೆರೆ ರವಿಚಂದ್ರ, ಕಾಂಗ್ರೆಸ್ ಮುಖಂಡ ನಿಖಿಲ್ ಕೊಂಡಜ್ಜಿ ಇತರರು ಭಾಗವಹಿಸಲಿದ್ದಾರೆ.

ಎಸ್.ಎಸ್.ಕೆ. ಸಮಾಜಕ್ಕೆ ಭದ್ರವಾದ ಬುನಾದಿ ಹಾಕಿ ಸಂಘಟನೆ ಬಲಪಡಿಸಿದ ರೇವಣಸಾ ತುಳಜಣಸಾ ಭೂತೆ ಅವರಿಗೆ ಸಮಾಜಕ್ಕೆ ಸಲ್ಲಿಸಿದ ಸೇವೆಯನ್ನು ಗುರುತಿಸಿ ಶ್ರೀ ಸಹಸ್ರಾರ್ಜುನ ಸೇವಾ ಸಿರಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

# ಜಿಎಂಐಟಿ ವಿದ್ಯಾರ್ಥಿನಿಗೆ ಪೇಪಾಲ್ ಕಂಪನಿ 34.4 ಲಕ್ಷ ಆಫರ್..!



ದಾವಣಗೆರೆ, ನ.7 - ನಗರದ ಜಿ ಎಂ ತಾಂತ್ರಿಕ ಮಹಾವಿದ್ಯಾಲಯದ ಕಂಪ್ಯೂಟರ್ ಸೈನ್ಸ್ ವಿಭಾಗದ 2024ನೇ ಸಾಲಿನ ವಿದ್ಯಾರ್ಥಿನಿ ಕು.ಷಷ್ಠಿ ಡಿ.ಬಿ, ಇತ್ತೀಚಿಗೆ ನಡೆದ ಚೆನ್ನೈ ಮೂಲದ ಪೇಪಾಲ್ ಕಂಪನಿಯ ಸಂದರ್ಶನ ಪ್ರಕ್ರಿಯೆಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಸ್ಥಾನಕ್ಕೆ ಆಯ್ಕೆಯಾಗಿ ವಾರ್ಷಿಕ 34.4 ಲಕ್ಷಗಳ ರೂ.ಗಳ ಭರ್ಜರಿ ಆಫರ್ ಪಡೆದಿದ್ದಾರೆ. ಅವರೀಗ ಕಂಪನಿಯಲ್ಲಿ ತಮ್ಮ ವೃತ್ತಿಯನ್ನು ಪ್ರಾರಂಭಿಸಿದ್ದಾರೆ ಎಂದು ತರಬೇತಿ ಮತ್ತು ಉದ್ಯೋಗ ವಿಭಾಗದ ನಿರ್ದೇಶಕ ತೇಜಸ್ವಿ ಕಟ್ಟಿಮನಿ ತಿಳಿಸಿದ್ದಾರೆ.

# ನಗರದಲ್ಲಿ 'ಸ್ಕೈ ವಾಕ್' ನಿರ್ಮಿಸಲು ಆಗ್ರಹ

ದಾವಣಗೆರೆ, ನ.7- ನಗರದ ಮುಖ್ಯ ವೃತ್ತ ಹಾಗು ರಸ್ತೆಗಳಲ್ಲಿ ಫುಟ್ ಅಂಡರ್ ಪಾಸ್, ಫುಟ್ ಓವರ್ ಬ್ರಿಜ್ ಮತ್ತು ಸ್ಕೈ ವಾಕ್‌ಗಳನ್ನು ನಿರ್ಮಿಸುವಂತೆ 'ಟೀಂ ನಮ್ಮ ದಾವಣಗೆರೆ' ಒತ್ತಾಯಿಸಿದೆ.

ನಗರದಲ್ಲಿ ಸುಮಾರು 8.5 ಲಕ್ಷ ಜನಸಂಖ್ಯೆಯಿದೆ. ನಗರವನ್ನು ಸ್ಮಾರ್ಟ್ ಸಿಟಿ ಹಾಗು ಅಮೃತ್ ಯೋಜನೆಗಳಿಗೆ ಸೇರ್ಪಡೆಗೊಳಿಸಲಾಗಿದೆ. ಅನೇಕ ಉನ್ನತ ಶಿಕ್ಷಣ ಸಂಸ್ಥೆಗಳು ನಗರದಲ್ಲಿವೆ, ಮಧ್ಯ ಕರ್ನಾಟಕದ ಕೇಂದ್ರ ಬಿಂದು, ಶರವೇಗದಿಂದ ಬೆಳೆಯುತ್ತಿರುವ ನಗರದ ಮುಖ್ಯ ವೃತ್ತಗಳಲ್ಲಿ ಹಾಗು ರಸ್ತೆಗಳಲ್ಲಿ ಪಾದಚಾರಿಗಳು ರಸ್ತೆ ದಾಟಲು ಫುಟ್ ಅಂಡರ್ ಬ್ರಿಜ್, ಫುಟ್ ಓವರ್ ಬ್ರಿಜ್, ಜಿಪಿಎಸ್ ಸಿಸ್ಟಮ್ ವಿಥ್ ಟ್ರಾಫಿಕ್ ಮ್ಯಾನೇಜ್ಮೆಂಟ್, ಗ್ರೇಡ್ ಸೆಪರೇಟರ್ಸ್, ಸ್ಕೈವಾಕ್‌ಗಳನ್ನು ನಿರ್ಮಿಸಲು ಸ್ಮಾರ್ಟ್ ಸಿಟಿ ಅನುದಾನದಲ್ಲಿ ಕಲ್ಪಿಸಿದರೆ ನಾಗರಿಕರಿಗೆ ಅನುಕೂಲವಾಗುತ್ತದೆ. ಸಣ್ಣ ಪುಟ್ಟ ಅಪಘಾತಗಳು ತಪ್ಪುತ್ತವೆ. ವಾಹನಗಳು ಸುಗಮವಾಗಿ ಸಂಚರಿಸಬಹುದು.

ನಗರದ ರೈಲು ನಿಲ್ದಾಣದ ಮುಂಭಾಗ, ಜಯದೇವ ವೃತ್ತ, ಗಾಂಧಿ ಸರ್ಕಲ್, ಅರುಣ ಚಿತ್ರಮಂದಿರ , ವಿದ್ಯಾರ್ಥಿ ಭವನ, ಗುಂಡಿ ಛತ್ರ ವೃತ , ಹಳೆ ಬಸ್ ನಿಲ್ದಾಣದ ಹತ್ತಿರ , ಶಂಕರ್ ವಿಹಾರ್ ಬಡಾವಣೆ, ಹೊಸ ಬಸ್ ನಿಲ್ದಾಣ ಮುಂಭಾಗ ಹೀಗೆ ಅನೇಕ ಕಡೆ ಈ ಪ್ರಯತ್ನವನ್ನು ಮಾಡಬಹುದು ಎಂದು 'ಟೀಂ ನಮ್ಮ ದಾವಣಗೆರೆ'ಯ ರೋಹಿತ್. ಎಸ್.ಜೈನ್ ಮತ್ತು ಸಂತೋಷ್ ಸವೂರ್ ಮನವಿ ಮಾಡಿದ್ದಾರೆ.


**ಸೈಟುಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿಯಲ್ಲಿ 40x60, 40x60 North ಅಕ್ಕ-ಪಕ್ಕ, 40 ಅಡಿ ರೋಡಿಗಿದೆ, 30x40, 30x40 South ಅಕ್ಕ-ಪಕ್ಕ, 30x40 North, 30x45 Corner
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಬಾಡಿಗೆ ಮನೆಗಳು ದೊರೆಯುತ್ತವೆ ವಿಚಾರಿಸಿ**
MCC 'A' Block ನಲ್ಲಿ, MCC 'B' Blockನಲ್ಲಿ ಆಂಜನೇಯ ಬಡಾವಣೆಯಲ್ಲಿ
ದಕ್ಷಿತ್ ಐನಳ್ಳಿ ಏಜೆಂಟ್
96061 26471

**ಬೇಕಾಗಿದ್ದಾರೆ**
ನಂದಿನಿ ಹೋಟೆಲ್
ಹೋಟೆಲ್‌ನಲ್ಲಿ ಕೆಲಸ ಮಾಡಲು ಅಡುಗೆ ಭಟ್ಟರು ಪುರುಷರು ಬೇಕಾಗಿದ್ದಾರೆ. ಹೋಟೆಲ್‌ನಲ್ಲಿ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಸ್ಥಳ: ಶಕ್ತಿನಗರ ದಾವಣಗೆರೆ.
94835 32186, 80885 91426

**ಬಾಡಿಗೆಗೆ ಸಂಪರ್ಕಿಸಿ**
ಲಹರಿ ಆಟೋಮೋಟಿವ್ಸ್
# 856/17, ಸಬ್ ರಿಜಿಸ್ಟರ್ ಆಫೀಸ್ ಎದುರುಗಡೆ, ಪಿಬಿ ರಸ್ತೆ, ದಾವಣಗೆರೆ-2. ಕೆಳಗಿನ ಮಹಡಿ 1500 ಅಡಿಗಳು, 1ನೇ ಮಹಡಿ 3500 ಅಡಿಗಳು, ಖಾಲಿ ಜಾಗ 4400 ಚ.ಅ., ಸೈಟ್ ಸೈಜ್ 50x88
98444 20009, 90711 19996

**ಹೊಸ ಮನೆ ಮಾರಾಟಕ್ಕಿದೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 20x30ರಲ್ಲಿ East ಕೆಳಗಡೆ 2 ಬೆಡ್ ರೂಮ್, ಮೇಲುಗಡೆ 2 ಬೆಡ್ ರೂಮ್. Rate - 65 ಲಕ್ಷಕ್ಕೆ
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಬೇಕಾಗಿದ್ದಾರೆ**
ಟಾಟಾ ಪವರ್ ಸೋಲಾರ್‌ನಲ್ಲಿ ಮಾರ್ಕೆಟಿಂಗ್ ಮಾಡಲು ಪಿಯುಸಿ ಅಥವಾ ಡಿಗ್ರಿ ಮುಗಿಸಿರುವ ಹುಡುಗರು ಬೇಕಾಗಿದ್ದಾರೆ.
ಮೆ. ಬಸವಶ್ರೀ ಸೋಲಾರ್ ಟೆಕ್ನಾಲಜೀಸ್
ನಂ. 43H, ಎಸ್‌ಜೆಜೆಎಂ ಕಾಂಪ್ಲೆಕ್ಸ್, ಜಯದೇವ ಸರ್ಕಲ್, ಹದಡಿ ರಸ್ತೆ, ದಾವಣಗೆರೆ.
99001 42052

**ಕೆಲಸಕ್ಕೆ ಬೇಕಾಗಿದ್ದಾರೆ**
ವೆಂಕಟೇಶ್ವರ ಟ್ರ್ಯಾಕ್ಟರ್ ಶೋ ರೂಂ ಟ್ರ್ಯಾಕ್ ಸ್ಟಾರ್ ಡೀಲರ್, ದಾವಣಗೆರೆ.
- ಸೇಲ್ಸ್ ಮ್ಯಾನೇಜರ್ - 1
- ಸೇಲ್ಸ್ ಫೀಲ್ಡ್ ಆಫೀಸರ್ - 5
(ದಾವಣಗೆರೆ, ಹರಿಹರ, ಹರಪನಹಳ್ಳಿ, ಜಗಳೂರು)
70220 63166

**ಬಾಡಿಗೆಗೆ ಇದೆ**
ದಾವಣಗೆರೆ ಪ್ರಮುಖ ವಾಣಿಜ್ಯ ಪ್ರದೇಶದಲ್ಲಿ ಇರುವ ಹೋಟೆಲ್ ಬಾಡಿಗೆಗೆ ಇದೆ (ಅಡುಗೆ ಪಾತ್ರೆ ಹಾಗೂ ಫರ್ನೀಚರ್ ಸೇರಿ). ಸಂಪರ್ಕಿಸಿ:
ಮೊ: 78923 94915

**ರೂಂ ಬಾಡಿಗೆಗೆ ಇದೆ**
2ನೇ ಮಹಡಿಯಲ್ಲಿ ರೂಂ ಖಾಲಿ ಇದೆ. 1382#A6, ಸರಸ್ವತಿ ನಗರ, ಕೆಎಸ್‌ಎಸ್ ಸ್ಕೂಲ್ ಹತ್ತಿರ, ದಾವಣಗೆರೆ. ಸಂಪರ್ಕಿಸಿ: ಧರ್ಮರಾಜ್
80956 76644

**ತಕ್ಷಣ ಹೆಣ್ಣು ಮಕ್ಕಳು ಬೇಕಾಗಿದ್ದಾರೆ**
ವಿದ್ಯಾನಗರ ಮೊದಲ ಬಸ್ ಸ್ಟಾಪ್ ಮನೆಯಲ್ಲಿ ವಯಸ್ಸಾದ ಹೆಣ್ಣು ಮಗಳಿಗೆ ನೋಡಿ ಕೊಂಡು ಮತ್ತು ಅಡುಗೆ ಮಾಡುವಂತಹ ಲಿಂಗಾಯತ ಹೆಣ್ಣು ಮಕ್ಕಳು ಬೇಕಾಗಿದ್ದಾರೆ. ಸಂಬಳ ತಿಂಗಳಿಗೆ 7500 ರಿಂದ 8000 ರೂಗಳು. ತಕ್ಷಣ ಭೇಟಿ ಮಾಡಿರಿ. ಸಂಪರ್ಕಿಸಿ :
94496 79324

**ಜಮೀನು ಮಾರಾಟಕ್ಕಿದೆ**
ಶ್ರೀ ಕ್ಷೇತ್ರ ಮೈಲಾರದಲ್ಲಿ ನದಿ ದಂಡೆಯಲ್ಲಿರುವ 15 ರಿಂದ 20 ಎಕರೆ ನೀರಾವರಿ ಜಮೀನು ಮಾರಾಟಕ್ಕಿದೆ. ಜಮೀನು ದಾವಣಗೆರೆಯಿಂದ 55km ದೂರದಲ್ಲಿದೆ. ಹೂವಿನಹಡಗಲಿ ತಾಲ್ಲೂಕು, ವಿಜಯನಗರ ಜಿಲ್ಲೆ (ಬಳ್ಳಾರಿ).
ಆಸಕ್ತರು ಸಂಪರ್ಕಿಸಿ: 95900 88767

**RAJASTHAN TOUR**
Dep: 29th NOV, Duration: 10 Days
Premium PKG Rs 59,600 pp
DVG WORLD TOURS
P J Exten, Davanagere.
99006 66122

**WANTED**
Female Teachers
B.Sc, B.Ed or M.Sc, B.Ed- 2 Post
BA, B.Ed or MA, B.Ed - 2 Post,
Kannada Major. Contact :
81975 21669, 99806 68681

**SSY ತರಬೇತಿ**
ಸಿದ್ಧ ಸಮಾಧಿ ಯೋಗ ತರಬೇತಿ ಶಿಬಿರವು ಇದೇ ನ.10ರ ಭಾನುವಾರದಿಂದ ಆರಂಭವಾಗಲಿದೆ. ಸ್ಥಳ: ವಿನಾಯಕ ದೇವಸ್ಥಾನ, ರಾಂ ಅಂಡ್ ಕೋ ವೃತ್ತ, ದಾವಣಗೆರೆ.
ಮೊ: 99646 75441, 94486 67523, 97319 93770

**ಬೇಕಾಗಿದ್ದಾರೆ**
ವೈನ್ ಶಾಪ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಶಾಮನೂರು ರೋಡ್, ದಾವಣಗೆರೆ.
98861 66432

**WANTED**
Accounts departments female condidate only any degree Freshers Preference age line below 30
88776 64633

**REQUIRED**
Accountant for construction office minimum 4 to 5 years experience in GST & Tally
8050222047, 8951938228

**ಕೆಲಸಕ್ಕೆ ಬೇಕಾಗಿದ್ದಾರೆ**
ಸಮ್ಯಕ್ ಸೆರಾಮಿಕ್ಸ್ & ಗ್ರ್ಯಾನೈಟ್ಸ್ ನಗರದ ಪ್ರತಿಷ್ಠಿತ ಟೈಲ್ಸ್ ಶೋರೂಮ್‌ನಲ್ಲಿ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿರುತ್ತಾರೆ. ಜಾಬ್ ವಿವರ : ಸೇಲ್ಸ್ (Sales) ರಿಸೆಪ್ಷನಿಸ್ಟ್ (Receptionist) ಮಾರ್ಕೆಟಿಂಗ್ (Marketing) ಸಂಪರ್ಕಿಸುವ ಮೊ.ನಂ.
80501 80487

**TELECALLERS REQUIRED FOR BANKING SERVICES**
CONTACT :
76761 03084

**ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ, ಫೈನಾನ್ಸ್,**
GST & Income Tax ನೋಂದಣಿ ನವೀಕರಣ ಮಾಡಿಕೊಡುತ್ತೇವೆ.
Mob: 94838 62779

**ಬೇಕಾಗಿದ್ದಾರೆ**
1) ಸೇಲ್ಸ್ ಮನ್ 2) ಟ್ಯಾಲಿ ಆಪರೇಟರ್ ಅನುಭವವುಳ್ಳವರು ಮಾತ್ರ ಸಂಪರ್ಕಿಸಿ.
ಪ್ರಕಾಶ್ ಕಾಫಿ ವರ್ಕ್ಸ್
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.
9900438052, 9740153513

**ವಾಟರ್ ಟ್ಯಾಂಕ್ & ಸಂಪ್ ಕ್ಲೀನಿಂಗ್**
ಸೋಲಾರ್ ಸೇಲ್ಸ್ ಮತ್ತು ಸರ್ವೀಸ್ ಮನೆ & ಅಪಾರ್ಟ್‌ಮೆಂಟ್‌ಗಳ ತೊಟ್ಟಿಗಳನ್ನು ಯಂತ್ರಗಳ ಮೂಲಕ ಕ್ಲೀನ್ ಮಾಡುತ್ತೇವೆ.
9740007212, 8861961622

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

Sri Nidhi Educational Trust (R)
**ನೇರ ಪರೀಕ್ಷೆಗಳು**
SSLC, PUC, B.A, B.Com, BCA, M.A, M.Com, M.Sc, Diploma Course, B.E, B.Tech, B,Lisb, M.Lisb, MBA, MCA & All Courses
**WANTED**
Receptionist (Ladies)
77609 55550

**ಬಾಡಿಗೆಗೆ ಇದೆ**
ಶಿವ-ಪಾರ್ವತಿ ದೇವಸ್ಥಾನದ ಎದುರು 1400 ಚ.ಅ. ಆಫೀಸ್ ಜೊತೆಗೆ ಇಂಟೀರಿಯರ್ಸ್ ಸಮೇತ ಬಾಡಿಗೆಗೆ ಇದೆ. ವಿದ್ಯಾನಗರ ಮುಖ್ಯರಸ್ತೆ, 1ನೇ ಮಹಡಿ.
72047 48919, 98444 43242

**FLAT ಮಾರಾಟಕ್ಕಿದೆ**
ಆಶೀರ್ವಾದ ಅಪಾರ್ಟ್‌ಮೆಂಟ್ Flat No - 202, #BHK Fully furnished ಉತ್ತರ ದಿಕ್ಕು, ವಿದ್ಯಾನಗರ ಕೆಫೆ ಕಾಫಿ ಡೇ ಹತ್ತಿರ, ಗಾಂಧಿ ಪ್ರತಿಮೆ ಹಿಂಭಾಗ, ಕೆನರಾ ಬ್ಯಾಂಕ್ ಎದುರುಗಡೆ, ದಾವಣಗೆರೆ.
76763 81314, 98445 29362

**ಕೆಲಸಕ್ಕೆ ಬೇಕಾಗಿದ್ದಾರೆ**
ಫ್ಯಾಬ್ರಿಕ್ ಸ್ಪಾ
ಎಂ.ಸಿ.ಸಿ. ಬಿ ಬ್ಲಾಕ್, ದಾವಣಗೆರೆ. ಸ್ಥಳೀಯರಿಗೆ ಆದ್ಯತೆ
88921 00278

**ಮಳಿಗೆ ಬಾಡಿಗೆಗಿದೆ**
Shop For Rent
ಬೆಳ್ಳೂಳ್ಳಿ ಬಿಲ್ಡಿಂಗ್, ಪಿ.ಬಿ. ರೋಡ್, ಶ್ರೀ ಲಾಡ್ಜ್ ಎದುರು, ಗ್ರೌಂಡ್ ಫ್ಲೋರ್, 1400 ಚ.ಅ., 1ನೇ ಮಹಡಿ - 1400 ಚ.ಅ., 2ನೇ ಮಹಡಿ, 1400 ಚ.ಅ.
99022 79003

**ಬೆಂಗಳೂರಿನಲ್ಲಿ ಬೇಕಾಗಿದ್ದಾರೆ**
ಮನೆ ಕೆಲಸದ ಮಹಿಳೆ ಬೇಕಾಗಿದ್ದಾರೆ. ಸಂಬಳ 15000 ವಸತಿ ಉಚಿತ. ಸಂಪರ್ಕಿಸಿ :
97400 98047

**ಖಾಲಿ ಜಾಗ ಬಾಡಿಗೆಗೆ**
ಪಾಲಿ ಕ್ಲಿನಿಕ್ ಜೊತೆಗೆ ಮೆಡಿಕಲ್ ಸ್ಟೋರ್/ಆಪ್ಟಿಕಲ್ಸ್, ಫಾರ್ಮಾ, ಕಾರ್ ಸೇಲ್/ಸರ್ವೀಸ್, ಕೆಫೆ/ಫಾಸ್ಟ್ ಫುಡ್/ಗಾರ್ಡನ್ ರೆಸ್ಟೋರೆಂಟ್, ಗ್ರಾನೈಟ್, ಗೋಡೌನ್, ಹಾರ್ಡ್‌ವೇರ್, ಷೋರೂಮ್, ಇತರ ಉಪಯೋಗಕ್ಕೆ ಪಿ.ಜೆ. ಬಡಾವಣೆ, ಎವಿಕೆ/ಸ್ಟೇಡಿಯಂ ರಸ್ತೆಯಲ್ಲಿ ಪೂರ್ವ ಮುಖ 3500 ಅಡಿ ಖಾಲಿ ಜಾಗ ಬಾಡಿಗೆಗೆ ಇದೆ.
95136 99252

**ಶ್ರೀ ಸಾಯಿ ಫೈನಾನ್ಸ್ (ರಿ)**
ನಮ್ಮಲ್ಲಿ ವ್ಯಾಪಾರಿಗಳಿಗೆ ಫೈನಾನ್ಸ್ ನೀಡಲಾಗುವುದು (ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್, ಎಗ್‌ರೈಸ್ ಸೆಂಟರ್ ಇತ್ಯಾದಿಗಳಿಗೆ ಫೈನಾನ್ಸ್ ನೀಡಲಾಗುವುದು ಶಿವಪ್ಪಯ್ಯ ಸರ್ಕಲ್, ದಾವಣಗೆರೆ..
96860 22969

**ನೇತ್ರ ದಾನ ಶ್ರೇಷ್ಠ ದಾನ**

**ಬೇಕಾಗಿದ್ದಾರೆ**
ವಿ. ಟ್ರಾನ್ಸ್‌ಪೋರ್ಟ್
ಎಪಿಎಂಸಿ ಮಾರ್ಕೆಟ್, ದಾವಣಗೆರೆ. ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ.
84948 07489
78991 94298

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಸೈಟುಗಳು ಮಾರಾಟಕ್ಕಿವೆ**
ಪಂಚಾಯಿತಿ ಡೋರ್ ನಂಬರ್ ಸೈಟುಗಳು ಫೈನಲ್ ಅಪ್ರೂವಲ್ ಸೈಟ್, ಕಡಿಮೆ ದರದಲ್ಲಿ ಸಿಗುತ್ತವೆ. 1 ಅಡಿಗೆ 980 ರೂಪಾಯಿಗೆ ಸಿಗಲಿವೆ.
86183 43463
86187 28546

**ಕೆಲಸಕ್ಕೆ ಬೇಕಾಗಿದ್ದಾರೆ**
ಶಿವಸಂಗಮ ಚಿಟ್ಸ್ ಪ್ರೈ.ಲಿ. ಶಿವಸಂಗಮ ಫೈನಾನ್ಸ್ (ರಿ)
ದಾವಣಗೆರೆ ಶಾಖೆಯಲ್ಲಿ ಮಾರ್ಕೆಟಿಂಗ್ & ರಿಕವರಿ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಸ್ಥಳ : ಡಾ. ಬಿ.ಆರ್. ಶಿವಶಂಕರ ನಾಗರತ್ನಮ್ಮ ಸಂಕೀರ್ಣ, ಪಿ.ಜೆ. ಬಡಾವಣೆ, 4ನೇ ಮೇನ್, ರಾಮ್ ಅಂಡ್ ಕೋ ಹತ್ತಿರ, ದಾವಣಗೆರೆ.
73533 29440, 81972 20933

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ (Nurse) ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ : ಸಿ.ಜಿ. ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
98450 35710, 77607 39990

**ಬೇಕಾಗಿದ್ದಾರೆ**
ನಗರದ ಪ್ರತಿಷ್ಠಿತ ಕಿರಾಣಿ ಅಂಗಡಿಯಲ್ಲಿ ಕೆಲಸ ಮಾಡಲು ಚುರುಕಾದ ಹುಡುಗರು ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ, ಅನುಭವ ಇಲ್ಲದವರು ಸಂಪರ್ಕಿಸಬಹುದು.
80733 01110

**ಹೆಸರು ಬದಲಾವಣೆ**
ದಾವಣಗೆರೆ ತಾಲ್ಲೂಕು ಹೊಸಬೆಳವನೂರು ವಾಸಿ ನಾನು ಶ್ರೀ ಶೌರ್ಯ ಹೆಚ್. ಬಿನ್ ಹನುಮಂತಪ್ಪ ನನ್ನ ಆಧಾರ ಕಾರ್ಡ್ & ಓಟರ್ ಐಡಿ & ಪಾನ್ ಕಾರ್ಡ್ ಹಾಗೂ ರೇಷನ್ ಕಾರ್ಡ್ ಇವೆಲ್ಲಾ ದಾಖಲೆಗಳಲ್ಲಿ ಹನುಮಂತ ಹೆಚ್. ಬಿನ್ ಹನುಮಂತಪ್ಪ ಎಂದು ಇದ್ದು ಆದರೆ ನನ್ನ ಸರಿಯಾದ ಹೆಸರು ಶೌರ್ಯ ಹೆಚ್. ಬಿನ್ ಹನುಮಂತಪ್ಪ ಎಂದು ತಿದ್ದುಪಡಿ ಮಾಡಿಸಿರುತ್ತೇನೆ, ನನ್ನ ಎಲ್ಲಾ ದಾಖಲೆಗಳಲ್ಲೂ ಈ ಹೆಸರಿನಿಂದ ಮುಂದುವರೆಯುತ್ತೇನೆಂದು ಪ್ರಮಾಣ ಮಾಡಿದ್ದೇನೆ. ಸಹಿ /- ಶೌರ್ಯ ಹೆಚ್.

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಆಸ್ಟ್ರಲ್ ಸರ್ಜರಿ**
ಬಿಪಿ , ಶುಗರ್, ಡಿಪ್ರೆಶನ್, ಮೈಗ್ರೇನ್, ಕ್ಯಾನ್ಸರ್, ಕಿಡ್ನಿ ತೊಂದರೆ, ಅಸ್ತಮಾ, ಸೋರಿಯಾಸಿಸ್, ಡ್ರಗ್ಸ್ ಮುಂತಾದ ದುಶ್ಚಟಗಳು, ಗ್ರಹದೋಷ, ನಾಗದೋಷ, ಮಾಟ ಮಂತ್ರ, ಭೂತ ಪ್ರೇತಗಳ ಭಯ ಹಾಗೂ ಹಿಂದಿನ ಜನ್ಮಗಳ ದೋಷಗಳ ಸಂಪೂರ್ಣ ನಿವಾರಣೆಗಾಗಿ :
80733 42011
(ವ್ಯಕ್ತಿ ಎಷ್ಟೇ ದೂರದಲ್ಲಿದ್ದರೂ ಡಿಸ್ಟೆನ್ಸ್ ಹೀಲಿಂಗ್ ಮಾಡುತ್ತೇವೆ)

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಪೂಜಿ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**WANTED**
Store Incharge /Sales In Dry Fruits Shop.
Bolas factory outlet
Near Vidyarthi Bavan Circle, Hadadi Road.
99007 08999, 91130 91031

**DOUBLE ROOMS ಮನೆ ಲೀಸ್‌ಗೆ ಇರುತ್ತದೆ**
ಎಲ್ಲಾ ಸೌಲಭ್ಯವುಳ್ಳ ಹೊಸ ಮನೆ ಲೀಸ್‌ಗೆ ಇದೆ. ಕೊಂಡಜ್ಜಿ ರಸ್ತೆ, ವಿನಾಯಕ ಪಬ್ಲಿಕ್ ಸ್ಕೂಲ್ ಹಿಂಭಾಗ ಅಶೋಕ್ ನಗರ, ದಾವಣಗೆರೆ.
95356 10817, 74060 70957

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10 CBSE / ICSE Boards, NEET / IIT - JEE / Olympiads Memory Techniques + Hand Writing
97398 65711, 94822 44114

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB NEET / IIT - JEE / KCET / CLAT - Printed Notes + Study Materials
97398 65711, 94822 44114

# ದಾವಣಗೆರೆ ವಿಶ್ವವಿದ್ಯಾಲಯ ತಂಡದ ಆಯ್ಕೆಗೆ ಸೆಣಸಾಡಿದ ಕುಸ್ತಿ ಪಟುಗಳು

ದಾವಣಗೆರೆ, ನ.7- ನಗರದ ಆಂಜನೇಯ ಬಡಾವಣೆಯಲ್ಲಿನ ಕುಸ್ತಿ ಒಳಾಂಗಣ ಕ್ರೀಡಾಂಗಣದಲ್ಲಿ ಅಂತರ್ ಕಾಲೇಜುಗಳ ಪುರುಷ ಮತ್ತು ಮಹಿಳಾ ಕುಸ್ತಿ ಪಂದ್ಯಾವಳಿ ಹಾಗೂ ದಾವಣಗೆರೆ ವಿವಿ ತಂಡದ ಆಯ್ಕೆ ಪ್ರಕ್ರಿಯೆ ಇಂದು ನಡೆಯಿತು.



ಪಂದ್ಯಾವಳಿಯನ್ನು ಉದ್ಘಾಟಿಸಿ ಮಾತನಾಡಿದ ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಅವರು, ಜಿಲ್ಲೆಯ ಎಲ್ಲಾ ಶಾಲಾ-ಕಾಲೇಜುಗಳಲ್ಲಿ ದೈಹಿಕ ಶಿಕ್ಷಕರ ನೇಮಕಾತಿ ಆಗಬೇಕು. ಅವರಿಗೆ ಸರ್ಕಾರದಿಂದ ಉತ್ತಮ ವೇತನವನ್ನೂ ನೀಡಬೇಕು ಎಂದರು.

ದಾವಣಗೆರೆ ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ಡೀನ್ ಡಾ.ಕೆ. ವೆಂಕಟೇಶ ಮಾತನಾಡಿ, ಪಂದ್ಯಾವಳಿಯಲ್ಲಿ ವಿಶ್ವವಿದ್ಯಾಲಯ ಮಟ್ಟದ ದಾವಣಗೆರೆ ಮತ್ತು ಚಿತ್ರದುರ್ಗದ ಒಟ್ಟು 120 ಕಾಲೇಜುಗಳಿಂದ ಪುರುಷ ಮತ್ತು ಮಹಿಳಾ ಕ್ರೀಡಾಪಟುಗಳು ಸೇರಿದಂತೆ 40 ಜನ ಕುಸ್ತಿಪಟುಗಳು ಭಾಗವಹಿಸಿದ್ದಾರೆ ಎಂದರು.

ಇಲ್ಲಿ ಆಯ್ಕೆಯಾಗುವ ಕ್ರೀಡಾ ಪಟುಗಳು ಪಂಜಾಬಿನ ಗುರುಕಾಶಿ ವಿಶ್ವವಿದ್ಯಾನಿಲಯದಲ್ಲಿ ನಡೆಯುವ ಅಂತರ್ ವಿಶ್ವವಿದ್ಯಾನಿಲಯ ಮಟ್ಟದ ಕುಸ್ತಿ ಪಂದ್ಯಾವಳಿಯಲ್ಲಿ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಬಿಇಎ ಮಹಾವಿದ್ಯಾಲಯ, ದಾವಣಗೆರೆ ವಿಶ್ವ ವಿದ್ಯಾಲಯ ಮತ್ತು ದಾವಣಗೆರೆ ವಿವಿ ದೈಹಿಕ ಶಿಕ್ಷಣ ನಿರ್ದೇಶಕರ ಸಹಯೋಗದಲ್ಲಿ ಕ್ರೀಡಾಕೂಟ ಜರುಗಿತು.

ಬಿ.ಇ.ಎ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ನೀತಾ ಸೇರಿದಂತೆ, ವಿವಿಧ ಕಾಲೇಜುಗಳ ದೈಹಿಕ ಶಿಕ್ಷಕರು ಹಾಗೂ ಕ್ರೀಡಾಪಟುಗಳು ಇದ್ದರು.

# ಉತ್ತರದ ಬಾಷಾ, ಸಂಸ್ಕೃತಿ ಬಲವಂತದ ಹೇರಿಕೆ ವಿಷಾದನೀಯ

## ದಾವಣಗೆರೆ ವಿವಿಯಲ್ಲಿ 69ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ನಾಡಿನ ಹಿರಿಯ ಸಾಹಿತಿ ಕುಂ.ವೀರಭದ್ರಪ್ಪ



ದಾವಣಗೆರೆ, ನ. 7 - ಉತ್ತರ ಭಾರತದ ಸಂಸ್ಕೃತಿ ಮತ್ತು ಭಾಷೆಯನ್ನು ದಕ್ಷಿಣ ರಾಜ್ಯಗಳ ಮೇಲೆ ಬಲವಂತವಾಗಿ ಹೇರುತ್ತಿರುವುದು ವಿಷಾದನೀಯ ಸಂಗತಿ ಎಂದು ನಾಡಿನ ಹಿರಿಯ ಸಾಹಿತಿ ಕುಂ. ವೀರಭದ್ರಪ್ಪ ಅಭಿಪ್ರಾಯಪಟ್ಟರು.

ದಾವಣಗೆರೆ ವಿಶ್ವವಿದ್ಯಾನಿಲಯದ ಎಂಬಿಎ ಸಭಾಂಗಣದಲ್ಲಿ ಗುರುವಾರ 69ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡ, ದ್ರಾವಿಡ ಭಾಷೆಗಳಲ್ಲಿ ಅತ್ಯಂತ ಶ್ರೀಮಂತ ಭಾಷೆಯಾಗಿದೆ. ಕನ್ನಡ ಭಾಷೆಗೆ ಯಾವತ್ತೂ ಅಳಿವಿಲ್ಲ, ಆದರೆ ಕನ್ನಡ ಅಧ್ಯಯನಕ್ಕೆ ಸರ್ಕಾರದಿಂದ ಯಾವುದೇ ಅನುದಾನ ಇಲ್ಲದಿರುವುದು ಕನ್ನಡ ಭಾಷೆಯ ದುರದೃಷ್ಟ ಎಂದರು.

ರಾಜ್ಯದ ಎಲ್ಲ ವಿಶ್ವವಿದ್ಯಾನಿಲಯಗಳ ಕನ್ನಡ ವಿಭಾಗಕ್ಕೆ ಪೂರ್ಣ ಪ್ರಮಾಣದ ಶಿಕ್ಷಕರು ಹಾಗೂ ಸೂಕ್ತ ಪ್ರೋತ್ಸಾಹ ನೀಡಬೇಕು ಎಂದು ಸರ್ಕಾರಕ್ಕೆ ಮನವಿ ಮಾಡಿದರು. ಕನ್ನಡ ಜೀವನದ ಮೌಲ್ಯಗಳನ್ನು ಹೇಳಿಕೊಡುವ ಅಮೂಲ್ಯ ಭಾಷೆ. ಕನ್ನಡ ಮಾಧ್ಯಮದಲ್ಲಿ ಓದಿರುವ ವಿದ್ಯಾರ್ಥಿಗಳೇ ಇಂದು ರಾಜ್ಯದಲ್ಲಿ ಉನ್ನತ ಸ್ಥಾನದಲ್ಲಿರುವುದು ಸಂತಸದ ವಿಷಯ ಎಂದರು.

ಪ್ರತಿಯೊಬ್ಬರನ್ನು ಗೌರವಿಸುವ ಸಂಸ್ಕೃತಿ ಕನ್ನಡ ಭಾಷೆಗಿದೆ. ಕನ್ನಡ ಎಂಬುದು ಸಕ್ಕರೆ ಬೊಂಬೆ ಯಿದ್ದಂತೆ, ಎಲ್ಲರೂ ಸುಲಭವಾಗಿ ಕಲಿಯಬಹು ದಾದ ಸರಳತೆ ನಮ್ಮ ಭಾಷೆಯಲ್ಲಿ ಅಡಗಿದೆ. ಹಾಗಾಗಿ ಪ್ರತಿಯೊಬ್ಬರು ಕನ್ನಡ ಸರ್ಕಾರಿ ಶಾಲೆಗಳಲ್ಲಿಯೇ ತಮ್ಮ ಮಕ್ಕಳನ್ನು ದಾಖಲಿಸುವು ದರಿಂದ ಕನ್ನಡ ಭಾಷೆಯನ್ನು ಮತ್ತಷ್ಟು ಬೆಳೆಸಲು ಸಾಧ್ಯವಿದೆ ಎಂದರು.

ಹಿರಿಯ ಸಾಹಿತಿ ಹಾಗೂ ಪತ್ರಕರ್ತ ಆರ್. ಜಿ. ಹಳ್ಳಿ ನಾಗರಾಜ್ ಮಾತನಾಡಿ, ಕರ್ನಾಟಕ ಹಾಗೂ ಕನ್ನಡದ ಉಳಿವಿಗಾಗಿ ಹಲವು ವರ್ಷಗಳಿಂದ ಹೋರಾಟಗಳು ನಡೆಯುತ್ತಾ ಬಂದಿವೆ. ಕನ್ನಡದ ಅಭಿವೃದ್ಧಿಗೆ ಸಾಕಷ್ಟು ಪ್ರಭಾವಿತ ವ್ಯಕ್ತಿಗಳ ನಿರಂತರ ಪರಿಶ್ರಮವಿದೆ. ಇದನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವುದು ನಮ್ಮೆಲ್ಲರ ಆದ್ಯ ಕರ್ತವ್ಯ, ವಿದ್ಯಾರ್ಥಿಗಳು ಕನ್ನಡ ವಿಷಯಗಳ ಬಗ್ಗೆ ಹೆಚ್ಚಿನ ಅಧ್ಯಯನ ಹಾಗೂ ಸಂಶೋಧನೆಗಳನ್ನು ಕೈಗೊಳ್ಳುವ ಮೂಲಕ ಕನ್ನಡದ ವೈಭವವನ್ನು ಮುಂದುವರೆಸುವುದು ಅಗತ್ಯವಾಗಿದೆ ಎಂದು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕುಲಪತಿ ಪ್ರೊ. ಬಿ.ಡಿ. ಕುಂಬಾರ್ ಮಾತನಾಡಿ, ಕನ್ನಡ ಮತ್ತು ಕರ್ನಾಟಕದ ಉಳಿವಿಗೆ ಉತ್ತರ ಕರ್ನಾಟಕದ ಕೊಡುಗೆ ಅಪಾರವಾಗಿದೆ. ಕನ್ನಡ ಅಭಿರುಚಿ ಮತ್ತು ಆಸಕ್ತಿ ಇಲ್ಲವಾದಲ್ಲಿ ಉತ್ತಮ ವಿದ್ಯಾರ್ಥಿ ಯಾಗಲು ಸಾಧ್ಯವಿಲ್ಲ. ಇತ್ತೀಚಿನ ದಿನಗಳಲ್ಲಿ ಕನ್ನಡ ಸಾಹಿತ್ಯ ವನ್ನು ಓದುವ ಹವ್ಯಾಸ ವಿದ್ಯಾರ್ಥಿಗಳಲ್ಲಿ ಕಡಿಮೆಯಾಗುತ್ತಿರುವುದು ವಿಪರ್ಯಾಸ. ಕರ್ನಾಟಕದ ಗಡಿಭಾಗದ ಕನ್ನಡಿಗರಿಗೆ ಸಾಕಷ್ಟು ಸಮಸ್ಯೆಗಳಿವೆ. ಅವುಗಳಿಗೆ ಸೂಕ್ತ ಪರಿಹಾರ ಜರುಗಿಸು ವುದು ಸರ್ಕಾರದ ಜವಾಬ್ದಾರಿ ಎಂದರು.

ಕಾರ್ಯಕ್ರಮದಲ್ಲಿ ಕುಲಸಚಿವ ಪ್ರೊ. ಮಹಾಬಲೇಶ್ವರ ಯು. ಎಸ್, ಪರೀಕ್ಷಾಂಗ ಕುಲ ಸಚಿವ ಪ್ರೊ. ರಮೇಶ್ ಸಿ. ಕೆ, ಹಣಕಾಸು ಅಧಿಕಾರಿ ದ್ಯಾಮನಗೌಡ ಮುದ್ದನಗೌಡ್ರ, ಕನ್ನಡ ಅಧ್ಯಯನ ವಿಭಾಗದ ಅಧ್ಯಕ್ಷ ಡಾ. ಜಯರಾಮಯ್ಯ ವಿ, ಬೋಧಕ ಮತ್ತು ಬೋಧಕೇತರ ವರ್ಗ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ನಗರದಲ್ಲಿ ಇಂದು ಅಂತರ ಕಾಲೇಜು ಮಟ್ಟದ ಪುರುಷ - ಮಹಿಳೆಯರ ಕರಾಟೆ ತಂಡದ ಆಯ್ಕೆ

ಬಿ.ಎಸ್. ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ ವಿಶ್ವವಿದ್ಯಾನಿಲಯ ಹಾಗೂ ದೈಹಿಕ ಶಿಕ್ಷಣ ನಿರ್ದೇಶಕರ ಸಂಘ ಇವರ ಸಂಯುಕ್ತಾಶ್ರಯದಲ್ಲಿ 2024-25 ನೇ ಸಾಲಿನ ದಾವಣಗೆರೆ ವಿಶ್ವವಿದ್ಯಾನಿಲಯ ಮಟ್ಟದ ಅಂತರ ಕಾಲೇಜು ಪುರುಷ ಮತ್ತು ಮಹಿಳೆಯರ ಕರಾಟೆ ಹಾಗೂ ದಾವಿವಿ ತಂಡದ ಆಯ್ಕೆಯು ಇಂದು ಬೆಳಿಗ್ಗೆ 10 ಗಂಟೆಗೆ ಕಾಲೇಜಿನ ಸಭಾಂಗಣದಲ್ಲಿ ನಡೆಯಲಿದೆ.

ಕಾಲೇಜಿನ ಅಧ್ಯಕ್ಷ ಬಿ.ಸಿ. ಶಿವಕುಮಾರ್ ಅಧ್ಯಕ್ಷತೆಯಲ್ಲಿ ಜರುಗುವ ಕಾರ್ಯಕ್ರಮವನ್ನು ದಾವಿವಿ ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಮುಖ್ಯಸ್ಥ ಡಾ. ಕೆ.ವೆಂಕಟೇಶ್ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕಾಲೇಜಿನ ಪ್ರಾಂಶುಪಾಲ ಕೆ. ಷಣ್ಮುಖಪ್ಪ, ಕ್ರೀಡಾಧಿಕಾರಿ ಡಾ. ಬಿ ಹೆಚ್ ವೀರಪ್ಪ, ಸಂಘದ ಅಧ್ಯಕ್ಷ ಡಾ. ಸಿ. ಶಂಕರಪ್ಪ, ಕಾರ್ಯದರ್ಶಿ ಡಾ. ಕೆ.ಎಂ. ವೀರೇಂದ್ರ, ರೆಫ್ರಿ ಕೌಶಿ ಕೆ.ಪಿ ಜೋಶ್ ಪಾಲ್ಗೊಳ್ಳಲಿದ್ದಾರೆ.

ಮಧ್ಯಾಹ್ನ 3 ಗಂಟೆಗೆ ಸಮಾರೋಪ ಸಮಾರಂಭವು ಪ್ರಾಂಶುಪಾಲ ಎಂ.ಸಿ ಗುರು ಅಧ್ಯಕ್ಷತೆಯಲ್ಲಿ ಜರುಗಲಿದ್ದು, ಮುಖ್ಯ ಅತಿಥಿಗಳಾಗಿ ದಾವಿವಿ ಕ್ರೀಡಾಧಿಕಾರಿ ಡಾ.ಬಿ. ಎಚ್. ವೀರಪ್ಪ ಮತ್ತು ಸಂಘದ ಕಾರ್ಯದರ್ಶಿ ಡಾ. ಕೆ.ಎಂ. ವೀರೇಂದ್ರ ಪಾಲ್ಗೊಳ್ಳಲಿದ್ದಾರೆ. ಬಹುಮಾನ ವಿತರಣೆಯನ್ನು ಬಸವರಾಜ್ ವಿ. ದಮ್ಮಳ್ಳಿ, ಎಂ. ಆರ್. ರೇಖಾ ವಿತರಿಸಲಿದ್ದಾರೆ.

# ಕಾಮಗಾರಿ ಮಾಡದೇ ಬಿಲ್ ಪಡೆದ ಆರೋಪ ಲೋಕಾಯುಕ್ತ ಎಂಜಿನಿಯರ್ ಪರಿಶೀಲನೆ

ಹರಿಹರ, ನ.7 - ಕಾಮಗಾರಿ ನಡೆಸದೇ ಬಿಲ್ ಪಡೆಯಲಾಗಿದೆ ಎಂದು ಆರೋಪಿಸಿ ಸಲ್ಲಿಸಿದ್ದ ದೂರಿನ ಆಧಾರದ ಮೇರೆಗೆ ಬೆಂಗಳೂರಿನ ಲೋಕಾಯುಕ್ತ ಸಿವಿಲ್ ಎಂಜಿನಿಯರ್ ಅನುಷಾ ಮತ್ತು ಸಿಬ್ಬಂದಿ ನಗರದ ಕೆ.ಆರ್. ನಗರದಲ್ಲಿ ನಿನ್ನೆ ಪರಿಶೀಲನೆ ನಡೆಸಿದರು.

ಮೊದಲು ನಗರಸಭೆ ಕಛೇರಿಗೆ ಭೇಟಿ ನೀಡಿದ್ದ ತಂಡವು, ದಾಖಲಾಗಿರುವ ದೂರಿನ ಸಂಬಂಧಿತ ಕಡತಗಳನ್ನು ವಶಕ್ಕೆ ಪಡೆಯಿತು. ನಂತರ ಕೆ.ಆರ್. ನಗರದ ವಿದ್ಯಾದಾಯಿನಿ ಶಾಲೆ ಸುತ್ತಲಿನ ಕಿರು ನೀರು ಸರಬರಾಜು

**ಹರಿಹರ**

ಕೇಂದ್ರಗಳನ್ನು ಪರಿಶೀಲಿಸಿತು.

ಆರೋಪ ಹೊತ್ತವರ ಪೈಕಿ ನಗರಸಭೆ ಹಿಂದಿನ ಪೌರಾಯುಕ್ತರಾದ ಎಸ್. ಲಕ್ಷ್ಮಿ ಅವರು ಮಾತ್ರ ಸ್ಥಳಕ್ಕೆ ಆಗಮಿಸಿ, ಪರಿಶೀಲನಾ ಸಮಯದಲ್ಲಿ ಹಾಜರಿರಲು ಆಗುತ್ತಿಲ್ಲ ಎಂಬ ಪತ್ರವನ್ನು ನೀಡಿ ತೆರಳಿದರು.

ಈ ಹಿಂದೆ ಇಲ್ಲಿ ಎಇಇ, ಎಇ ಯಾಗಿ ಸೇವೆ ಸಲ್ಲಿಸಿದ್ದ ಆರೋಪಿತರು ಸ್ಥಳ ಪರಿಶೀಲನಾ ಸಮಯದಲ್ಲಿ ಬರುತ್ತೇವೆ ಎಂದು ಹೇಳಿದ್ದರಾದರೂ ಹಾಜರಾಗಲಿಲ್ಲ. ಇನ್ನೆರಡು ದಿನ ಪರಿಶೀಲನೆ ನಡೆಯಲಿದ್ದು, ಆರೋಪಿತರು ಆಗಮಿಸುವ ನಿರೀಕ್ಷೆಯಿದೆ. ಬಾರದಿದ್ದಲ್ಲಿ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಲಾಗುವುದು ಎಂದು ಅನುಷಾ ಪ್ರತಿಕ್ರಿಯಿಸಿದರು.

ದೂರುದಾರರಾದ ಗುತ್ತಿಗೆದಾರ ಮಜಹರ್ ಸಾಬ್, ಮಧುಸೂದನ ಮೂಡಿ, ಪೌರಾಯುಕ್ತ ಸುಬ್ರಹ್ಮಣ್ಯ ಶ್ರೇಷ್ಠಿ, ಎಂಜಿನಿಯರ್ ಪ್ರಕಾಶ್, ಕರ್ನಾಟಕ ದಲಿತ ಸಂಘರ್ಷ ಸಮಿತಿ ತಾಲ್ಲೂಕು ಘಟಕದ ಅಧ್ಯಕ್ಷ ಪಿ.ಜೆ. ಮಹಾಂತೇಶ್ ಇದ್ದರು.

# 18ನೇ ವಾರ್ಡಿನಲ್ಲಿ ಕಾಮಗಾರಿ ಪರಿಶೀಲನೆ



ದಾವಣಗೆರೆ, ನ. 7 - ನಗರ ಪಾಲಿಕೆಯ 18 ನೇ ವಾರ್ಡಿನಲ್ಲಿ ಕೈಗೊಂಡಿರುವ ಸ್ವಚ್ಛತಾ ಕಾಮಗಾರಿಯನ್ನು ಮಹಾಪೌರ ಕೆ. ಚಮನ್ ಸಾಬ್ ವೀಕ್ಷಿಸಿದರಲ್ಲದೇ, ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿದರು. ಈ ಸಂದರ್ಭದಲ್ಲಿ ಉಪ ಮೇಯರ್ ಸೋಗಿ ಶಾಂತಕುಮಾರ್, ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ, ಮುಖಂಡರು ಹಾಗೂ ಪಾಲಿಕೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಅರಸೀಕೆರೆಯಲ್ಲಿ ಇಂದು ಕಾಂಗ್ರೆಸ್ ಎಸ್ಸಿ ವಿಭಾಗದ ಸಭೆ

ಜಿಲ್ಲಾ ಕಾಂಗ್ರೆಸ್ ಸಮಿತಿ ಪರಿಶಿಷ್ಟ ಜಾತಿ ವಿಭಾಗದ ವತಿಯಿಂದ ಇಂದು ಮಧ್ಯಾಹ್ನ 2 ಗಂಟೆಗೆ ಜಗಳೂರು ತಾಲ್ಲೂಕು ಅರಸೀಕೆರೆಯಲ್ಲಿ ಎಸ್ಸಿ ವಿಭಾಗದ ಕಾಂಗ್ರೆಸ್ ಸಭೆ ಕರೆಯಲಾಗಿದೆ.

ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷ ಬಿ.ಹೆಚ್. ವೀರಭದ್ರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಬ್ಲಾಕ್ ಅಧ್ಯಕ್ಷ ವೆಂಕಟೇಶ್, ವಿಭಾಗದ ಉಪಾಧ್ಯಕ್ಷ ಶಂಭುಲಿಂಗಪ್ಪ ತಿಳಿಸಿದ್ದಾರೆ. ಜಿಲ್ಲಾ ಕಾಂಗ್ರೆಸ್ ಸಮಿತಿ ಪರಿಶಿಷ್ಟ ಜಾತಿ ವಿಭಾಗದ ಹಾಗೂ ಜಿಲ್ಲಾ ಮುಖಂಡರ ನೇತೃತ್ವದಲ್ಲಿ ಡಿಸೆಂಬರ್ 15 ರಂದು ನಡೆಯುವ ಮಾದಿಗ ಸಮಾಜದ ಸಮಾವೇಶ, ಸಾಮೂಹಿಕ ವಿವಾಹ ಹಾಗೂ ಮಾದಾರ ಚನ್ನಯ್ಯ ಜಯಂತಿ ಹಿನ್ನೆಲೆಯಲ್ಲಿ ಅರಸೀಕೆರೆಯಲ್ಲಿ ಪೂರ್ವಭಾವಿ ಸಭೆ ಕರೆಯಲಾಗಿದೆ ಎಂದು ತಿಳಿಸಿದ್ದಾರೆ.

# ಪತ್ರಕರ್ತ ವೀರಪ್ಪ ಭಾವಿ ಅವರಿಗೆ ವರದಿಗಾರರ ಕೂಟದಿಂದ ಶ್ರದ್ಧಾಂಜಲಿ




ದಾವಣಗೆರೆ, ನ. 7 - ಹಿರಿಯ ಪತ್ರಕರ್ತರೂ ಆದ 'ಇಂದಿನ ಸುದ್ದಿ' ಸಂಪಾದಕ ವೀರಪ್ಪ ಎಂ. ಭಾವಿ ಅವರ ನಿಧನಕ್ಕೆ ಜಿಲ್ಲಾ ವರದಿಗಾರರ ಕೂಟದಲ್ಲಿ ಮಂಗಳವಾರ ಶ್ರದ್ಧಾಂಜಲಿ ಸಭೆ ನಡೆಸಲಾಯಿತು.

ಸಭೆಯಲ್ಲಿ ಮಾತನಾಡಿದ ಪ್ರಜಾವಾಣಿ ಸ್ಥಾನಿಕ ಸಂಪಾದಕ ಸಿದ್ದಯ್ಯ ಹಿರೇಮಠ್, ಸಾಮಾಜಿಕ ಕಳಕಳಿಯ ಜೊತೆ ಧಾರ್ಮಿಕ ಕ್ಷೇತ್ರದಲ್ಲೂ ಸೇವೆ ಸಲ್ಲಿಸುತ್ತಿದ್ದ ವೀರಪ್ಪ ಭಾವಿ ಅವರ ಅಗಲಿಕೆ ಪತ್ರಕರ್ತರಿಗೆ ತುಂಬಲಾರದ ನಷ್ಟವಾಗಿದೆ. ಅವರು ಇತರರೊಂದಿಗೆ ಮಾಹಿತಿ ಹಂಚಿಕೆ ಮತ್ತು ಪಡೆಯುತ್ತಿದ್ದರು ಎಂದು ಸ್ಮರಿಸಿದರು.

ಸಂಯುಕ್ತ ಕರ್ನಾಟಕದ ಸ್ಥಾನಿಕ ಸಂಪಾದಕ ಮಂಜುನಾಥ್ ಗೌರಕ್ಕಳವರ್ ಮಾತನಾಡಿ, ವೀರಪ್ಪ ಭಾವಿ ಅವರು ತನಗೆ ನೀಡಿದ್ದ ಕೆಲವು ಮಾರ್ಗದರ್ಶನಗಳಿಂದಾಗಿ ಅಂದಿನ ನಗರ ಸಭೆಯ ಆಡಳಿತಾತ್ಮಕ ಬದಲಾವಣೆಗೆ ಕಾರಣವಾಗಿದ್ದವು ಎಂದು ಹೇಳಿದರು.

ದಾವಣಗೆರೆ ಟೈಮ್ಸ್ ಸಂಪಾದಕ ಜಿ. ಎಸ್.ವೀರೇಶ್ ಮಾತನಾಡಿ, ಅವರು ನಮ್ಮ ಪತ್ರಿಕೆಯನ್ನು ಉಳಿಸಿ, ಬೆಳೆಸಿಕೊಂಡು ಹೋಗಬೇಕೆನ್ನುವುದನ್ನು ತೋರಿಸಿಕೊಟ್ಟು, ನಮ್ಮಲ್ಲಿ ಭರವಸೆ ತುಂಬಿ ಮಾರ್ಗದರ್ಶನ ನೀಡಿ ಪತ್ರಿಕಾ ರಂಗದಲ್ಲಿ ನಮ್ಮನ್ನು ತೊಡಗಿಸಿಕೊಳ್ಳಲು ಕಾರಣರಾಗಿದ್ದರು ಎಂದರು.

ವಿಜಯವಾಣಿಯ ಹಿರಿಯ ಪತ್ರಕರ್ತ ರಮೇಶ್ ಜಹಗೀರ್‌ದಾರ್ ಮಾತನಾಡಿ, ಯಾವುದೇ ವ್ಯಕ್ತಿಯಾಗಲೀ ಗೌರವದಿಂದ ಕಾಣುವ ವ್ಯಕ್ತಿತ್ವ ವೀರಪ್ಪ ಭಾವಿ ಅವರದಾಗಿತ್ತು ಎಂದು ಹೇಳಿದರು.

ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ್ ಎಸ್.ಬಡದಾಳ್ ಮಾತನಾಡಿ, ವೀರಪ್ಪ ಭಾವಿ ಅವರದು ಪತ್ರಿಕಾ ರಂಗಕ್ಕೆ ಯಾರೇ ಹೊಸದಾಗಿ ಬರಲಿ ಅವರಿಗೆ ಮಾನಸಿಕವಾಗಿ ಧೈರ್ಯ ತುಂಬುವ ಮೂಲಕ ನೈತಿಕ ಬೆಂಬಲ ನೀಡುತ್ತಿದ್ದ ವ್ಯಕ್ತಿತ್ವ ಎಂದು ಸ್ಮರಿಸಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಇ.ಎಂ. ಮಂಜುನಾಥ ಮಾತನಾಡಿ, ಅಚ್ಚುಮೊಳೆ ಕಾಲದಿಂದಲೂ ಬಾಂಧವ್ಯ ಹೊಂದಿದ್ದ ವೀರಪ್ಪ ಭಾವಿ ಮತ್ತು ನಮ್ಮ ಬಾಂಧವ್ಯ ಇಂದಿನ ಆಧುನಿಕ ಕಾಲದ ತಂತ್ರಜ್ಞಾನದವರೆಗೂ ಅದೇ ರೀತಿ ಮುಂದುವರೆದುಕೊಂಡು ಬಂದಿದೆ. ಪತ್ರಿಕೆಯನ್ನು ಯಾವ ರೀತಿ ನಡೆಸಬೇಕೆನ್ನುವುದನ್ನು ತಿಳಿಸಿಕೊಟ್ಟ ವ್ಯಕ್ತಿತ್ವ ಅವರದು ಎಂದು ಹೇಳಿದರು.

ಜಿಲ್ಲಾ ವರದಿಗಾರರ ಕೂಟದ ಪ್ರಧಾನ ಕಾರ್ಯದರ್ಶಿ ಎಂ.ವೈ.ಸತೀಶ್, ಖಜಾಂಚಿ ಈ. ಪವನ್‌ಕುಮಾರ್, ಪದಾಧಿಕಾರಿಗಳಾದ ರವಿಬಾಬು, ಬಿ.ಸಿಕಂದರ್, ತೇಜಸ್ವಿ ಪ್ರಕಾಶ್, ದೇವಿಕಾ ಸುನೀಲ್, ಐ.ಗುರು ಶಾಂತಪ್ಪ, ಬಿ.ರಾಮಮೂರ್ತಿ, ಸುರೇಶ್ ಕುಣಿಬೆಳಕೆರೆ, ಚನ್ನಬಸವ ಶೀಲವಂತ್, ಪಿ.ಎಸ್.ಲೋಕೇಶ್, ಬಸವರಾಜ್ ದೊಡ್ಮನಿ, ಮಹಾದೇವ, ಜಿಗಳಿ ಪ್ರಕಾಶ್, ಡಿ.ನೂರುಲ್ಲಾ, ಶಿವರಾಜ್ ಈಳಿಗೇರ, ಸಂಜಯ್, ಪರಶುರಾಮ ಇತರರು ಶ್ರದ್ಧಾಂಜಲಿ ಸಭೆಯಲ್ಲಿ ಭಾಗವಹಿಸಿದ್ದರು.

# ದೊಡ್ಡಬಾತಿಯಲ್ಲಿ ನಾಳೆ ಶ್ರೀ ಕೋಟೆ ಆಂಜನೇಯ ದೇವಸ್ಥಾನದ ಉದ್ಘಾಟನೆ



ದಾವಣಗೆರೆ, ನ. 7 - ಇಲ್ಲಿಗೆ ಸಮೀಪದ ದೊಡ್ಡ ಬಾತಿ ಗ್ರಾಮದ ಶ್ರೀ ಕೋಟೆ ಆಂಜನೇಯ ದೇವಸ್ಥಾನ ಉದ್ಘಾಟನೆ, ಶಿಲಾಮೂರ್ತಿ, ನವಗ್ರಹ ಪ್ರತಿಷ್ಠಾಪನೆ ಮತ್ತು ಪ್ರಾಣ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣ ಕಾರ್ಯಕ್ರಮವನ್ನು ನಾಡಿದ್ದು ದಿನಾಂಕ 9 ರ ಶನಿವಾರ ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಹಮ್ಮಿಕೊಳ್ಳಲಾಗಿದೆ.

ರಾಮಘಟ್ಟ ಪುರವರ್ಗ ಮಠದ ಶ್ರೀ ರೇವಣಸಿದ್ದ ಶಿವಾಚಾರ್ಯ ಮಹಾಸ್ವಾಮೀಜಿ ದಿವ್ಯ ಸಾನ್ನಿಧ್ಯ ಮತ್ತು ಆವರಗೊಳ್ಳದ ಶ್ರೀ ದೊಡ್ಡವೀರಯ್ಯ ಶಾಸ್ತ್ರಿಗಳ ಪೌರೋಹಿತ್ಯದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ನಾಳೆ ದಿನಾಂಕ 8 ರ ಶುಕ್ರವಾರ ಶ್ರೀ ರೇವಣಸಿದ್ದೇಶ್ವರ ಸ್ವಾಮಿ (ದೊಡ್ಡಬಾತಿ), ಶ್ರೀ ಆಂಜನೇಯಸ್ವಾಮಿ (ಹಳೇಬಾತಿ), ಶ್ರೀ ಸೂಳೆಕೆರೆ ಸಿದ್ದೇಶ್ವರ ಸ್ವಾಮಿ (ಶಾಂತಿಸಾಗರ - ಸೂಳೆಕೆರೆ), ಶ್ರೀ ಆಂಜನೇಯ ಸ್ವಾಮಿ (ನೀಲಾನಹಳ್ಳಿ), ಶ್ರೀ ವೀರಭದ್ರೇಶ್ವರ ಸ್ವಾಮಿ (ಆವರಗೊಳ್ಳ), ಶ್ರೀ ಆಂಜನೇಯ ಸ್ವಾಮಿ (ದೊಗ್ಗಳಿ), ಶ್ರೀ ಬೆಟ್ಟದ ಮಲ್ಲಿಕಾರ್ಜುನ ಸ್ವಾಮಿ (ಅಮರಾವತಿ), ಶ್ರೀ ಆಂಜನೇಯ ಸ್ವಾಮಿ (ಕುಂದುವಾಡ), ಶ್ರೀ ಬೀರಲಿಂಗೇಶ್ವರ ಸ್ವಾಮಿ (ದೊಡ್ಡಬಾತಿ), ಶ್ರೀ ಆಂಜನೇಯ ಸ್ವಾಮಿ (ಶಾಮನೂರು) ದೇವರುಗಳು ಶ್ರೀ ಕೋಟೆ ಆಂಜನೇಯ ದೇವಸ್ಥಾನ ಉದ್ಘಾಟನೆಗೆ ಆಗಮಿಸುವರು. ನಾಡಿದ್ದು ದಿನಾಂಕ 9ರ ಶನಿವಾರ ಬೆಳಿಗ್ಗೆ 11 ಗಂಟೆಗೆ ಏರ್ಪಾಡಾಗಿರುವ ಧಾರ್ಮಿಕ ಸಭೆಯನ್ನು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಉದ್ಘಾಟಿಸಲಿದ್ದು, ದೊಡ್ಡಬಾತಿ ಗ್ರಾಮ ಪಂಚಾಯ್ತಿ ಅಧ್ಯಕ್ಷರಾದ ಶ್ರೀಮತಿ ಮಂಜುಳಾ ಜೆಸಿಬಿ ಹನುಮಂತಪ್ಪ ಅಧ್ಯಕ್ಷತೆ ವಹಿಸುವರು.

ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಲೋಕಸಭಾ ಸದಸ್ಯ ಡಾ. ಪ್ರಭಾ ಮಲ್ಲಿಕಾರ್ಜುನ್, ಕೇಂದ್ರದ ಮಾಜಿ ಸಚಿವ ಜಿ.ಎಂ. ಸಿದ್ದೇಶ್ವರ, ಮಾಜಿ ಸಚಿವ ಎಸ್.ಎ. ರವೀಂದ್ರನಾಥ್, ಮಾಜಿ ಶಾಸಕರುಗಳಾದ ಎಸ್.ವಿ. ರಾಮಚಂದ್ರ, ಹೆಚ್.ಎಸ್. ಶಿವಸಂಕರ್, ಎಸ್. ರಾಮಪ್ಪ, ಜಿಲ್ಲಾಧಿಕಾರಿ ಡಾ. ಜಿ.ಎಂ. ಗಂಗಾಧರ ಸ್ವಾಮಿ, ತಹಶೀಲ್ದಾರ್ ಡಾ. ಎಂ.ಬಿ. ಅಶ್ವತ್ಥ್ ಅತಿಥಿಗಳಾಗಿದ್ದಾರೆ.

# ಶಿಗ್ಗಾಂವ ಚುನಾವಣಾ ಪ್ರಚಾರದಲ್ಲಿ ಡಿ.ಬಿ



ದಾವಣಗೆರೆ, ನ.7 - ಶಿಗ್ಗಾಂವ ವಿಧಾನಸಭಾ ಉಪ ಚುನಾವಣೆಯ ಪ್ರಚಾರ ಕಾರ್ಯದಲ್ಲಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ವೀಕ್ಷಕ ಡಿ. ಬಸವರಾಜ್ ಪ್ರಚಾರ ಕಾರ್ಯದಲ್ಲಿ ಭಾಗಿಯಾಗಿದ್ದು, ಉಪ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರಾದ ಡಿಕೆ ಶಿವಕುಮಾರ್, ಚುನಾವಣೆ ಉಸ್ತುವಾರಿ ಈಶ್ವರ್ ಖಂಡ್ರೆ, ಕೆಪಿಸಿಸಿ ಕ್ಯಾಂಪ್ ಕಚೇರಿಗೆ ಭೇಟಿ ನೀಡಿದ್ದರು.

ಸರ್ಕಾರದ ಗ್ಯಾರಂಟಿ ಸಮಿತಿ ಅಧ್ಯಕ್ಷ ಹೆಚ್.ಎಂ. ರೇವಣ್ಣ, ಕಾಂಗ್ರೆಸ್ ಅಭ್ಯರ್ಥಿ ಯಾಸೀರ್ ಖಾನ್ ಪಠಾಣ್, ಕೆಪಿಸಿಸಿ ಕ್ಯಾಂಪ್ ಕಚೇರಿ ಉಸ್ತುವಾರಿಗಳು, ಕೆಪಿಸಿಸಿ ಮುಖಂಡರುಗಳಾದ ಎಂ. ನಾರಾಯಣ ಸ್ವಾಮಿ, ವಿ.ಎಸ್ ಆರಾಧ್ಯ, ಜಿ.ಹೆಚ್. ಮರಿಯೋಜಿ ರಾವ್, ಮೋಹನ್ ಅಸುಂಡಿ ಮತ್ತು ಇತರರು ಭಾಗವಹಿಸಿದ್ದರು.

**ಕಂಪನಿಯಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ**

**BANSAL ARADHYA STEEL PVT LTD**

Haluvarthy near Anagodu,
Davangere - 577 556.

**SSLC, PUC, ITI-any Trade, BSc.,**

ವಯಸ್ಸು : 19 ರಿಂದ 35ರ ಒಳಗೆ

ನೇರ ಸಂದರ್ಶನದ ಸಮಯ : ಬೆಳಗ್ಗೆ 10.00 ರಿಂದ 4.00

# ಸೂಳೆಕೆರೆ ಹಳ್ಳಕ್ಕೆ ಸೇತುವೆ ನಿರ್ಮಿಸಲು ಆಗ್ರಹ



ಹರಿಹರ, ನ. 7 - ತಾಲ್ಲೂಕಿನ ಬೆಳ್ಳೂಡಿ-ರಾಮತೀರ್ಥ ಗ್ರಾಮಗಳ ನಡುವಿನ ಸೂಳೆಕೆರೆ ಹಳ್ಳಕ್ಕೆ ಹೊಸ ಸೇತುವೆ ನಿರ್ಮಿಸಲು ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ.ಬಿ. ಕೃಷ್ಣಪ್ಪ ಸ್ಥಾಪಿತ) ತಾಲ್ಲೂಕು ಘಟಕದಿಂದ ಗುರುವಾರ ಹಳ್ಳದ ನೀರಲ್ಲಿ ನಿಂತು ವಿಶಿಷ್ಟವಾಗಿ ಪ್ರತಿಭಟಿಸಿದರು.

ನಂತರ ಕದಸಂಸ ತಾಲ್ಲೂಕು ಸಂಚಾಲಕ ಪಿ.ಜೆ. ಮಹಾಂತೇಶ್ ಮಾತನಾಡಿ, ಹಳ್ಳದ ಈ ಭಾಗದಲ್ಲಿ ಬ್ಯಾರೇಜ್ ಕಂ. ಸೇತುವೆಯ ಕಮಾನುಗಳು ಚಿಕ್ಕ ಗಾತ್ರದಲ್ಲಿರುವುದರಿಂದ 2 ವರ್ಷಗಳ ಹಿಂದೆ ಮಳೆಗಾಲದ ಪ್ರವಾಹದ ನೀರಿಗೆ ಸೇತುವೆ ಪಕ್ಕದ ಮಣ್ಣು ಕೊಚ್ಚಿ ಹೋಗಿದೆ.

ಆಗಿನಿಂದಲೂ ಸೇತುವೆ ಇದ್ದೂ ಜನ, ವಾಹನ ಸಂಪರ್ಕ ಮಾಡಲಾಗುತ್ತಿಲ್ಲ. ಪರಿಣಾಮವಾಗಿ ಈ ಭಾಗದ ಹತ್ತಾರು ಗ್ರಾಮಗಳ ರೈತರು, ಕೂಲಿಕಾರರು, ವಿದ್ಯಾರ್ಥಿಗಳು, ಗ್ರಾಮಸ್ಥರು ಭಾನುವಳ್ಳಿ, ಶಿವಮೊಗ್ಗ ಮಾರ್ಗವಾಗಿ

## ಹರಿಹರದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಪ್ರತಿಭಟನೆ

ಏಳೆಂಟು ಕಿ.ಮೀ. ಹೆಚ್ಚುವರಿ ಸುತ್ತು, ಬಳಸಿ ಸಂಚರಿಸುವ ಶಿಕ್ಷೆ ಅನುಭವಿಸುತ್ತಿದ್ದಾರೆ.

ಈಗಿರುವ ಸೇತುವೆಯ ಕಣ್ಣುಗಳು ಕಿರಿದಾಗಿರುವುದರಿಂದ ಮಳೆಗಾಲದಲ್ಲಿ ಮರ, ಕೊಂಬೆ, ರೆಂಬೆ ಸಿಕ್ಕಿ ಕೊಳ್ಳುತ್ತವೆ, ಆಗ ನೀರಿನ ಪ್ರವಾಹ ಸೇತುವೆ ಪಕ್ಕದ ಮಣ್ಣನ್ನು ಕೊರೆದು ದಾರಿ ಮಾಡಿಕೊಳ್ಳುತ್ತದೆ. ಈ ಹಿಂದೆಯೂ ಹತ್ತಾರು ಲಕ್ಷ ಅನುದಾನ ಖರ್ಚು ಮಾಡಿ ದುರಸ್ತಿ ಕಾರ್ಯ ಮಾಡಿದ್ದು ನಿರುಪಯುಕ್ತವಾಗಿದೆ. ಆದ್ದರಿಂದ ಈ ಭಾಗದಲ್ಲಿ ಸುಸಜ್ಜಿತವಾದ ಪೂರ್ಣ ಪ್ರಮಾಣದ ಹೊಸ ಸೇತುವೆಯನ್ನು ನಿರ್ಮಿಸಬೇಕಿದೆ.

ಸಮಸ್ಯೆ ಉಂಟಾಗಿ ಎರಡು ವರ್ಷಗಳಾದರೂ ಈ ಭಾಗದ ಜನಪ್ರತಿನಿಧಿಗಳು, ಅಧಿಕಾರಿಗಳು ಮೌನಕ್ಕೆ ಶರಣಾಗಿರುವುದು ಆಶ್ಚರ್ಯ ಮೂಡಿಸುತ್ತದೆ. ಸ್ಥಳಕ್ಕೆ ಆಗಮಿಸಿದ್ದ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಗಿರೀಶ್, ಸಹಾಯಕ ಅಭಿಯಂತರ ಹನುಮಂತಪ್ಪನವರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಕದಸಂಸ ಪದಾಧಿಕಾರಿಗಳಾದ ಚೌಡಪ್ಪ ಸಿ. ಭಾನುವಳ್ಳಿ, ರಮೇಶ್ ಹೊಳೆಸಿರಿಗೆರೆ, ತಿಮ್ಮಣ್ಣ ಕಡ್ಲೆಗೊಂದಿ, ಸುತ್ತಲಿನ ಗ್ರಾಮಸ್ಥರಾದ ಎನ್. ಸಿದ್ದೇಶ್ ಪೂಜಾರ್, ಎಚ್. ವಿರುಪಾಕ್ಷಪ್ಪ, ವಿ.ಜೆ. ಹೊನ್ನೂರಪ್ಪ, ಎ.ಸಿದ್ದೇಶ್ವರಪ್ಪ, ಹನುಮಂತಪ್ಪ, ಎಸ್. ಪರಮೇಶ್ವರಪ್ಪ, ಎ. ಶಿವಪ್ಪ, ಆರ್. ಬಸವರಾಜ್, ಕೆ. ಮಹೇಶಪ್ಪ, ಶಿವನಗೌಡ, ಜಿ. ಸ್ವಾಮಿ, ಹಾಲೇಶಪ್ಪ, ಕೇಶವಾಚಾರಿ, ಜಿ.ಎಂ. ಮಹಾರುದ್ರಯ್ಯ, ಎಚ್. ಶೇಖರಪ್ಪ, ಗ್ರಾಮ ಪಂಚಾಯ್ತಿ ಸದಸ್ಯ ಕೊಟ್ರಪ್ಪ, ಮುದುಕಪ್ಪ ಹಾಗೂ ಇತರರಿದ್ದರು.

# ನಗರದಲ್ಲಿ ಇಂದು ನಗರ ಪಾಲಿಕೆ ಸ್ಥಾಯಿ ಸಮಿತಿಗೆ ಚುನಾವಣೆ

ಮಹಾನಗರ ಪಾಲಿಕೆಯ ನಾಲ್ಕು ಸ್ಥಾಯಿ ಸಮಿತಿಗಳ ಸದಸ್ಯರ ಸ್ಥಾನಗಳಿಗೆ ಇಂದು ಮಧ್ಯಾಹ್ನ 3 ಗಂಟೆಗೆ ಚುನಾವಣಾ ಸಭೆಯನ್ನು ಆಯೋಜಿಸಲಾಗಿದೆ. ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತ ಅಮ್ಲಾನ್ ಆದಿತ್ಯ ಬಿಸ್ವಾಸ್ ಅಧ್ಯಕ್ಷತೆ ವಹಿಸುವರು ಎಂದು ಮಹಾನಗರ ಪಾಲಿಕೆ ಪ್ರಕಟಣೆ ತಿಳಿಸಿದೆ.

**IN THE COURT OF THE PRINCIPAL SENIOR CIVIL JUDGE, AT DAVANAGERE**

**O.S. 138/2024**

**Plaintiff :** Smt. Geetha Narayan, ***V/s***

**Defendants :** Sri. B.V. Nagabhushana Setty and others,

**Defendant No. 1 :** Sri. B.V. Nagabhushana Setty, S/o. B.V. Shivananda Setty, Aged About 57 years, Businessman, Door No. 66/C1, Shivananda Krupa, 2nd Main, Akkamahadevi Road, P.J. Extension, DAVANAGERE

**Defendant No.2:** Smt. B.S. Anusuya, W/o. Late. B.V. Shivananda Setty, Aged about 82 years Door No. 66/C1, Shivananda Krupa, 2nd Main, Akkamahadevi Road, P.J. Extension, DAVANAGERE

**SUIT SUMMONS TO THE DEFENDANTS 1 AND 2 BY SUBSTITUED SERVICE BY PAPER PUBLICATION**

Whereas the above named plaintiff has filed the above suit against the defendants for partition and separate possession of her 1/5th share in the suit schedule and also for other consequential reliefs as well as for injunction to restrain the 1" defendant from alienating the suit schedule properties, for permanent injunctions, for court costs etc. The defendants 1 and 2 avoided the service of the suit summons, notice of the interlocutory applications and the order of temporary injunction sent to them by through the Hon'ble Court and also registered post with acknowledgement due. Hence this publication.

The defendants 1 and 2 are hereby called upon to take notice that the above suit is posted to 9th day of Dec, 2024 for your appearance. Both of you are hereby called upon to take notice to appear on 9th day of Dec of 2024 at 11:00 AM either personally or through an advocate failing which all further proceedings will take place in your absence.

Given under my hand and seal 7th day of NOV 2024 at Davanagere.

By order of the Court
**Chief Ministerial Officer**
Principal Civil Judge and CJM Court, Davanagere

**Place : Davanangere**
**Date : 07.11.2024**




❖ ಕೆಮ್ಮು ❖ ದಮ್ಮು ❖ ಗೂರಲು ❖ ಗಂಟಲು ಕೆರೆತ
❖ ಮೂಗಿನಲ್ಲಿ ಒಂದೇ ಸಮನೆ ಸೋರುವುದು
❖ ಗಂಟಲಲ್ಲಿ ಗೊರಗೊರ ❖ ವೀಝಿಂಗ್ ❖ ಸೈನಸ್
ಇದಕ್ಕೆ ಸಂಬಂಧಪಟ್ಟ ಎಷ್ಟೇ ವರ್ಷದ ಹಳೆಯ ಕಾಯಿಲೆ ಇದ್ದರೂ ಒಂದೇ ಬಾರಿಗೆ ಔಷಧಿಯನ್ನು ಕೊಟ್ಟು ಗುಣಪಡಿಸಲಾಗುತ್ತದೆ.

**ಸಂಪರ್ಕಿಸಿ : ಮೊ. : 92417 24231**

# ಹೈ.ಕ. ಅಭಿವೃದ್ಧಿಗೆ ನಂಜುಂಡಪ್ಪ ವರದಿ ಸಹಕಾರಿ

## ರಾಷ್ಟ್ರಮಟ್ಟದ ವಿಚಾರ ಸಂಕಿರಣದ ಸಮಾರೋಪದಲ್ಲಿ ವಿರುಪಾಕ್ಷಿ ಪೂಜಾರಹಳ್ಳಿ



ಹರಪನಹಳ್ಳಿ, ನ. 7- ಹೈದರಾಬಾದ್ ಕರ್ನಾಟಕದ ಸರ್ವತೋಮುಖ ಅಭಿವೃದ್ಧಿಗೆ ನಂಜುಂಡಪ್ಪ ವರದಿ ಸಹಕಾರಿಯಾಗಿದೆ ಎಂದು ಹಂಪಿ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗದ ಹಿರಿಯ ಪ್ರಾಧ್ಯಾಪಕ ವಿರುಪಾಕ್ಷಿ ಪೂಜಾರಹಳ್ಳಿ ಹೇಳಿದರು.

ತಾಲ್ಲೂಕಿನ ಅರಸೀಕೆರೆ ಗ್ರಾಮದ ವೈ. ಅಣ್ಣಪ್ಪ ಪದವಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಹಂಪಿ ಕನ್ನಡ ವಿಶ್ವವಿದ್ಯಾಲಯದ ಮಾನವಶಾಸ್ತ್ರ ವಿಭಾಗದ ಸಹಯೋಗದಲ್ಲಿ 'ಕಲ್ಯಾಣ ಕರ್ನಾಟಕದ ಹಿಂದುಳಿದ ವರ್ಗಗಳ ಸಮಸ್ಯೆ ಮತ್ತು ಸವಾಲುಗಳು' ಕುರಿತು ರಾಷ್ಟ್ರಮಟ್ಟದ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ರೈತರ ಆರ್ಥಿಕತೆ ಪ್ರಗತಿಗೆ ಅಗತ್ಯವಾದ ಯೋಜನೆಗಳನ್ನು ಜಾರಿಗೆ ತಂದು ಹಿಂದುಳಿದ ವರ್ಗಗಳ ಅಭಿವೃದ್ಧಿ ಶ್ರಮಿಸಬೇಕು. ಅಸ್ಪೃಶ್ಯತೆ, ಮೂಢ ನಂಬಿಕೆಗಳಿಂದಾಗಿ ಸಮಾಜ ಹಿಂದುಳಿದಿದೆ. ಸಮಾಜದ ಪರಿವರ್ತನೆಗೆ ಶಿಕ್ಷಣ ಅಗತ್ಯ ಎಂದರು.

ಸಂಡೂರು ಪ್ರಭುದೇವ ಸ್ವಾಮೀಜಿ ಆಶೀರ್ವಚನ ನೀಡಿ, 'ವಚನ ಸಾಹಿತ್ಯ, ಬಂಡಾಯ ಸಾಹಿತ್ಯ ಸೇರಿದಂತೆ ಶ್ರೀಮಂತ ಸಾಹಿತ್ಯಕ್ಕೆ ಕಲ್ಯಾಣ ಕರ್ನಾಟಕ ದೇಶಕ್ಕೆ ದೊಡ್ಡ ಕೊಡುಗೆ ನೀಡಿದೆ. ಆದರೆ ಅಭಿವೃದ್ಧಿ ಹಿನ್ನಡೆಯನ್ನು ಅವಲೋಕಿಸಿ ಸರ್ಕಾರ ಅಭಿವೃದ್ಧಿ ಪಡಿಸಬೇಕು.

ಕಲ್ಯಾಣ ಕರ್ನಾಟಕದಲ್ಲಿ ಜೀತ ಪದ್ಧತಿಯಂತೆ ಖಾಸಗಿ ಶಿಕ್ಷಣ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಶಾಲೆಗಳಿಗೆ ಈಗಾಗಲೇ ಸರ್ಕಾರದ ಅನುದಾನಗಳು ಇಲ್ಲ. ಮುಂದಿನ 10 ವರ್ಷದ ಅವಧಿಯಲ್ಲಿ ಶಾಲೆಗಳು ಖಾಸಗಿ ವ್ಯಕ್ತಿ ಪಾಲಾಗಲಿದ್ದು, ಹಣ ನೀಡಿ ಶಿಕ್ಷಣ ಪಡೆಯುವ ದಿನಮಾನಗಳು ದೂರ ಇಲ್ಲ. ವಿಶ್ವವಿದ್ಯಾಲಯಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದು ಹೊರತಾಗಿಲ್ಲ ಎಂದ ಅವರು, ಹಂಪಿ ವಿಶ್ವವಿದ್ಯಾಲಯದಲ್ಲಿ ಜನಪದ ಅಧ್ಯಯನ ಕೇಂದ್ರ ಸ್ಥಾಪನೆ ಆಗಬೇಕು ಎಂದರು.

ಉದ್ಯಮಿ ಪ್ರಶಾಂತ್ ಪಾಟೀಲ್ ಮಾತನಾಡಿ, ಬಡತನ, ಅನಕ್ಷರತೆಯಿಂದ ಸರ್ಕಾರದ ಯೋಜನೆಗಳು ಜನರಿಗೆ ತಲುಪಿತ್ತಿಲ್ಲ. ಬದಲಾಗಿ ಉಳ್ಳವರ ಪಾಲಾಗುತ್ತಿದೆ. ಅವುಗಳನ್ನು ಪಡೆಯಲು ಹೋರಾಟ ನಡೆಸುವುದು ಅನಿವಾರ್ಯವಾಗಿದೆ. ಶಿಕ್ಷಣದ ಹೊಣೆಗಾರಿಕೆಯನ್ನು ಮಠ, ಮಾನ್ಯಗಳು ಹೊತ್ತುಕೊಂಡು ಸಮುದಾಯದ ಅಭಿವೃದ್ಧಿಗೆ ಸಹಕರಿಸುತ್ತಿದೆ. ಜಾತಿ ವ್ಯವಸ್ಥೆಗೆ ಸಂಪೂರ್ಣ ಕಡಿವಾಣಕ್ಕೆ ಶಿಕ್ಷಣ ಅಗತ್ಯ ಎಂದರು.

ಈ ಸಂದರ್ಭದಲ್ಲಿ ಮಾನವಶಾಸ್ತ್ರ ವಿಭಾಗದ ಮುಖ್ಯಸ್ಥ ತಾರಿಹಳ್ಳಿ ಹನುಮಂತಪ್ಪ ಪ್ರಾಂಶುಪಾಲ ಡಾ.ಎಂ ಸುರೇಶ್, ಉಮೇಶ್, ಡಾ.ಹಾದಿಮನೆ ರಮೇಶ್, ಡಿ.ಹನುಮಂತಪ್ಪ ಸೇರಿದಂತೆ ಇತರರು ಇದ್ದರು.

# ವಿಶ್ವ ಮಧ್ವ ಮಹಾಪರಿಷತ್ ರಜತೋತ್ಸವ



ದಾವಣಗೆರೆ, ನ. 7- ವಿಶ್ವ ಮಧ್ವ ಮಹಾಪರಿಷತ್ ದಾವಣಗೆರೆ ಕೇಂದ್ರದ ರಜತ ಮಹೋತ್ಸವದ ಅಂಗವಾಗಿ ನಗರಕ್ಕಾಗಮಿಸಿದ್ದ ಶ್ರೀ 1008 ಸತ್ಯಾತ್ಮತೀರ್ಥ ಶ್ರೀಪಾದಂಗಳವರು ನಗರದ ಪಿ.ಜೆ. ಬಡಾವಣೆಯ ರಾಯರ ಮಠದಲ್ಲಿ ರಜತ ಮಹೋತ್ಸವದ ಉದ್ಘಾಟನೆ ನೆರವೇರಿಸಿ, ಭಕ್ತಾದಿಗಳಿಗೆ ಆಶೀರ್ವಚನ ಹಾಗೂ ಅನುಗ್ರಹ ಸಂದೇಶ ನೀಡಿದರು.

ವಿಶ್ವ ಮಧ್ವ ಮಹಾಪರಿಷತ್ ವತಿಯಿಂದ ಧರ್ಮದ ಪ್ರಚಾರ, ಸಂಸ್ಕಾರ, ಆರೋಗ್ಯ ಪ್ರಾಪ್ತಿ ಮುಂತಾದವುಗಳು ಸಕಲರಿಗೆ ದೊರೆಯಬೇಕೆಂದು ವಿಶ್ವ ಮಧ್ವ ಮಹಾಪರಿಷತ್ ಎಂಬ ಬೃಹತ್ತಾದ ಸಂಸ್ಥೆಯನ್ನು ಸ್ಥಾಪನೆ ಮಾಡಲಾಗಿದೆ. ಭಾರತ ದೇಶದ ಅನೇಕ ರಾಜ್ಯಗಳಲ್ಲಿ ಕೇಂದ್ರಗಳನ್ನು ಹೊಂದಿದೆ. ಅನೇಕ ಜ್ಞಾನ ಸತ್ರಗಳು, ವೈದ್ಯಕೀಯ ಶಿಬಿರಗಳು, ಸಾಮಾಜಿಕ ಕಾರ್ಯಗಳು ಜರುಗಿ ಸಾವಿರಾರು ಜನರಿಗೆ ಲಾಭವಾಗಿದೆ. ರಾಜ್ಯ ಹಾಗೂ ಹೊರ ರಾಜ್ಯದಲ್ಲಿ ಇದರ ಕಾರ್ಯಕ್ರಮಗಳು ನಡೆಯುತ್ತಿವೆ.

ರಜತ ಮಹೋತ್ಸವದ ಅಂಗವಾಗಿ ಒಂದು ವರ್ಷ ಪರ್ಯಂತ ಡಿಸೆಂಬರ್ 24 ರಿಂದ ನವೆಂಬರ್ 25 ರವರೆಗೆ ಪ್ರತಿ ತಿಂಗಳು ಒಬ್ಬ ಶ್ರೇಷ್ಠ ವಿದ್ವಾಂಸರಿಂದ ಮಹಾಭಾರತದ ಪ್ರವಚನ ಹಾಗೂ ರಜತ ಮಹೋತ್ಸವದ ವರ್ಷದಲ್ಲಿ ಅನೇಕ ಹೋಮ, ಹವನಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಶ್ರೀಗಳು ತಿಳಿಸಿದರು.

ಈ ಸಂದರ್ಭದಲ್ಲಿ ದಾವಣಗೆರೆ ಕೇಂದ್ರದ ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಉತ್ತರಾದಿ ಮಠದ ಭಕ್ತಾದಿಗಳು ಉಪಸ್ಥಿತರಿದ್ದರು.

# ರಶ್ದಿ ಕೃತಿ ನಿಷೇಧದ ಅಧಿಸೂಚನೆ ಒದಗಿಸಲು ಅಧಿಕಾರಿಗಳು ವಿಫಲ

**1988ರಲ್ಲಿ ರಾಜೀವ್ ಗಾಂಧಿ ಸರ್ಕಾರ 'ದಿ ಸೆಟಾನಿಕ್ ವರ್ಸಸ್' ಮೇಲೆ ನಿಷೇಧ ಹೇರಿರಲಿಲ್ಲ ಎಂಬ ನಿರ್ಧಾರಕ್ಕೆ ಬಂದ ಹೈಕೋರ್ಟ್**

ನವದೆಹಲಿ, ನ. 7 - ಸಲ್ಮಾನ್ ರಶ್ದಿ ಅವರ ವಿವಾದಿತ ಕೃತಿ 'ದಿ ಸೆಟಾನಿಕ್ ವರ್ಸಸ್' ಆಮದಿನ ಮೇಲೆ ರಾಜೀವ್ ಗಾಂಧಿ ಸರ್ಕಾರ ನಿಷೇಧ ಹೇರಿತ್ತು ಎಂಬ ಕುರಿತ ಅರ್ಜಿಯ ವಿಚಾರಣೆಗೆ ದೆಹಲಿ ಹೈಕೋರ್ಟ್ ತೆರೆ ಎಳೆದಿದೆ. 1988ರಲ್ಲಿ ಈ ರೀತಿಯ ನಿರ್ಬಂಧ ಹೇರಲಾಗಿತ್ತು ಎಂಬ ಬಗ್ಗೆ ಯಾವುದೇ ಅಧಿಸೂಚನೆ ಹಾಜರುಪಡಿಸಲು ಅಧಿಕಾರಿಗಳು ವಿಫಲರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಯಾವುದೇ ನಿಷೇಧ ಇಲ್ಲ ಎಂದು ಭಾವಿಸುವುದಾಗಿ ಹೈಕೋರ್ಟ್ ತಿಳಿಸಿದೆ. ನ್ಯಾಯಮೂರ್ತಿ ರೇಖಾಪಲ್ಲಿ ಅವರ ನೇತೃತ್ವದ ಪೀಠ ನವೆಂಬರ್ 5 ರಂದು ಈ ಕುರಿತು ಆದೇಶ ಹೊರಡಿಸಿದೆ.

'ದಿ ಸೆಟಾನಿಕ್ ವರ್ಸಸ್' ಕೃತಿ ದೈವನಿಂದನೆಯದ್ದಾಗಿದೆ ಎಂದು ಆರೋಪಿಸಲಾಗಿತ್ತು. ಕಾನೂನು ಸುವ್ಯವಸ್ಥೆ ಕಾರಣದಿಂದಾಗಿ 1988ರಲ್ಲಿ ಕೇಂದ್ರ ಸರ್ಕಾರ ಸಲ್ಮಾನ್ ರಶ್ದಿ ಅವರ ದಿ ಸೆಟಾನಿಕ್ ವರ್ಸಸ್ ಕೃತಿ ಆಮದಿನ ಮೇಲೆ ನಿಷೇಧ ಹೇರಿತ್ತು.

1988ರಲ್ಲಿ ಹೊರಡಿಸಲಾದ ಆದೇಶದ ಕಾರಣದಿಂದಾಗಿ ಈ ಕೃತಿಯನ್ನು ಆಮದು ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಸಂದೀಪನ್ ಖಾನ್ ಎಂಬುವವರು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು. ಆದರೆ, ಈ ನಿಷೇಧದ ಆದೇಶ ಯಾವುದೇ ಅಧಿಕೃತ ವೆಬ್ ತಾಣ ಇಲ್ಲವೇ ಅಧಿಕಾರಿಗಳ ಬಳಿ ಲಭ್ಯವಾಗಿಲ್ಲ ಎಂದೂ ಅವರು ಹೇಳಿದ್ದರು. ಈ ಬಗ್ಗೆ ವಿಚಾರಣೆ ನಡೆಸಿದ ಹೈಕೋರ್ಟ್, ಯಾವುದೇ ಪ್ರತಿವಾದಿಗಳು ನಿಷೇಧ ಹೇರಿದ ಅಧಿಸೂಚನೆಯನ್ನು ಹಾಜರುಪಡಿಸಲು ಸಾಧ್ಯವಾಗಿಲ್ಲ. ಹೀಗಾಗಿ ಇಂತಹ ಅಧಿಸೂಚನೆ ಇರಲೇ ಇಲ್ಲ ಎಂದು ಭಾವಿಸಬೇಕಾಗುತ್ತದೆ. ಹೀಗಾಗಿ ರಿಟ್ ಅರ್ಜಿಯನ್ನು ಇತ್ಯರ್ಥಪಡಿಸುತ್ತಿರುವುದಾಗಿ ತಿಳಿಸಿದೆ.

## ನಾಡಿದ್ದು ಕಬಡ್ಡಿ ಚಾಂಪಿಯನ್ ಶಿಪ್‌ಗೆ ಆಯ್ಕೆ

ದಾವಣಗೆರೆ, ನ. 7 - ಇದೇ ದಿನಾಂಕ 22 ರಿಂದ 24ರವರೆಗೆ ಕೋಲಾರ ಜಿಲ್ಲೆಯ ಬೈರೇಗೌಡ ನಗರದಲ್ಲಿ ನಡೆಯಲಿರುವ ಬಾಲಕರ ಹಾಗೂ ಬಾಲಕಿಯರ ಕರ್ನಾಟಕ ರಾಜ್ಯ ಕಬಡ್ಡಿ ಚಾಂಪಿಯನ್‌ಶಿಪ್‌ಗೆ ದಾವಣಗೆರೆ ಜಿಲ್ಲಾ ಕಬಡ್ಡಿ ತಂಡವನ್ನು ನಾಡಿದ್ದು ದಿನಾಂಕ 10 ರ ಭಾನುವಾರ 3 ಗಂಟೆಗೆ ನಗರದ ಸ್ಟೇಡಿಯಂನ ಒಳಾಂಗಣ ಕ್ರೀಡಾಂಗಣದಲ್ಲಿ ಜಿಲ್ಲಾ ಅಮೆಚೂರ್ ಕಬಡ್ಡಿ ಸಂಸ್ಥೆಯಿಂದ ಆಯ್ಕೆ ಪ್ರಕ್ರಿಯೆ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : ಮೊ. 63631 18501, 99720 49306.

# ಹಿಮಾಚಲ ಮುಖ್ಯಮಂತ್ರಿಗೆ ತಲುಪದ ತಿಂಡಿ ಪೊಟ್ಟಣ

## ತನಿಖೆ ನಡೆಸಿದ ಸಿ.ಐ.ಡಿ., ಸರ್ಕಾರ ವಿರೋಧಿ ಕೃತ್ಯ ಎಂದು ವರದಿ ಸಲ್ಲಿಕೆ

ಶಿಮ್ಲಾ, ನ. 7 - ಹಿಮಾಚಲ ಪ್ರದೇಶದ ಮುಖ್ಯಮಂತ್ರಿ ಸುಖವಿಂದರ್ ಸಿಂಗ್ ಸುಕ್ಕು ಅವರಿಗೆ ನೀಡಬೇಕಿದ್ದ ತಿಂಡಿ ಪೊಟ್ಟಣ ಅವರ ಬದಲಾಗಿ ಸಿಬ್ಬಂದಿಗೆ ತಲುಪಿದ ಬಗ್ಗೆ ಸಿಐಡಿ ತನಿಖೆ ನಡೆಸಲಾಗಿದೆ. ಮುಖ್ಯಮಂತ್ರಿಗೆ ತಿಂಡಿ ಸಿಗದಂತೆ ಮಾಡಿರುವುದು 'ಸರ್ಕಾರ ವಿರೋಧಿ ಕೃತ್ಯ' ಎಂದು ವರದಿ ನೀಡಲಾಗಿದೆ.

ಕಳೆದ ಅಕ್ಟೋಬರ್ 21ರಂದು ಸಿಐಡಿ ಕೇಂದ್ರ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಅವರಿಗಾಗಿ ಲಕ್ಕರ್ ಬಜಾರ್‌ನಲ್ಲಿರುವ ರಾಡಿಸನ್ ಬ್ಲೂ ಹೋಟೆಲ್‌ನಿಂದ ಸಮೋಸ ಹಾಗೂ ಕೇಕ್ ಹೊಂದಿರುವ ಮೂರು ಪಟ್ಟಣಗಳನ್ನು ತರಿಸಲಾಗಿತ್ತು.

ಆದರೆ ಈ ತಿಂಡಿ ಪೊಟ್ಟಣಗಳನ್ನು ಮುಖ್ಯಮಂತ್ರಿಗೆ ನೀಡುವ ಬದಲು ಅವರ ಭದ್ರತಾ ಸಿಬ್ಬಂದಿಗೆ ನೀಡಲಾಗಿತ್ತು ಎಂದು ಸಿ.ಐ.ಡಿ.ಯ ಎ.ಎಸ್.ಪಿ. ಹಂತದ ಅಧಿಕಾರಿ ನಡೆಸಿರುವ ತನಿಖೆಯಲ್ಲಿ ತಿಳಿಸಲಾಗಿದೆ.

ತಿಂಡಿ ಪೊಟ್ಟಣಗಳನ್ನು ಮುಖ್ಯಮಂತ್ರಿ ಸುಕ್ಕು ಅವರಿಗೆ ನೀಡದೇ ಇರುವುದು ಸಿಐಡಿ ವಿರೋಧಿ ಹಾಗೂ ಸರ್ಕಾರ ವಿರೋಧಿ ಕೃತ್ಯ ಎಂದು ವರದಿಯಲ್ಲಿ ಹೇಳಲಾಗಿದೆ.

ಸುಕ್ಕು ಭೇಟಿ ಹಿನ್ನೆಲೆಯಲ್ಲಿ ಹೋಟೆಲ್‌ನಿಂದ ಕೆಲ ತಿಂಡಿಗಳನ್ನು ತರುವಂತೆ ಐ.ಜಿ. ಹಂತದ ಅಧಿಕಾರಿಯೊಬ್ಬರು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಒಬ್ಬರಿಗೆ ತಿಳಿಸಿದ್ದರು. ನಂತರ ಸಬ್‌ಇನ್ಸ್‌ಪೆಕ್ಟರ್ ಈ ಕೆಲಸವನ್ನು ಸಹಾಯಕ ಸಬ್‌ಇನ್ಸ್‌ಪೆಕ್ಟರ್ ಹಾಗೂ ಮುಖ್ಯಪೇದೆಗೆ ವಹಿಸಿದ್ದರು.

ಇವರಿಬ್ಬರು ತೆರಳಿ ಮೊಹರು ಮಾಡಿದ ಮೂರು ಪೊಟ್ಟಣಗಳಲ್ಲಿ ತಿಂಡಿಯನ್ನು ತಂದು ಈ ಬಗ್ಗೆ ಇನ್ಸ್‌ಪೆಕ್ಟರ್‌ಗೆ ಮಾಹಿತಿ ನೀಡಿದ್ದರು. ಈ ತಿಂಡಿ ಪೊಟ್ಟಣಗಳನ್ನು ಮುಖ್ಯಮಂತ್ರಿಗೆ ಪೂರೈಸಬೇಕೇ ಎಂಬ ಬಗ್ಗೆ ಪೊಲೀಸ್ ಅಧಿಕಾರಿಗಳು ಪ್ರವಾಸೋದ್ಯಮ ಇಲಾಖೆಯ ಸಿಬ್ಬಂದಿಗೆ ಕೇಳಿದರು. ಆದರೆ ಮುಖ್ಯಮಂತ್ರಿಯ ಊಟದ ಪಟ್ಟಿಯಲ್ಲಿ ಈ ತಿಂಡಿ ಪೊಟ್ಟಣಗಳನ್ನು ಸೇರಿಸಿಲ್ಲ ಎಂದು ಪ್ರವಾಸೋದ್ಯಮ ಇಲಾಖೆಯ ಸಿಬ್ಬಂದಿ ತಿಳಿಸಿದರು.

ನಂತರ ಈ ತಿಂಡಿ ಪೊಟ್ಟಣಗಳನ್ನು ಮಹಿಳಾ ಇನ್ಸ್‌ಪೆಕ್ಟರ್ ಒಬ್ಬರಿಗೆ ಹಸ್ತಾಂತರಿಸಲಾಯಿತು. ಅವರು ಈ ಬಗ್ಗೆ ಹಿರಿಯ ಅಧಿಕಾರಿಗಳ ಜೊತೆ ಯಾವುದೇ ಚರ್ಚೆ ನಡೆಸದೆ, ತಿಂಡಿ ಪೊಟ್ಟಣಗಳನ್ನು ಮೆಕ್ಯಾನಿಕಲ್ ಟ್ರಾನ್ಸ್‌ಪೋರ್ಟ್ ವಿಭಾಗಕ್ಕೆ ವಹಿಸಿದರು.

ತಿಂಡಿ ಪೊಟ್ಟಣಗಳನ್ನು ಮುಖ್ಯಮಂತ್ರಿಗೆ ತಲುಪಿಸಬೇಕು ಎಂಬುದು ಸಬ್‌ಇನ್ಸ್ ಪೆಕ್ಟರ್, ಅಸಿಸ್ಟೆಂಟ್ ಸಬ್‌ಇನ್ಸ್‌ಪೆಕ್ಟರ್ ಹಾಗೂ ಮುಖ್ಯ ಪೇದೆ ಹೊರತುಪಡಿಸಿದರೆ, ಬೇರೆಯವರಿಗೆ ತಿಳಿದಿರಲಿಲ್ಲ. ಈ ವ್ಯಕ್ತಿಗಳು ಸಿಐಡಿ ವಿರೋಧಿ ಹಾಗೂ ಸರ್ಕಾರಿ ವಿರೋಧಿಯಾಗಿ ನಡೆದುಕೊಂಡಿದ್ದಾರೆ. ಇದರಿಂದಾಗಿ ಗಣ್ಯರಿಗೆ ತಿಂಡಿ ಪೊಟ್ಟಣಗಳನ್ನು ಪೂರೈಸಲು ಸಾಧ್ಯವಾಗಿಲ್ಲ. ಇವರು ತಮ್ಮ ಸ್ವಂತ ಅಜೆಂಡಾದಂತೆ ನಡೆದುಕೊಂಡಿದ್ದಾರೆ ಎಂದು ಸಿಐಡಿ ನಡೆಸಿದ ಇಲಾಖಾ ತನಿಖಾ ವರದಿಯಲ್ಲಿ ತಿಳಿಸಲಾಗಿದೆ.

# ಆಯೋಗಕ್ಕೆ ನಾಳೆಯೇ ನ್ಯಾಯಮೂರ್ತಿ ನೇಮಕ ಮಾದಿಗ ಸಮುದಾಯಕ್ಕೆ ಬೇಕಿಲ್ಲ ಆತಂಕ



ಚಿತ್ರದುರ್ಗ, ನ.7- ಆಂಜನೇಯ ನೀನ್ಯಾಕೆ ಚಿಂತೆ ಮಾಡ್ತಯಾ, ನನ್ನ ಮೇಲೆ ನಂಬಿಕೆ ಇಲ್ವಾ, ನನಗೆ ರಾಜಕಾರಣಕ್ಕಿಂತಲೂ ಸಾಮಾಜಿಕ ನ್ಯಾಯ ಮುಖ್ಯ. ನಿನಗೆ ಗೊತ್ತು ತಾನೇ? ಒಳಮೀಸಲಾತಿ ಜಾರಿಗೊಳಿಸಿಯೇ ಸಿದ್ಧ ಎಂದು ಸಿಎಂ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ ಎಂದು ಮಾಜಿ ಸಚಿವ ಎಚ್.ಆಂಜನೇಯ ತಿಳಿಸಿದ್ದಾರೆ.

ಸಂಡೂರು ವಿಧಾನಸಭಾ ಕ್ಷೇತ್ರದ ಚೋರನೂರು ಗ್ರಾಮದಲ್ಲಿ ಬುಧವಾರ ಆಯೋಜಿಸಿದ್ದ ಚುನಾವಣಾ ಪ್ರಚಾರ ಸಭೆಯಲ್ಲಿ ವಿಷಯ ಪ್ರಸ್ತಾಪಿಸಿದ ಸಂದರ್ಭ ಸಿಎಂ ಸಿದ್ದರಾಮಯ್ಯ ನನ್ನೊಂದಿಗೆ ಚರ್ಚೆ ನಡೆಸಿದ ವೇಳೆ ಈ ಭರವಸೆ ನೀಡಿದ್ದಾರೆ ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಆದಿಜಾಂಬವ ಸಮುದಾಯಕ್ಕೆ ಆತಂಕ ಬೇಕಿಲ್ಲ. ನಿನಗೂ ಅಷ್ಟೇ. ಒಳಮೀಸಲಾತಿ ಜಾರಿಗೊಳಿಸುವುದು ನನ್ನ ಬದ್ಧತೆ ಆಗಿದೆ. ಆದ್ದರಿಂದಲೇ ಒಳಮೀಸಲಾತಿ ಜಾರಿಗೊಳಿಸಿದ ಸಂದರ್ಭ ಯಾವುದೇ ರೀತಿ ಕಾನೂನು ತೊಡಕು ಆಗದ ರೀತಿ ಎಚ್ಚರಿಕೆ ಹೆಜ್ಜೆ ಇಡಲು ದಿಟ್ಟ ಕ್ರಮಕೈಗೊಂಡಿದ್ದೇನೆ ಎಂದು ಹೇಳಿದ್ದಾರೆ.

ಆದ್ದರಿಂದಲೇ ದತ್ತಾಂಶ ಪಡೆಯಲು ಆಯೋಗ ರಚಿಸಲು ಸಚಿವ ಸಂಪುಟದಲ್ಲಿ ಒಪ್ಪಿಗೆ ಪಡೆಯಲಾಗಿದೆ. ಆಯೋಗಕ್ಕೆ ನ್ಯಾಯಮೂರ್ತಿ ನೇಮಕ ವಿಳಂಬ ಆಗಿಲ್ಲ. ನಾಳೆಯೇ ನ್ಯಾಯಮೂರ್ತಿಯೊಬ್ಬರನ್ನು ಆಯೋಗದ ಅಧ್ಯಕ್ಷರನ್ನಾಗಿ ನೇಮಕ ಮಾಡುವೆ. ಈ ವಿಷಯದಲ್ಲಿ ಯಾಕಪ್ಪಾ ನಿನಗೆ ಆತಂಕ ಎಂದು ಪ್ರಶ್ನಿಸಿದರು ಎಂದು ಆಂಜನೇಯ ತಿಳಿಸಿದ್ದಾರೆ.

ಎಸ್‌ಸಿಎಸ್‌ಪಿ, ಟಿಎಸ್‌ಪಿ ಕಾಯ್ದೆ ಜಾರಿಗೆ ತಂದಿದ್ದು, ಕಾಮಗಾರಿ ಗುತ್ತಿಗೆಯಲ್ಲಿ ಎಸ್ಸಿ, ಎಸ್ಟಿಗೆ ಮೀಸಲಾತಿ ಜಾರಿಗೊಳಿಸಿದ್ದು ಯಾರು? ನಾನೇ ತಾನೇ. ಅದೇ ರೀತಿ ಒಳಮೀಸಲಾತಿಯನ್ನು ನಾನೇ ಜಾರಿಗೊಳಿಸುವೆ ಎಂದಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ರಾಜಕೀಯ ಕಾರಣಕ್ಕೆ, ಚುನಾವಣೆಯಲ್ಲಿ ಮತ ಗಳಿಕೆಗಾಗಿ ವಿಪಕ್ಷದವರು ನಮ್ಮ ಮೇಲೆ ಸುಳ್ಳು ಆರೋಪ ಮಾಡುತ್ತಾರೆ. ಅದಕ್ಕೆಲ್ಲ ಗಮನ ಕೊಡುವುದು ಬೇಡ. ನನ್ನ ಮತ್ತು ಕಾಂಗ್ರೆಸ್ ಆಡಳಿತದಲ್ಲಿ ಅಹಿಂದ ವರ್ಗಕ್ಕೆ ಸದಾ ಒಳಿತನ್ನೇ ಮಾಡಲಾಗಿದೆ. ಮುಂದೆಯೂ ಮಾಡುತ್ತೇವೆ. ಎಂತಹ ಷಡ್ಯಂತ್ರ ನಡೆಸಿದರೂ ನಾನು ಹಾಗೂ ನನ್ನ ಕಾಂಗ್ರೆಸ್ ಪಕ್ಷ ನೊಂದ ಜನರ ಪರ ಕಾನೂನು, ಯೋಜನೆ ರೂಪಿಸುವಲ್ಲಿ ಹೆಜ್ಜೆ ಹಿಂದಿಡುವುದಿಲ್ಲ. ಈಗಾಗಲೇ ಉದ್ಯೋಗ ನೇಮಕಾತಿಗೆ ತಡೆ ಹಾಕಿದ್ದೇವೆ. ಅದರರ್ಥ ನಾವು ಒಳಮೀಸಲಾತಿಯನ್ನು ಶೀಘ್ರ ಜಾರಿಗೊಳಿಸುವ ಬದ್ಧತೆ ಹೊಂದಿದ್ದೇವೆ ಎಂದರ್ಥ ಎಂದು ಚರ್ಚೆ ವೇಳೆ ಸಿದ್ದರಾಮಯ್ಯ ಅಭಯ ನೀಡಿದ್ದಾರೆ ಎಂದು ತಿಳಿಸಿದ್ದಾರೆ.

## ಮುಡಾ : 50-50 ನಿವೇಶನಗಳನ್ನು ರದ್ದು ಮಾಡಲು ನಿರ್ಧಾರ


ಮೈಸೂರು, ನ. 7 - 50:50 ಸೂತ್ರದಲ್ಲಿ ಹಂಚಿದ್ದ ನಿವೇಶನಗಳನ್ನು ರದ್ದು ಮಾಡಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಭೆಯಲ್ಲಿ ಒಮ್ಮತದ ನಿರ್ಣಯ ಕೈಗೊಳ್ಳಲಾಗಿದೆ. ಮುಡಾ ನಿವೇಶನ ಹಂಚಿಕೆ ಅಕ್ರಮ ಪ್ರಕರಣ ಬೆಳಕಿಗೆ ಬಂದ ಬಳಿಕ ಇದೇ ಮೊದಲ ಬಾರಿಗೆ ಸಭೆ ನಡೆಸಲಾಗಿತ್ತು. ಸಭೆಯಲ್ಲಿ 50-50 ಅನುಪಾತದಲ್ಲಿ ಹಂಚಿಕೆಯಾದ ಸೈಟುಗಳ ಜಪ್ತಿಗೆ ಸದಸ್ಯರು ಒಮ್ಮತದ ನಿರ್ಧಾರ ತೆಗೆದುಕೊಂಡಿದ್ದಾರೆ. ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಪಿ.ಎನ್.ದೇಸಾಯಿ ವರದಿ ಬಂದ ಬಳಿಕ ಜಪ್ತಿಯ ವರದಿ ಅಂಗೀಕರಿಸಲು ತೀರ್ಮಾನಿಸಲಾಗಿದೆ.

## ಬೇಸಿಗೆ : ಇನ್ನು 'ಭಾಗಶಃ ಕೆಲಸದ ದಿನಗಳ ನ್ಯಾಯಾಲಯ' : ಸುಪ್ರೀಂ ಕೋರ್ಟ್

ನವದೆಹಲಿ, ನ. 7 – ಬೇಸಿಗೆ ರಜೆಯನ್ನು ಇನ್ನು ಮುಂದೆ ನ್ಯಾಯಾಲಯಗಳು ಭಾಗಶಃ ಕಾರ್ಯನಿರ್ವಹಿಸುವ ದಿನಗಳೆಂದು ಮರು ನಾಮಕರಣಗೊಳಿಸಿ ಸುಪ್ರೀಂ ಕೋರ್ಟ್ ಆದೇಶಿಸಿದೆ.

ಸುಪ್ರೀಂ ಕೋರ್ಟ್ ದೀರ್ಘ ಕಾಲದ ರಜೆ ಪಡೆಯುತ್ತಿದೆ ಎಂಬ ದೂರುಗಳು ಕೇಳಿ ಬರುತ್ತಿರುವ ಹಿನ್ನೆಲೆಯಲ್ಲಿ ಈ ಬದಲಾವಣೆ ಪ್ರಾಮುಖ್ಯತೆ ಪಡೆದುಕೊಂಡಿದೆ. ಇದೇ ವೇಳೆ ರಜೆ ಅವಧಿಯ ನ್ಯಾಯಮೂರ್ತಿ ಎಂದು ಹೇಳುವ ಪದ್ಧತಿಯನ್ನೂ ಕೈ ಬಿಡಲಾಗಿದೆ.

## ನಗರದಲ್ಲಿ 3 ದಿನ ಆಭರಣ ಮೇಳ ನಗರಕ್ಕೆ ಇಂದು ಚಿತ್ರನಟಿ ಆರಾಧನಾ



ಎಸ್.ಎಸ್.ಕನ್ವೆನ್ಷನ್ ಹಾಲ್‌ನಲ್ಲಿ ಇಂದಿನಿಂದ ಮೂರು ದಿನಗಳ ಕಾಲ ಮದುವೆ ಮತ್ತು ಶುಭ ಕಾರ್ಯಗಳಿಗೆ ಮೆರಗು ನೀಡುವ ವಿನೂತನ ಆಭರಣ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಆಯೋಜಿಸಲಾಗಿದೆ.

ದೇಶದ 30 ಅಗ್ರ ಶ್ರೇಣಿಯ ಹೆಸರಾಂತ ಆಭರಣ ತಯಾರಕರು ಈ ಮೇಳದಲ್ಲಿ ಭಾಗವಹಿಸುತ್ತಿರುವುದು ವಿಶೇಷ. ಅಮೋಘವಾದ ಭಾರತೀಯ ಒಡವೆಗಳ ಈ ಉತ್ಸವವು ನಡೆಯಲಿದ್ದು, ಇಂದು ಮಧ್ಯಾಹ್ನ 12.30ಕ್ಕೆ ಜನಪ್ರಿಯ ನಟಿ ಆರಾಧನಾ ಮೇಳವನ್ನು ಉದ್ಘಾಟಿಸುವರು.

ಈ ಮೇಳವನ್ನು ಗೋಲ್ಡನ್ ಕ್ರೀಪರ್ ಸಂಸ್ಥೆಯ ಬಿ.ಎನ್.ಜಗದೀಶ್ ಮತ್ತು ಹೇಮಲತಾ ಜಗದೀಶ್ ಆಯೋಜಿಸಿದ್ದಾರೆ.

ಅಂತರರಾಷ್ಟ್ರೀಯ ಗುಣಮಟ್ಟದ ಚಿನ್ನಾಭರಣ ಮತ್ತು ವಜ್ರಾಭರಣಗಳ ಬಗ್ಗೆ ಇಲ್ಲಿ ಉಚಿತ ಮಾಹಿತಿ ಪಡೆಯುವುದರ ಜೊತೆಗೆ, ಖರೀದಿದಾರರು ಹಳೇ ಚಿನ್ನವನ್ನು ಬದಲಾಯಿಸಿಕೊಳ್ಳುವ ಅವಕಾಶವನ್ನು ಕಲ್ಪಿಸಲಾಗಿದೆ. ಮುಖ್ಯವಾಗಿ ಈ ಮೇಳದ ನಂತರವೂ ಗ್ರಾಹಕರಿಗೆ ಆಭರಣಗಳಿಗೆ ಸಂಬಂಧಿಸಿದ ಸೇವೆಗಳನ್ನು ಒದಗಿಸಲಾಗುವುದು ಎಂದು ಜಗದೀಶ್ ತಿಳಿಸಿದ್ದಾರೆ.

# ರಜತ ಮಹೋತ್ಸವದ ಹೊಸ್ತಿಲಲ್ಲಿ ಕರಾವಳಿ ಪತ್ತಿನ ಸಹಕಾರಿ ಸಂಘ

## ಕರಾವಳಿ ಸೌಹಾರ್ದ ಪತ್ತಿನ ಸಹಕಾರ ಸಂಘದ ಸರ್ವ ಸದಸ್ಯರ ಸಭೆಯಲ್ಲಿ ಸಂಘದ ಅಧ್ಯಕ್ಷ ಸಿಎ ಉಮೇಶ್ ಶೆಟ್ಟಿ



ದಾವಣಗೆರೆ, ನ.7- ವಿಶ್ವಾಸಾರ್ಹತೆಯ ಕ್ರೆಡಿಟ್ ಸೊಸೈಟಿ ಎಂದೇ ಸಾರ್ವಜನಿಕ ವಲಯದಲ್ಲಿ ಛಾಪು ಮೂಡಿಸಿರುವ ಕರಾವಳಿ ಸೌಹಾರ್ದ ಪತ್ತಿನ ಸಹಕಾರ ಸಂಘವು 25ನೇ ವರ್ಷದ ಬೆಳ್ಳಿ ಮಹೋತ್ಸವಕ್ಕೆ ಪಾದಾರ್ಪಣೆ ಮಾಡಿದೆ ಎಂದು ಹಿರಿಯ ಲೆಕ್ಕ ಪರಿಶೋಧಕರೂ ಆಗಿರುವ ಸಂಘದ ಅಧ್ಯಕ್ಷ ಸಿಎ ಉಮೇಶ್ ಶೆಟ್ಟಿ ಅವರು ತಿಳಿಸಿದ್ದಾರೆ.

ಇಲ್ಲಿನ ಡಾ. ಶಾಮಸುಂದರ ಶೆಟ್ಟಿ ಬಂಟರ ಭವನದಲ್ಲಿ ಕಳೆದ ವಾರ ಏರ್ಪಾಡಾಗಿದ್ದ ಕರಾವಳಿ ಸೌಹಾರ್ದ ಪತ್ತಿನ ಸಹಕಾರ ಸಂಘದ 24ನೇ ವರ್ಷದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಈ ಸಂಘದ ಬೆಳ್ಳಿ ಹಬ್ಬವನ್ನು ಸಹಕಾರಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವಿವಿಧ ಕಾರ್ಯಕ್ರಮಗಳನ್ನು ವರ್ಷಪೂರ್ತಿ ಆಚರಿಸುವುದಲ್ಲದೇ ಬೆಳ್ಳಿ ಮಹೋತ್ಸವ ಸಮಾರಂಭವನ್ನು ಅರ್ಥಪೂರ್ಣ ಮತ್ತು ವಿಜೃಂಭಣೆಯಿಂದ ಆಚರಿಸಲು ಸಂಘದ ಆಡಳಿತ ಮಂಡಳಿ ತೀರ್ಮಾನಿಸಿದೆ ಎಂದು ಅವರು ಹೇಳಿದರು.

ಕರಾವಳಿ ಪತ್ತಿನ ಸಹಕಾರಿಯು ಕಳೆದ 24 ವರ್ಷಗಳಿಂದ ಪ್ರಗತಿಯನ್ನು ಕಾಯ್ದುಕೊಂಡು ಬಂದಿದ್ದು, ಇದು ಸಂಘದ ಸದಸ್ಯರು, ಠೇವಣಿದಾರರು ಮತ್ತು ಸಾರ್ವಜನಿಕರ ವಿಶ್ವಾಸಾರ್ಹತೆಯ ಪ್ರತಿಬಿಂಬ ಎಂದು ಉಮೇಶ್ ಶೆಟ್ಟಿ ಅವರು ವಿಶ್ಲೇಷಿಸಿ, ಸಹಕರಿಸಿದ ಪ್ರತಿಯೊಬ್ಬರನ್ನೂ ಸ್ಮರಿಸಿ, ಕೃತಜ್ಞತೆ ಸಲ್ಲಿಸಿದರು.

ಸಂಘದ ಪ್ರಗತಿಯ ಚಿತ್ರಣವನ್ನು ಸಭೆಯ ಮುಂದಿಟ್ಟ ಸಂಘದ ಹಿರಿಯ ನಿರ್ದೇಶಕ ಸೀತಾರಾಮ ಶೆಟ್ಟಿ, 2024 ಮಾರ್ಚ್ ಅಂತ್ಯಕ್ಕೆ 3225 ಜನ ಸದಸ್ಯರುಗಳಿಂದ 54 ಲಕ್ಷ ರೂ. ಷೇರು ಬಂಡವಾಳ ಹೊಂದಿದ್ದು, 9 ಕೋಟಿ ರೂ. ಗಳಷ್ಟು ಸ್ವಂತ ನಿಧಿ ಸಂಘಕ್ಕಿದೆ. 21.10 ಕೋಟಿ ರೂ. ಠೇವಣಿ ಹೊಂದಿರುವ ಈ ಸಂಘವು, ಸದಸ್ಯರಿಗೆ ಅವರ ಅಗತ್ಯಗನುಗುಣವಾಗಿ 18 ಕೋಟಿ ರೂ.ಗಳಷ್ಟು ಸಾಲ-ಸೌಲಭ್ಯ ಒದಗಿಸಲಾಗಿದೆ ಎಂದು ತಿಳಿಸಿದರು.

ಕುಂದುವಾಡ ರಸ್ತೆಯಲ್ಲಿ ತನ್ನದೇ ಆದ ಸ್ವಂತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕರಾವಳಿ ಸಹಕಾರಿಯು 71 ಲಕ್ಷ ರೂ. ನಿವ್ವಳ ಲಾಭ ಗಳಿಸಿದ್ದು, ಷೇರುದಾರರಿಗೆ ಶೇ. 14ರಂತೆ ಲಾಭಾಂಶ ನೀಡಲು ಸಂಘದ ಆಡಳಿತ ಮಂಡಳಿ ತೀರ್ಮಾನ ಕೈಗೊಂಡಿದೆ ಎಂದು ಸಂಘದ ಸದಸ್ಯರ ಚಪ್ಪಾಳೆಗಳ ಮಧ್ಯೆ ಸೀತಾರಾಮ ಶೆಟ್ಟಿ ಘೋಷಿಸಿದರು.

ಕಳೆದ ಸಾಲಿನ ಮಹಾಸಭೆಯ ನಡಾವಳಿಗಳನ್ನು ಸಂಘದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಖಲೀಲ್ ಅಹ್ಮದ್ ಅವರು ಓದಿ ದಾಖಲು ಮಾಡಿದರು.

ಇದೇ ಸಂದರ್ಭದಲ್ಲಿ ಸಂಘದ ಸದಸ್ಯ ಪ್ರತಿಭಾನ್ವಿತರಾದ ಎಸ್ಸೆಸ್ಸೆಲ್ಸಿ-ಪಿಯುಸಿ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ಅಲ್ಲದೇ, ದೇಶ ರಕ್ಷಣೆಯಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿ, ನಿವೃತ್ತರಾಗಿರುವ ಮಾಜಿ ಸೈನಿಕರುಗಳಾದ ಶಶಿಕಾಂತ್ ಮತ್ತು ವಿನೋಬ ಪಾಟೀಲ್ ಅವರುಗಳನ್ನು ಶಾಲು ಹೊದಿಸುವುದರ ಮೂಲಕ ಗೌರವಿಸಲಾಯಿತು.

ಸಂಘದ ಉಪಾಧ್ಯಕ್ಷ ಮಹೇಶ್ ಆರ್. ಶೆಟ್ಟಿ ಮಾತನಾಡಿ, ಸಂಘದ ಆಡಳಿತ ಮಂಡಳಿ ಸದಸ್ಯರ ಶ್ರಮ, ಸಿಬ್ಬಂದಿ ವರ್ಗದವರ ಕಾರ್ಯಶೀಲತೆ, ಸದಸ್ಯರ ಮತ್ತು ಗ್ರಾಹಕರ ಪ್ರೋತ್ಸಾಹ, ಠೇವಣಿದಾರರ ವಿಶ್ವಾಸಾರ್ಹತೆ, ಸಾರ್ವಜನಿಕರ ನಂಬಿಕೆಯಿಂದಾಗಿ ಈ ಸಂಘವು ಅಭಿವೃದ್ಧಿಯತ್ತ ಸಾಗುತ್ತಿದೆ ಎಂದು ತಿಳಿಸಿ, ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದರು.


ಪರಿಶೋಧಿತ ಲೆಕ್ಕ ಪತ್ರವನ್ನು ಸಂಘದ ಉಪಾಧ್ಯಕ್ಷ ಮಹೇಶ್ ಆರ್. ಶೆಟ್ಟಿ ಓದಿದರು. ಸಂತೋಷ್ ಅವರ ಪ್ರಾರ್ಥನೆ ನಂತರ ಸಂಘದ ನಿರ್ದೇಶಕ ದಿನೇಶ್ ಕೆ. ಶೆಟ್ಟಿ ಸ್ವಾಗತಿಸಿದರು. ಡಾ. ನಿತೇಶ್ ರಾಜ್ ಶೆಟ್ಟಿ ವಂದಿಸಿದರು.

ಸಂಘದ ನಿರ್ದೇಶಕರುಗಳಾದ ರವೀಂದ್ರ ಎಸ್. ಶೆಟ್ಟಿ, ಡಾ. ಸುಬೋದ್ ಶೆಟ್ಟಿ, ಕೆ. ಮೋಹನ್ ದಾಸ್ ಶೆಟ್ಟಿ, ಶ್ರೀಮತಿ ಆಶಾ ಕುಶಾಲ್ ಶೆಟ್ಟಿ, ಶ್ರೀಮತಿ ವಿಮಲಾ ಎಸ್. ಶೆಟ್ಟಿ, ಹೆಚ್.ಎನ್. ವೆಂಕಟೇಶ್, ವಿಶೇಷ ಆಹ್ವಾನಿತರಾದ ಬಿ. ಸದಾಶಿವಶೆಟ್ಟಿ, ಅರುಣ್‌ಕುಮಾರ್ ಶೆಟ್ಟಿ, ಡಾ. ಸುರೇಶ್ ಶೆಟ್ಟಿ, ಎಂ. ಪ್ರಭಾಕರ್ ಶೆಟ್ಟಿ, ಕಿಶನ್ ಚಂದ್ರಶೆಟ್ಟಿ, ಹಿರಿಯ ಸಲಹೆಗಾರರಾದ ಎಸ್. ಸೀತಾರಾಮ ಶೆಟ್ಟಿ ಅವರುಗಳು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಸಂಘದ ಸಿಬ್ಬಂದಿ ವರ್ಗದವರಾದ ಲೆಕ್ಕಾಧಿಕಾರಿ ಶ್ರೀಮತಿ ಬಿ. ಮಮತಾ, ಲೆಕ್ಕ ಸಹಾಯಕರಾದ ಆಕಾಶ್ ಪೂಜಾರಿ ಮತ್ತು ಕಾವ್ಯಶ್ರೀ, ಸಹಾಯಕರುಗಳಾದ ಡಿ.ಪಿ. ಯೋಗೇಶ್, ಪಿ. ಮುರುಳಿ ಕಾರ್ತಿಕ್ ಅವರುಗಳು ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು.

ಪಿಗ್ಮಿ ಸಂಗ್ರಹಕಾರರಾದ ಹರೀಶ್ ಶೆಟ್ಟಿ, ಹೆಚ್. ಜಯಕರ ಶೆಟ್ಟಿ, ಸಿ. ವಾಮದೇವಯ್ಯ, ಜಿ.ಎಂ. ಭರಮಪ್ಪ, ಡಿ.ಪಿ. ರಮೇಶ್, ಡಿ.ಸಿ. ರಮೇಶ್, ಎ.ಎನ್. ಶಿವಕುಮಾರ್, ಅಮರಯ್ಯ ಹಿರೇಮಠ, ಕೆ ಆರೀಫುಲ್, ಬಿ. ಹನುಮೇಶ್ ಅವರುಗಳು ಕಾರ್ಯಕ್ರಮದ ವಿವಿಧ ಹಂತಗಳಲ್ಲಿ ಕಾರ್ಯ ನಿರ್ವಹಿಸಿದರು.


## ವೈಕುಂಠ ಸಮಾರಾಧನೆ ಕಾರ್ಯಕ್ರಮ



ಶ್ರೀಮತಿ ಪಾರ್ವತಿಬಾಯಿ ಹನುಮಂತರಾವ್ ಮತ್ತು ಮಕ್ಕಳು
ದಾವಣಗೆರೆ.
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 27.10.2024ರ ಭಾನುವಾರ ಬೆಳಗಿನ ಜಾವ 12.50ಕ್ಕೆ ನಮ್ಮ ಪೂಜ್ಯ ಪತಿಯವರಾದ
**ಶ್ರೀ ಎಂ. ಹನುಮಂತರಾವ್**
(ನಿವೃತ್ತ ಕೆಇಬಿ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್)
(88 ವರ್ಷ) ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**'ವೈಕುಂಠ ಸಮಾರಾಧನೆ ಕಾರ್ಯಕ್ರಮ'ವನ್ನು**
ದಿನಾಂಕ : 8.11.2024ರ ಶುಕ್ರವಾರ ಮಧ್ಯಾಹ್ನ 12.00 ಗಂಟೆಗೆ ದಾವಣಗೆರೆ # 577/2, 6ನೇ ಮೇನ್, 6ನೇ ಕ್ರಾಸ್, ಪಿಜೆ ಬಡಾವಣೆ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕೆಂದು ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ಪಾರ್ವತಿ ಬಾಯಿ ಮತ್ತು ಮಕ್ಕಳು
ಶ್ರೀಮತಿ ಚಂದ್ರಿಕ ಡಾ॥ ಹೆಚ್. ರವಿಕುಮಾರ್
Squadron Leader Indian air force
ಶ್ರೀಮತಿ ಪೂರ್ಣಿಮಾ ಹೆಚ್. ಶಶಿಕುಮಾರ್, ವಕೀಲರು, ದಾವಣಗೆರೆ.
ಶ್ರೀಮತಿ ಹೆಚ್. ಗಾಯತ್ರಿ ಬಾಯಿ ವಸಂತರಾವ್
ರಾಮಾಕಾಂತ್ ಟಾಕೀಸ್, ಮಂಗಳೂರು.
ಶ್ರೀಮತಿ ಹೆಚ್. ಹೇಮಾವತಿ ಬಾಲಕೃಷ್ಣ, ಗ್ರಾಫಿಕ್ ಡಿಸೈನರ್, ಬೆಂಗಳೂರು.
ಮೊಮ್ಮಕ್ಕಳು : ವಿ. ಹರೀಶ್‌ರಾವ್, ವಿ. ಜಿತೇಶ್‌ರಾವ್, ವಿ. ಯುಕ್ತಾರಾವ್, ಚಿರಾಗ್‌ಕುಮಾರ್, ಚೇತನ್‌ಕುಮಾರ್, ಪವನ್‌ಕುಮಾರ್, ಸನ್ನಿಧಿ, ಮರಿ ಮೊಮ್ಮಕ್ಕಳು : ರಿಷ್‌ರಾವ್, ರಿಯಾನ್‌ಷ್‌ರಾವ್, ತ್ರಿಷಾ
ದಾವಣಗೆರೆ. ಫೋ. : 97310 43757


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas